ಸಂಪುಟ: 04 ಸಂಚಿಕೆ: 100 ಪುಟಗಳು: 08 ಭಾನುವಾರ 23 ಜೂನ್ 2024 www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

ಮುಂಜಾನೆ ಮಾತು
ನಿಮ್ಮ ಪ್ರಯತ್ನವಿಲ್ಲದೆ ನೀವು ಯಶಸ್ವಿಗಳಾಗಲು ಸಾಧ್ಯವಿಲ್ಲ. ನಿಮ್ಮ ಸಂಪೂರ್ಣ ಪ್ರಯತ್ನ ನಿಮ್ಮ ಕೆಲಸದಲ್ಲಿದ್ದರೆ ನೀವು ವಿಫಲರಾಗಲು ಸಾಧ್ಯವಿಲ್ಲ

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ದರ್ಶನ್&ಗ್ಯಾಂಗ್‌ಗೆ ಜು.4ರವರೆಗೆ ನ್ಯಾಯಾಂಗ ಬಂಧನ..!

• ಉದಯವಾಹಿನಿ, ಬೆಂಗಳೂರು

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಸೇರಿ ನಾಲ್ವರು ಆರೋಪಿಗಳು ಜೈಲು ಪಾಲಾಗಿದ್ದು, ಜು.4 ರವರೆಗೆ ನ್ಯಾಯಾಂಗ ಬಂಧನ ವಿಧಿಸಿ ಬೆಂಗಳೂರಿನ 24 ನೇ ಎಸಿಎಂಎಂ ಕೋರ್ಟ್ ಆದೇಶ ಹೊರಡಿಸಿದೆ. ಪೊಲೀಸ್ ಕಸ್ಟಡಿ ಅಂತ್ಯವಾದ ಹಿನ್ನೆಲೆ ನಟ ದರ್ಶನ್ ಸೇರಿ ನಾಲ್ವರು ಆರೋಪಿಗಳನ್ನು ಪೊಲೀಸರು ಕೋರ್ಟ್‌ಗೆ ಹಾಜರುಪಡಿಸಿದ್ದರು. ವಿಚಾರಣೆ ನಡೆಸಿದ ಕೋರ್ಟ್ , ಜು.4 ರವರೆಗೆ 13 ದಿನ ನ್ಯಾಯಾಂಗ ಬಂಧನ ವಿಧಿಸಿ ಬೆಂಗಳೂರಿನ 24 ನೇ ಎಸಿಎಂಎಂ ಕೋರ್ಟ್ ಆದೇಶ ಹೊರಡಿಸಿದೆ.

ದಯವಿಟ್ಟು ಈ ವಿಷಯ ನನ್ನ ಬಳಿ ಚರ್ಚೆ ಮಾಡಬೇಡಿ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಮಾಜಿ ಸಂಸದ ಪ್ರಜ್ವಲ್ ರೇವಣ್ಣ ನಂತ್ರ, ಸೂರಜ್ ರೇವಣ್ಣ ವಿರುದ್ಧ ಅಸಹಜ ಲೈಂಗಿಕ ಕ್ರಿಯೆ ಆರೋಪದಲ್ಲಿ ಪ್ರಕರಣ ದಾಖಲಾಗಿದೆ. ಈ ಕುರಿತಂತೆ ಬೆಂಗಳೂರಿನ ಕೆಂಪೇಗೌಡ ಏರ್ಪೋರ್ಟ್ ಬಳಿಯಲ್ಲಿ ಸುದ್ದಿಗಾರರು ಕೇಳಿದಂತ ಪ್ರಶ್ನೆಗೆ ಗರಂ ಆದಂತ ಅವರು, ದಯವಿಟ್ಟು ಇಂತಹ ವಿಷಯಗಳನ್ನು ನನ್ನ ಬಳಿ ಚರ್ಚೆ ಮಾಡಬೇಡಿ. ಇದನ್ನು ಬಿಟ್ಟು ರಾಜ್ಯದ ಸಮಸ್ಯೆಗಳ ಬಗ್ಗೆ ಪ್ರಶ್ನಿಸಿ, ಚರ್ಚೆ ಮಾಡಿ ಅಂದರು. ಸೂರಜ್ ರೇವಣ್ಣ ಪ್ರಕರಣದ ಬಗ್ಗೆ ಕೇಳುವ ಅವಶ್ಯಕತೆ ಏನಿದೆ. ಅದಕ್ಕಾಗಿ ಕಾನೂನು ಇದೆ. ಅದರ ಅಡಿಯಲ್ಲಿ ಪೊಲೀಸರು ಕ್ರಮ ವಹಿಸಲಿದ್ದಾರೆ. ಯಾಕೆ ಪ್ರಕರಣ ಬರ್ತಿದೆ ಅನ್ನೋದು ಮುಂದಿನ ದಿನಗಳಲ್ಲಿ ನಿಮಗೆ ಗೊತ್ತಾಗಲಿದೆ. ಇನ್ಮುಂದೆ ನನ್ನ ಬಳಿ ಇಂತಹ ಪ್ರಶ್ನೆಗಳನ್ನು ಕೇಳಬೇಡಿ ಅಂತ ತಿಳಿಸಿದರು.

ಬಿ.ಎಸ್.ಯಡಿಯೂರಪ್ಪರನ್ನು ಹಾಡಿ ಹೊಗಳಿದ ಎಚ್‌ಡಿಕೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದಿದ್ದ ಎನ್ ಡಿಎ ಸಂಸದರಿಗೆ ಅಭಿನಂದನೆ ಸಮಾರಂಭದಲ್ಲಿ ಮಾತನಾಡಿದ ಕೇಂದ್ರ ಸಚಿವ, ಜೆಡಿಎಸ್ ನಾಯಕ ಎಚ್ ಡಿ ಕುಮಾರಸ್ವಾಮಿ, ಈ ಹಿಂದೆ ಬಿಜೆಪಿ ಜೊತೆಗೆ ರಾಜ್ಯದಲ್ಲಿ 20-20 ಸರ್ಕಾರ ಮಾಡಿದ್ದಕ್ಕೇ ನಾನು ಹೆಸರು ಗಳಿಸಿದೆ ಎಂದಿದ್ದಾರೆ. ಈ ಹಿಂದೆ ಅಂದಿನ 20-20 ಸರ್ಕಾರ ನನ್ನ ಜೀವನದ ದೊಡ್ಡ ತಪ್ಪು ಎನ್ನುತ್ತಿದ್ದಾರೆ. ಆದರೆ ಇದೀಗ ಬಿಜೆಪಿ ಜೊತೆಗೆ ಜೆಡಿಎಸ್ ಕೇಂದ್ರ ಮಟ್ಟದಲ್ಲಿ ಸಖ್ಯ ಬೆಳೆಸಿದ್ದು, ಇದೀಗ ಅಂದಿನ ಸರ್ಕಾರ ಮತ್ತು ಬಿಎಸ್ ಯಡಿಯೂರಪ್ಪ ಅವರನ್ನು ಕುಮಾರಸ್ವಾಮಿ ಹಾಡಿ ಹೊಗಳಿದ್ದಾರೆ. ಅರಮನೆ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಅಂದು ಬಿಎಸ್ ವೈ ಜೊತೆ ಸರ್ಕಾರ ರಚಿಸಿದ್ದಕ್ಕೇ ನನಗೆ ರಾಜ್ಯದಲ್ಲಿ ಕೊಂಚ ಹೆಸರು ಮಾಡಲು ಸಾಧ್ಯವಾಯಿತು ಎಂದರು. ಅಂದು ಅಧಿಕಾರ ಕೊಡಲು ಆಗದೇ ಇದ್ದಿದ್ದು ಕೆಲವರು ಮಾಡಿದ ಕುತಂತ್ರದಿಂದಾಗಿ, ನನ್ನ ತಪ್ಪು ಆಗಿರಲಿಲ್ಲ ಎಂದರು.

ಇಂದು ಜನ ಬಿಜೆಪಿ-ಜೆಡಿಎಸ್ ಒಂದಾಗಿರಬೇಕೆಂದು ಬಯಸಿದ್ದಾರೆ. ಇದು ನನ್ನ ಸ್ವಂತ ಇಚ್ಛೆ ಕೂಡಾ. 2018 ರಲ್ಲೂ ನಾನು ಬಿಜೆಪಿ ಜೊತೆ ಅಧಿಕಾರ ಮಾಡಬೇಕು ಎಂದುಕೊಂಡಿದ್ದೆ. ಸ್ಥಳೀಯ ಮಟ್ಟದಿಂದಲೇ ನಮ್ಮ ಎರಡೂ ಪಕ್ಷಗಳೂ ಹೊಂದಾಣಿಕೆಯಿಂದ ಕೆಲಸ ಮಾಡಿದರೆ ಕಾಂಗ್ರೇಸ್ ಮಟ್ಟ ಹಾಕಬಹುದು ಎಂದಿದ್ದಾರೆ.

ಅಜಿತ್ ಭಾರ್ತಿ ಪ್ರಕರಣ: ನಮ್ಮ ಪೊಲೀಸರು ತಪ್ಪೇನು ಮಾಡಿಲ್ಲ

• ಉದಯವಾಹಿನಿ, ಬೆಂಗಳೂರು

ಉತ್ತರ ಪ್ರದೇಶದಲ್ಲಿ ಕರ್ನಾಟಕ ಪೊಲೀಸರು ಪೇಚಿಗೆ ಸಿಲುಕಿದ ವಿಚಾರದಲ್ಲಿ ಸ್ವಲ್ಪ ಗೊಂದಲವಾಗಿದೆ, ಆದರೆ, ನಮ್ಮ ಪೊಲೀಸರು ತಪ್ಪೇನು ಮಾಡಿಲ್ಲ ಅಂತಾ ಗೃಹ ಸಚಿವ ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಅವರು, ಮಷ್ಟಿಯಲ್ಲಿ ಪೊಲೀಸ್ ಹೋಗಿದ್ದಾರೆ.ಆದರೆ, ಭೇಟಿಗೂ ಮುನ್ನ ಅಲ್ಲಿನ ಪೊಲೀಸ್‌ಗೆ ಮಾಹಿತಿ ನೀಡಬೇಕಿತ್ತು, ತಿಳಿಸದೇ ಹೋಗಿದ್ದಾರೆ. ಅಲ್ಲಿನ ಪೊಲೀಸ್ ಮೊದಲು ನೋಟಿಸ್ ಕೊಡಿ, ನಂತರ ನೋಡೋಣ ಎಂದಿದ್ದಾರೆ ಎಂದು ಸ್ಪಷ್ಟಪಡಿಸಿದರು. ಅಜಿತ್ ಭಾರ್ತಿ ಎಂಬ ಯುಟ್ಯೂಬರನ್ನು ಬಂಧಿಸಲು ರಾಜ್ಯದ ಪೊಲೀಸರು ಉತ್ತರಪ್ರದೇಶಕ್ಕೆ ಹೋಗಿದ್ದರು. ನೋಟಿಸ್ ಕೊಟ್ಟ ಮೇಲೆ ಆ ಯೂಟ್ಯೂಬರ್ ಬಾರದೇ ಹೋದರೆ ವಾರೆಂಟ್ ತೆಗೆದುಕೊಂಡು ಬಂಧಿಸುತ್ತಾರೆ. ಕೆಲವೊಮ್ಮೆ ಇಂತಹ ಗೊಂದಲ ಆಗುತ್ತದೆ. ನಮ್ಮ ಪೊಲೀಸರೇನು ತಪ್ಪು ಮಾಡಿಲ್ಲ ಎಂದು ಸಮರ್ಥಿಸಿಕೊಂಡರು.

ಕೇಂದ್ರ ಹೊಸ ಕಾನೂನು ಜಾರಿ ಪರೀಕ್ಷೆಗಳ ಸಮಗ್ರತೆಯ ಗುರಿ

ನೀಟ್, ಯುಜಿಸಿ ನೆಟ್ ಪರೀಕ್ಷೆಗಳಲ್ಲಿನ ಅವ್ಯವಹಾರ ಆರೋಪಗಳಿಗೆ ಸಂಬಂಧಿಸಿದಂತೆ ಭಾರಿ ವಿವಾದ ಸೃಷ್ಟಿಯಾಗಿರುವ ನಡುವೆಯೇ ಕೇಂದ್ರ ಸರ್ಕಾರವು ಸಾರ್ವಜನಿಕ ಪರೀಕ್ಷೆ (ಅಕ್ರಮ ತಡೆ) ಕಾಯ್ದೆ 2024 ಅನ್ನು ಜಾರಿಗೊಳಿಸಿದೆ. ದೇಶಾದ್ಯಂತ ಭಾರೀ ಚರ್ಚೆಗೆ ಗ್ರಾಸವಾಗಿರುವ ನೀಟ್ ಪ್ರವೇಶಾತಿ ಪರೀಕ್ಷೆ ಅಕ್ರಮದಿಂದ ಎಚ್ಚೆತ್ತುಕೊಂಡಿರುವ ಕೇಂದ್ರ ಸರ್ಕಾರ ಹೊಸ ಕಾನೂನು ಜಾರಿ ಮಾಡಿದ್ದು , ಇನ್ನು ಮುಂದೆ ಅಕ್ರಮಗಳಲ್ಲಿ ಭಾಗಿಯಾಗಿರುವವರಿಗೆ 10 ವರ್ಷ ಜೈಲು ಶಿಕ್ಷೆ, 1ಕೋಟಿ ದಂಡ ವಿಧಿಸುವ ಕಠಿಣ ಕಾನೂನು ಜಾರಿಗೆ ಬಂದಿದೆ.

10 ವರ್ಷ ಜೈಲು ಶಿಕ್ಷೆ

01 ಕೋಟಿ ದಂಡ



• ಉದಯವಾಹಿನಿ, ನವದೆಹಲಿ

ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳು ಮತ್ತು ಪಿಂಚಣಿ ಸಚಿವಾಲಯ ಹೊರಡಿಸಿರುವ ಅಧಿಸೂಚನೆ ಪ್ರಕಾರ, ಯುಪಿಎಸ್‌ಸಿ, ಎಸ್‌ಎಸ್‌ಸಿ, ನೀಟ್, ಜೆಇಇ, ಕ್ಯೂಇಟಿ ಸೇರಿದಂತೆ ಪ್ರವೇಶ ಪರೀಕ್ಷೆ, ಸ್ಪರ್ಧಾತಕ ಪರೀಕ್ಷೆಗಳಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಮಾಡುವುದು ಇಲ್ಲವೇ ಯಾವುದೇ ರೀತಿಯ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗುವವರ ವಿರುದ್ಧ ಅತ್ಯಂತ ಬಿಗಿಯಾದ ಶಿಕ್ಷೆ ವಿಧಿಸುವ ಅಂಶಗಳು ಇದರಲ್ಲಿವೆ. ಸ್ಪರ್ಧಾತಕ ಪರೀಕ್ಷೆಗಳಲ್ಲಿ ನಡೆಯುವ ಅಕ್ರಮಗಳನ್ನು ತಡೆಗಟ್ಟಲು ಕೇಂದ್ರದ ಶಿಕ್ಷಣ ಇಲಾಖೆ ಜೂ.21ರಿಂದಲೇ ಜಾರಿಗೆ ಬರುವಂತೆ ಸಾರ್ವಜನಿಕ ಪರೀಕ್ಷೆಗಳ(ಅನ್ಯಾಯ ವಿಧಾನಗಳ ತಡೆಗಟ್ಟುವಿಕೆ) ಕಾಯ್ದೆ 2024 ಜಾರಿಗೆ ಬಂದಿದ್ದು ಅಧಿಸೂಚನೆಯನ್ನು ಹೊರಡಿಸಲಾಗಿದೆ. ದೇಶಾದ್ಯಂತ ಇಂದಿನಿಂದಲೇ ಜಾರಿಯಾಗಿದ್ದು, ಪರೀಕ್ಷೆಗಳಲ್ಲಿ ವಂಚನೆ ತಡೆಯುವ ಮತ್ತು ಸಾರ್ವಜನಿಕ ಪರೀಕ್ಷೆಗಳ ಸಮಗ್ರತೆ ಎತ್ತಿಹಿಡಿಯುವ ಗುರಿ ಹೊಂದಿರುವ ಶಾಸನವಾಗಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

1 ನೀಟ್, ಯುಜಿಸಿ ನೆಟ್ ವಿವಾದಗಳ ನಡುವೆಯೇ ಪ್ರಶ್ನೆ ಪತ್ರಿಕೆ ಸೋರಿಕೆ ತಡೆಗೆ ಕಾನೂನು ಜಾರಿ

2 ಸಾರ್ವಜನಿಕ ಪರೀಕ್ಷೆ (ಅಕ್ರಮ ತಡೆ) ಕಾಯ್ದೆ 2024ಯನ್ನು ನೋಟಿಫೈಡ್ ಮಾಡಿದ ಕೇಂದ್ರ ಸರ್ಕಾರ

3 ಪರೀಕ್ಷಾ ಅಕ್ರಮಗಳಲ್ಲಿ ತೊಡಗಿದವರಿಗೆ 10 ವರ್ಷಗಳವರೆಗೂ ಜೈಲು ಶಿಕ್ಷೆ, 1 ಕೋಟಿ ರೂ ದಂಡ

ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪು ಪರೀಕ್ಷಾ ಪ್ರಾಧಿಕಾರ, ಸೇವಾ ಪೂರೈಕೆದಾರರು ಅಥವಾ ಯಾವುದೇ ಇತರ ಸಂಸ್ಥೆ ಸೇರಿ ಸಂಘಟಿತ ಅಪರಾಧವನ್ನು ಮಾಡಿದರೆ, ಅವರಿಗೆ ಐದು ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆಯನ್ನು ವಿಧಿಸಲಾಗುತ್ತದೆ ಮತ್ತು ದಂಡ 1 ಕೋಟಿಗಿಂತ ಕಡಿಮೆಯಿಲ್ಲ ಎಂದು ಕಾನೂನು ಹೇಳುತ್ತದೆ.

ಸಂಘಟಿತ ಪತ್ರಿಕೆ ಸೋರಿಕೆ ಅಪರಾಧದಲ್ಲಿ ಭಾಗಿಯಾಗಿರುವುದು ಕಂಡುಬಂದಿದೆ ಮತ್ತು ಪರೀಕ್ಷೆಯ ಪ್ರಮಾಣಾನುಗುಣವಾದ ವೆಚ್ಚವನ್ನು ಆದರಿಂದ ವಸೂಲಿ ಮಾಡಲಾಗುತ್ತದೆ. ಆದಾಗ್ಯೂ, ಈ ಕಾಯಿದೆಯು ಪರೀಕ್ಷೆಯಲ್ಲಿ ಕಾಣಿಸಿಕೊಳ್ಳುವ ಅಭ್ಯರ್ಥಿಗಳನ್ನು ದಂಡನೀಯ ನಿಬಂಧನೆಗಳಿಂದ ರಕ್ಷಿಸುತ್ತದೆ ಮತ್ತು ಪರೀಕ್ಷಾ ನಡೆಸುವ ಪ್ರಾಧಿಕಾರದ ಅಸ್ತಿತ್ವದಲ್ಲಿರುವ ಅನ್ಯಾಯದ ವಿಧಾನದ ನೀತಿಯ ನಿಬಂಧನೆಗಳ ಅಡಿಯಲ್ಲಿ ಅವರನ್ನು ನಿಯಂತ್ರಿಸಲಾಗುತ್ತದೆ.

ಪ್ರಶ್ನೆ ಪತ್ರಿಕೆಗಳು ಅಥವಾ ಉತ್ತರ ಕೀಗಳನ್ನು ಸೋರಿಕೆ ಮಾಡುವುದು, ಅನಧಿಕೃತ ಸಂವಹನದ ಮೂಲಕ ಅಭ್ಯರ್ಥಿಗಳಿಗೆ ಸಹಾಯ ಮಾಡುವುದು ಅಥವಾ ಪರಿಹಾರಗಳನ್ನು ಒದಗಿಸುವುದು, ಕಂಪ್ಯೂಟರ್ ನೆಟ್‌ವರ್ಕ್‌ಗಳು ಅಥವಾ ಸಂಪನೂಲಗಳನ್ನು ತಿದ್ದುವುದು, ಅಭ್ಯರ್ಥಿಗಳನ್ನು ಸೋಗು ಹಾಕುವುದು, ನಕಲಿ ಪರೀಕ್ಷೆಗಳನ್ನು ನಡೆಸುವುದು ಅಥವಾ ನಕಲಿ ದಾಖಲೆಗಳನ್ನು ನೀಡುವುದು ಮತ್ತು ಅರ್ಹತೆಗಾಗಿ ದಾಖಲೆಗಳನ್ನು ತಿದ್ದುವುದು ಕಾನೂನು ಅನ್ಯಾಯ ವಿಧಾನಗಳು ಎಂದು ವ್ಯಾಖ್ಯಾನಿಸುತ್ತದೆ. ಪ್ರಶ್ನೆ ಪತ್ರಿಕೆ ಸೋರಿಕೆಯಲ್ಲಿ ಭಾಗಿಯಾಗುವ ಆರೋಪಿಗಳಿಗೆ ಜಾಮೀನು ರಹಿತ ಕಾಯ್ದೆಗಳನ್ನು ವಿಧಿಸಲಾಗುತ್ತದೆ. ಪೊಲೀಸ್ ವರಿಷ್ಠಾಧಿಕಾರಿ ಇಲ್ಲವೇ ಪೊಲೀಸ್ ಆಯುಕ್ತ ಶ್ರೇಣಿಯ ಅಧಿಕಾರಿಯು ತನಿಖೆ ನಡೆಸಬೇಕು. ಕೇಂದ್ರ ಸರ್ಕಾರ ಸೂಚಿಸುವ ತನಿಖಾ ಸಂಸ್ಥೆಗಳಿಂದಲೇ ತನಿಖೆ ನಡೆಯುತ್ತದೆ. ಈ ಕಾಯಿದೆಯು ಯುಪಿಎಸ್‌ಸಿ, ಸ್ಟಾಫ್ ಸೆಲೆಕ್ಷನ್ ಕಮಿಷನ್, ರೈಲ್ವೇಸ್, ಬ್ಯಾಂಕಿಂಗ್ ನೇಮಕಾತಿ ಪರೀಕ್ಷೆಗಳು ಮತ್ತು ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ ನಡೆಸುವ ಎಲ್ಲಾ ಕಂಪ್ಯೂಟರ್ ಆಧಾರಿತ ಪರೀಕ್ಷೆಗಳನ್ನು ಒಳಗೊಂಡಿದೆ. ಮಸೂದೆಯ ಅನುಷ್ಠಾನದ ಬಗ್ಗೆ ಮಾಹಿತಿ ನೀಡಿದ ಕೇಂದ್ರ ಸಚಿವ ಗಿರಿರಾಜ್ ಸಿಂಗ್, ಸಾರ್ವಜನಿಕ ಪರೀಕ್ಷೆಗಳ (ಅನ್ಯಾಯ ವಿಧಾನಗಳ ತಡೆಗಟ್ಟುವಿಕೆ) ಕಾಯಿದೆ, 2024- ಕೇಂದ್ರ ನೇಮಕಾತಿ ಮತ್ತು ಕೇಂದ್ರ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಕ್ಕಾಗಿ ಪರೀಕ್ಷೆಗಳಿಗೆ ಪ್ರಶ್ನೆಪತ್ರಿಕೆ ಸೋರಿಕೆ ವಿರೋಧಿ ಕಾನೂನು ಜಾರಿಗೆ ಬಂದಿದೆ ಎಂದು ತಿಳಿಸಿದ್ದಾರೆ. ಕಳೆದ ಫೆ.9ರಂದು ಸಂಸತ್‌ನ ಉಭಯ ಸದನಗಳಾದ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಈ ಮಸೂದೆಯನ್ನು ಅಂಗೀಕರಿಸಲಾಗಿತ್ತು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಸೂದೆಗೆ ಸಹಿ ಹಾಕಿರುವುದರಿಂದ ಕಾನೂನಾಗಿ ಮಾರ್ಪಟ್ಟಿದೆ.

ಪರೀಕ್ಷಾ ಅಕ್ರಮ ಎಂದರೇನು

ಪರೀಕ್ಷಾ ಅಕ್ರಮ'ವನ್ನು ಪ್ರಶ್ನೆ ಪತ್ರಿಕೆಗಳು ಅಥವಾ ಪ್ರಮುಖ ಉತ್ತರಗಳ ಸೋರಿಕೆ ಎಂದು ಕಾನೂನು ವ್ಯಾಖ್ಯಾನಿಸಿದೆ. ಪರೀಕ್ಷೆ ಸಂದರ್ಭದಲ್ಲಿ ಅನಧಿಕೃತ ಸಂವಹನ ಅಥವಾ ಪರಿಹಾರಗಳನ್ನು ಒದಗಿಸುವುದು, ಕಂಪ್ಯೂಟರ್ ನೆಟ್‌ವರ್ಕ್ ಅಥವಾ ಸಂಪನ್ಮೂಲಗಳನ್ನು ತಿರುಚುವುದು, ಅಭ್ಯರ್ಥಿಗಳ ಸೋಗಿನಲ್ಲಿ ಹಾಜರಾಗುವುದು, ನಕಲಿ ಪರೀಕ್ಷೆಗಳನ್ನು ನಡೆಸುವುದು ಅಥವಾ ನಕಲಿ ದಾಖಲೆಗಳನ್ನು ವಿತರಿಸುವುದು ಹಾಗೂ ಮೆರಿಟ್ ಪಟ್ಟಿ ಅಥವಾ ರಾಂಕ್‌ಗಳಿಗಾಗಿ ದಾಖಲೆಗಳನ್ನು ತಿರುಚುವಂತಹ ಕೃತ್ಯಗಳ ಮೂಲಕ ಅಭ್ಯರ್ಥಿಗಳಿಗೆ ನೆರವಾಗುವುದು ಇದರ ವ್ಯಾಖ್ಯಾನದಡಿ ಬರುತ್ತದೆ.

ಜೈಲು ಶಿಕ್ಷೆ ಹಾಗೂ ದಂಡ

ಸಂಸತ್‌ನಲ್ಲಿ ವಿಧೇಯಕ ಅಂಗೀಕಾರಗೊಂಡು ಕಾನೂನು ರೂಪ ಪಡೆದಿತ್ತು. ಪರೀಕ್ಷಾ ವಂಚನೆಗಳಲ್ಲಿ ಭಾಗಿಯಾಗುವವರಿಗೆ ಇದರ ಅಡಿಯಲ್ಲಿ ಕನಿಷ್ಠ ಮೂರರಿಂದ ಐದು ವರ್ಷಗಳವರೆಗೆ ಜೈಲು ಶಿಕ್ಷೆಯನ್ನು ಪ್ರಸ್ತಾಪಿಸಲಾಗಿದೆ. ಇನ್ನು ವಂಚನೆಯ ಸಂಘಟಿತ ಅಪರಾಧಗಳಲ್ಲಿ ಭಾಗಿಯಾಗುವವರಿಗೆ 5- 10 ವರ್ಷ ಜೈಲು ಶಿಕ್ಷೆ ಮತ್ತು ಕನಿಷ್ಠ 1 ಕೋಟಿ ರೂ ದಂಡ ವಿಧಿಸಲಾಗುತ್ತದೆ. ಪರೀಕ್ಷಾ ಅಧಿಕಾರಿ, ಸೇವಾ ಪೂರೈಕೆದಾರ ಅಥವಾ ಯಾವುದೇ ಇತರೆ ಸಂಸ್ಥೆ ಸೇರಿದಂತೆ, ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪು ಸಂಘಟಿತ ಅಪರಾಧವನ್ನು ಎಸಗಿದರೆ, ಅವರನ್ನು ಐದು ವರ್ಷಕ್ಕೆ ಕಡಿಮೆ ಇಲ್ಲದಂತೆ ಸೆರೆವಾಸಕ್ಕೆ ಗುರಿಪಡಿಸಲಾಗುತ್ತದೆ. ಈ ಶಿಕ್ಷೆಯನ್ನು 10 ವರ್ಷಗಳವರೆಗೂ ವಿಸ್ತರಿಸಲು ಅವಕಾಶವಿದೆ. ಹಾಗೆಯೇ 1 ಕೋಟಿ ರೂ.ಗೆ ಕಡಿಮೆ ಇಲ್ಲದಂತೆ ದಂಡ ವಿಧಿಸಲಾಗುತ್ತದೆ ಎಂದು ಕಾನೂನು ಹೇಳಿದೆ.

ಪ್ರದೀಪ್ ಈಶ್ವರ್‌ನ ಮೊದಲ ಬಾರಿಗೆ ನೋಡಿ ಯಾರೋ ಹುಚ್ಚ ಅನ್ಕೊಂಡಿದ್ದೆ

• ಉದಯವಾಹಿನಿ, ಬೆಂಗಳೂರು

ಪ್ರದೀಪ್ ಈಶ್ವರ್ ಅವರನ್ನು ಶಾಸಕರಾಗಿ ಆಯ್ಕೆ ಮಾಡಿದ್ದೀರಿ. ಅವರ ಮಾತು, ಆಚಾರ ವಿಚಾರ ಪ್ರಚಾರ ಮಾಡಿ ವಿಧಾನಸೌಧಕ್ಕೆ ಬಂದಿದ್ದಾರೆ. ಶಿವಶಂಕರ್ ಅವರು ಪ್ರದೀಪ್ ಈಶ್ವರ್ ಅವರನ್ನು ನನ್ನ ಬಳಿ ಕರೆದುಕೊಂಡು ಬಂದಾಗ, ಯಾರೋ ಹುಚ್ಚನನ್ನು ಕರೆದುಕೊಂಡು ಬಂದಿದ್ದೀರಿ ಎಂದಿದ್ದೆ ಎಂದು ಡಿ ಕೆ ಶಿವಕುಮಾರ್ ಹೇಳಿದರು. ಈ ಸಂದರ್ಭದಲ್ಲಿ ಶಿವಶಂಕರ್ ಅವರು ಇಲ್ಲ ಈತ ಉಪಯೋಗಕ್ಕೆ ಬರುತ್ತಾರೆ, ಒಂದು ಅವಕಾಶ ನೀಡಿ ಎಂದರು. ಅವರು ಈಗ ರಾಜ್ಯದಲ್ಲೇ ಹೊಸ ಇತಿಹಾಸ ಸೃಷ್ಟಿ ಮಾಡಿ ಶಾಸಕನಾಗಿದ್ದಾರೆ. ವಿಧಾನಸಭೆಯಲ್ಲೂ ತಮ್ಮ ಆಚಾರ, ವಿಚಾರ ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರು ತಿಳಿಸಿದ್ದಾರೆ.

ಟಿಕೆಟ್ ಯಾರಿಗೇ ಸಿಗಲಿ, ನಾನೇ ಅಭ್ಯರ್ಥಿ

ಚನ್ನಪಟ್ಟಣ ನನ್ನ ಏರಿಯಾ. ಅಲ್ಲಿನ ಮತದಾರರು ನನ್ನ ಮುಖ ನೋಡಿ ವೋಟು ಹಾಕುತ್ತಾರೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು. ಚನ್ನ ಪಟ್ಟಣ ಉಪ ಚುನಾವಣೆಯಲ್ಲಿ ಕಾಂಗ್ರೇಸ್‌ನಿಂದ ನಾನೇ ಅಭ್ಯರ್ಥಿಯಾಗಲಿ ಅಥವಾ ಯಾರೇ ಅಭ್ಯರ್ಥಿಯಾಗಲಿ ಮತದಾರರು ನನ್ನ ಮುಖ ನೋಡಿಯೇ ವೋಟು ಹಾಕುತ್ತಾರೆ.ಒಂದರ್ಥದಲ್ಲಿ ನಾನೇ ಅಲ್ಲಿನ ಅಭ್ಯರ್ಥಿ ಎಂದರು. ಕರ್ನಾಟಕದ ಜನ ನಮ್ಮ ಪರವಾಗಿದ್ದಾರೆ ಎಂದು ಮಾರ್ಮಿಕವಾಗಿ ನುಡಿದರು.

ಒಬ್ಬ ವ್ಯಕ್ತಿ ಹಿಂದೆ ಎಷ್ಟು ಜನ ಇರುತ್ತಾರೆ ಎಂಬುದಕ್ಕಿಂತ ಒಬ್ಬ ವ್ಯಕ್ತಿ ಎಷ್ಟು ಜನ ನಾಯಕರನ್ನು ತಯಾರು ಮಾಡುತ್ತಾರೆ ಎಂಬುದು ಮುಖ್ಯ. ನಾಯಕರು ಎಂದರೆ ರಾಜಕಾರಣಿ ಮಾತ್ರವಲ್ಲ. ಎಲ್ಲಾ ವರ್ಗದಲ್ಲಿ ನಾಯಕತ್ವಗುಣ ಇರುವವರು. ಇಲ್ಲಿ ಅನೇಕ ವಿದ್ಯಾರ್ಥಿಗಳಿದ್ದೀರಿ. ಕೂಲಿ ಮಾಡುವವರು, ಚಾಲಕರ ಮಕ್ಕಳಿಗೂ ಇಂದು ನಾವು ಸನ್ಮಾನ ಮಾಡಿದ್ದೇವೆ. ಆ ಪೋಷಕರಿಗೆ ಇದಕ್ಕಿಂತ ಇನ್ನೇನು ಬೇಕು ಹೇಳಿ. ನಾನು ಇಂದು ಉಪಮುಖ್ಯ ಮಂತ್ರಿಯಾಗಿರಬಹುದು. ಆದರೆ ಒಂದು ಕಾಲದಲ್ಲಿ ನಾನು ಪದವೀಧರ ಆಗಲಿಲ್ಲ ಎಂಬ ಕೊರಗು ಇತ್ತು.

ನಾನು ಮಂತ್ರಿಯಾದ ನಂತರ 48 ನೇ ವಯಸ್ಸಿನಲ್ಲಿ ಪರೀಕ್ಷೆ ಬರೆದು ಪದವೀಧರನಾದೆ. ವಿಧಾನಸೌಧದ ಮುಂದೆ ಸಚಿವ ಸಂಪುಟ ಸಭೆಯಲ್ಲಿ ಮಂತ್ರಿಯಾಗಿದ್ದಕ್ಕಿಂತ ಮೈಸೂರಿನಲ್ಲಿ ಪದವೀಧರನಾಗಿ ಪ್ರಮಾಣಪತ್ರ ಪಡೆದಾಗ ಹೆಚ್ಚು ಸಂತೋಷವಾಯಿತು.

ವಾ

ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

ಶ್ರವಣಾದಿಯಿಂದೆ ಶಬ್ದಾದಿ ಗೋಚರಿಸಿದವು

ನಿಜಗುಣರ ಪರಮಾನುಭವ ಬೋಧೆಯ ಮಾತು. ಅಜ್ಞಾನದಿಂದಾಗಿ ಅಹಂಕಾರ ತೋರುತ್ತದೆ. ಪರಮ ಸತ್ಯದ ಅರಿವು ಮೂಡಿದರೆ ಅಹಂಕಾರ ಅಳಿಯುತ್ತದೆ. ಉದಾಹರಣೆಗೆ ಸತ್ತವರನ್ನು ಕಂಡಾಗ ಅಲ್ಲಿ ಸೇರಿದಾಗ ಜಗದ ನಶ್ವರತೆಭಾವ ಮೂಡಿ ಮೇಲು ಕೀಳು ಎಂಬಿತ್ಯಾದಿ ಭೇದ ನಾನು ಅಂಥವ ಇಂಥವ ಎಂಬಿತ್ಯಾದಿ ಅಹಂಕಾರ ಅಳಿದು ಸುಳಿಯದು. ಹೆಚ್ಚು ತಿಳಿದವನು ಅಹಂಕಾರ ತೊರೆದಿರುತ್ತಾನೆ. ಉದಾಹರಣೆಗೆ ವಿಜಯಪುರದ ಸಿದ್ಧೇಶ್ವರ ಸ್ವಾಮಿಗಳು. ತಪ್ಪು ತಿಳುವಳಿಕೆಯಿಂದಾಗಿಯೇ ಕಿವಿಗೆ ಶಬ್ದ ಕಣ್ಣಿಗೆ ರೂಪ ಮೂಗಿಗೆ ವಾಸನೆ ನಾಲಿಗೆಗೆ ರುಚಿ ಚರ್ಮಕ್ಕೆ ಸ್ಪರ್ಶ ಎಂಬ ಐದು ವಿಷಯಗಳು ಗೋಚರಿಸುತ್ತವೆ. ನೀರಿನಿಂದ ತೋರುವ ನೊರೆ ತೆರೆ ಸುಳಿಗಳು ನಿಜ ಎನಿಸಿದರೂ ವಾಸ್ತವದಲ್ಲಿ ಅವೆಲ್ಲ ನೀರಿಗಿಂತ ಬೇರೆಯಲ್ಲವಾದ್ದರಿಂದ ಅವು ತಪ್ಪು ತಿಳುವಳಿಕೆಯ ತೋರಿಕೆಗಳು. ಅದರಂತೆ ಈ ಎಲ್ಲ ವಿಷಯಾದಿಗಳು. ಒಂದೊಂದು ವಿಷಯಕ್ಕೆ ಆಶ್ರಯ ಒಂದೊಂದು ಭೂತ. ಅವೇ ಶಬ್ದಕ್ಕೆ ಆಕಾಶ ಸ್ಪರ್ಶಕ್ಕೆ ವಾಯು ರೂಪಕ್ಕೆ ಅಗ್ನಿ ರಸಕ್ಕೆ ಜಲ ಗಂಧಕ್ಕೆ ಭೂಮಿ.

ಸೂರಜ್ ರೇವಣ್ಣ ವಿರುದ್ಧ ಅಧಿಕೃತವಾಗಿ ದೂರು ದಾಖಲಾಗಿಲ್ಲ

■ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಹೇಳಿಕೆ ■ ಅಧಿಕೃತ ದೂರು ಬಂದಮೇಲೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಚರ್ಚೆ

• ಉದಯವಾಹಿನಿ, ಬೆಂಗಳೂರು

ಜೆಡಿಎಸ್ ಎಂಎಲ್‌ಸಿ ಸೂರಜ್ ರೇವಣ್ಣ ವಿರುದ್ಧ ಕೇಳಿಬಂದಿರುವ ಸಲಿಂಗ ಕಾಮ, ಅಸಹಜ ಲೈಂಗಿಕ ದೌರ್ಜನ್ಯ ಆರೋಪ ಬಗ್ಗೆ ತಮಗೆ ಇದುವರೆಗೆ ಅಧಿಕೃತವಾಗಿ ದೂರು ಬಂದಿಲ್ಲ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ತಿಳಿಸಿದ್ದಾರೆ. ಬೆಂಗಳೂರಿನಲ್ಲಿಂದು ಮಾತನಾಡಿದ ಅವರು, ಸೂರಜ್ ವಿರುದ್ಧ ಕೇಳಿ ಬಂದಿರುವ ಆರೋಪಕ್ಕೆ ಸಂಬಂಧಪಟ್ಟ ಹಾಸನದಲ್ಲಾಗಲಿ, ಬೆಂಗಳೂರಿನಲ್ಲಾಗಲಿ ಇನ್ನೂ ದೂರು ದಾಖಲಾಗಿಲ್ಲ.ಈ ಕುರಿತು ಮಾಧ್ಯಮಗಳಲ್ಲಿ ನೋಡಿದ್ದೇನೆ ಎಂದರು.

ನಮಗೆ ಯಾರೂ ಅಧಿಕೃತ ದೂರು ನೀಡಿಲ್ಲ. ದೂರು ಬಂದ ಕೂಡಲೇ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಗೃಹ ಸಚಿವರಿಗೆ ಪತ್ರ ಬರೆದಿದ್ದಾರೆ ಎಂದು ವರದಿಗಳಲ್ಲಿ ಉಲ್ಲೇಖಿಸಲಾಗಿದೆ. ಆದರೆ ನನಗೆ ಯಾವುದೇ ಪತ್ರ ಬಂದಿಲ್ಲ. ಪ್ರಕರಣ ಏನು ಎಂಬುದಾಗಿ ತಿಳಿದುಕೊಂಡು ನಾವು ತನಿಖೆ ಮಾಡುತ್ತೇವೆ. ತನಿಖೆಯನ್ನು ಸಿಐಡಿಗೆ ಕೊಡುವ ಮುನ್ನ ನೈಜತೆ ತಿಳಿದುಕೊಳ್ಳುತ್ತೇವೆ. ಅಧಿಕೃತ ದೂರು ಬಂದಮೇಲೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸುತ್ತೇವೆ ಎಂದರು.

ಉದಯವಾಹಿನಿ ಚಿತ್ರ

ಲೈಂಗಿಕ ದೌರ್ಜನ್ಯ ಆರೋಪ

ಸೂರಜ್ ರೇವಣ್ಣ ಅವರು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರ ಮೊಮ್ಮಗ ಮತ್ತು ಸೆಕ್ಸ್ ವಿಡಿಯೋ ಹಗರಣದ ಪ್ರಮುಖ ಆರೋಪಿ ಪ್ರಜ್ವಲ್ ರೇವಣ್ಣ ಅವರ ಸಹೋದರ.

ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ಈ ಬೆಳವಣಿಗೆಯ ಬಗ್ಗೆ ಪ್ರತಿಕ್ರಿಯಿಸಿ, ಘಟನೆಯ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸಬೇಕು. ಯಾರೇ ಆಗಿರಲಿ, ತಪ್ಪು ಮಾಡಿದ್ದರೆ ಶಿಕ್ಷೆ ಅನುಭವಿಸಲೇಬೇಕು. ಪ್ರಜ್ವಲ್ ರೇವಣ್ಣ ಆಗಲಿ, ಸೂರಜ್ ರೇವಣ್ಣ ಆಗಲಿ ತಪ್ಪು ಮಾಡಿದ್ದರೆ ಶಿಕ್ಷೆ ಅನುಭವಿಸುತ್ತಾರೆ ಎಂದರು. ಸೂರಜ್ ರೇವಣ್ಣ ಅವರ ಚಿಕ್ಕಪ್ಪ, ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಹೆಚ್.ಡಿ. ಕುಮಾರಸ್ವಾಮಿ, ಸೂರಜ್ ರೇವಣ್ಣ ವಿರುದ್ಧದ ಆರೋಪದ ಬಗ್ಗೆ ನನ್ನೊಂದಿಗೆ ಮಾತನಾಡಬೇಡಿ ಎಂದರು. ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕುಮಾರಸ್ವಾಮಿ, ಈ ವಿಷಯದ ಬಗ್ಗೆ ನನ್ನಲ್ಲಿ ಕೇಳಬೇಡಿ ಎಂದು ಸಿಟ್ಟಿನಿಂದಲೇ ಪ್ರತಿಕ್ರಿಯಿಸಿದರು. ನೀವು ರಾಜ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸುತ್ತೀರಿ. ಈ ವಿಚಾರದಲ್ಲಿ ನಾನು ಪ್ರತಿಕ್ರಿಯಿಸುವ ಅಗತ್ಯವಿಲ್ಲ, ಕಾನೂನು ಅದನ್ನು ನೋಡಿಕೊಳ್ಳುತ್ತದೆ. ಈ ದೂರುಗಳು ಏಕೆ ದಾಖಲಾಗಿವೆ ಎಂಬುದು ಮುಂದಿನ ದಿನಗಳಲ್ಲಿ ತಿಳಿಯಲಿದೆ ಎಂದರು. ಜೆಡಿಎಸ್‌ನ ಹಿರಿಯ ಮುಖಂಡ ಬಂಡೆಪ್ಪ ಕಾಶೆಂಪೂರ್, ಯಾರೇ ತಪ್ಪು ಮಾಡಿದರೂ ಕಾನೂನು ಪ್ರಕಾರ ಶಿಕ್ಷೆ ಅನುಭವಿಸಬೇಕಾಗುತ್ತದೆ. ಪ್ರಜ್ವಲ್ ರೇವಣ್ಣ ವಿರುದ್ಧ ಪಕ್ಷ ಕ್ರಮ ಕೈಗೊಂಡಿತ್ತು. ಲೋಕಸಭೆ ಚುನಾವಣೆಗೂ ಮುನ್ನ ಪ್ರಜ್ವಲ್ ರೇವಣ್ಣ ಅವರ ವಿಡಿಯೋಗಳು ಹರಿದಾಡಿದ್ದವು. ಈಗ ಸೂರಜ್ ರೇವಣ್ಣ ವಿರುದ್ಧ ಆರೋಪ ಮಾಡುತ್ತಿದ್ದಾರೆ ಎಂದರು.

> ಹಾಸನ ಜಿಲ್ಲೆಯ ಅರಕಲಗೂಡು ಪಟ್ಟಣದ ಜೆಡಿಎಸ್ ಕಾರ್ಯಕರ್ತ ಸೂರಜ್ ರೇವಣ್ಣ ಲೈಂಗಿಕ ದೌರ್ಜನ್ಯದ ಆರೋಪ ಮಾಡಿದ್ದಾರೆ.ಈ ಬೆಳವಣಿಗೆಯ ನಂತರ ಸೂರಜ್ ರೇವಣ್ಣ ಅವರ ಸಹಾಯಕ ಶಿವಕುಮಾರ್ ಹೊಳೆನರಸೀಪುರ ಪೊಲೀಸ್ ಠಾಣೆಯಲ್ಲಿ ಸಂತ್ರಸ್ತ ಮತ್ತು ಸಂಬಂಧಿಕರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಹಣ ವಸೂಲಿ ಮಾಡಲು ಸೂರಜ್ ರೇವಣ್ಣ ವಿರುದ್ಧ ಸುಳ್ಳು ಆರೋಪ ಮಾಡಲಾಗಿದೆ ಎಂದು ಶಿವಕುಮಾರ್ ದೂರಿನಲ್ಲಿ ತಿಳಿಸಿದ್ದಾರೆ.

> ದೇಶದಲ್ಲಿ ಕಾನೂನು ಇದ್ದು, ಘಟನೆಯಲ್ಲಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ. ಪ್ರಕರಣದಲ್ಲಿ ಮಾಧ್ಯಮ ವರದಿಗಳನ್ನು ಆಧರಿಸಿ ನಾನು ಪ್ರತಿಕ್ರಿಯೆ ನೀಡಲು ಸಾಧ್ಯವಿಲ್ಲ ಎಂದರು.
–ಡಾ ಪರಮೇಶ್ವರ್

ನಿರ್ದೇಶಕ ಟಿ.ಎಸ್. ನಾಗಾಭರಣ ವಿರುದ್ಧ ದೂರು ದಾಖಲು!

• ಉದಯವಾಹಿನಿ, ಬೆಂಗಳೂರು

ನಟ ಡಾಲಿ ಧನಂಜಯ್ ನಾಯಕರಾಗಿ ನಟಿಸುತ್ತಿರುವ ನಾಡಪ್ರಭು ಕೆಂಪೇಗೌಡ ಚಿತ್ರದ ಟೈಟಲ್ ಕುರಿತು ವಿವಾದ ಶುರುವಾಗಿದ್ದು, ಇದೀಗ ಸಿನಿಮಾ ನಿರ್ದೇಶಕ ಟಿ.ಎಸ್. ನಾಗಾಭರಣ ವಿರುದ್ಧ ದೂರು ದಾಖಲಾಗಿದೆ. ನಿರ್ಮಾಪಕ ಕಿರಣ್ ತೋಟಂಬೈಲೆ ಅವರು ನಾಗಾಭರಣ ವಿರುದ್ಧ ದೂರು ನೀಡಿದ್ದಾರೆ. ಕಿರಣ್ ಅವರು ಧರ್ಮಭೀರು ನಾಡಪ್ರಭು ಕೆಂಪೇಗೌಡ ಹೆಸರಿನ ಸಿನಿಮಾ ಘೋಷಣೆ ಮಾಡಿದ್ದಾರೆ. ಆದರೆ ಟಿ.ಎಸ್. ನಾಗಾಭರಣ ಅವರು ನಾಡಪ್ರಭು ಕೆಂಪೇಗೌಡ ಟೈಟಲ್ ರಿಜಿಸ್ಟರ್ ಮಾಡಿಸಿ, ಸಿನಿಮಾ ಘೋಷಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಟಿ.ಎಸ್. ನಾಗಾಭರಣ ವಿರುದ್ಧ ದೂರು ದಾಖಲಿಸಿದ್ದಾರೆ.

ರೇಣುಕಾಸ್ವಾಮಿ ಮೇಲೆ ದರ್ಶನ್ ಹಲ್ಲೆ ಮಾಡಿದ್ದು ನಾಯಿ ಮೇಲೆ ಆನೆ ದಾಳಿ

• ಉದಯವಾಹಿನಿ, ಬೆಂಗಳೂರು

ನಾಯಿ ಮೇಲೆ ಆನೆ ದಾಳಿ ಮಾಡಿದೆ ಎನ್ನುವ ಮೂಲಕ ರೇಣುಕಾಸ್ವಾಮಿ ಹತ್ಯೆ ಪ್ರಕರಣ ಸಂಬಂಧ ನಟ ದರ್ಶನ್ ವಿರುದ್ಧ ಖ್ಯಾತ ನಿರ್ದೇಶಕ ರಾಮಗೋಪಾಲ್ ವರ್ಮಾ ಕಿಡಿಕಾರಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ಅವರು, ರೇಣುಕಾಸ್ವಾಮಿ ಮೇಲೆ ದರ್ಶನ್ ಹಲ್ಲೆ ಮಾಡಿದ್ದು ನಾಯಿಯ ಮೇಲೆ ಆನೆ ದಾಳಿ ಮಾಡಿದಂತೆ. ನಾನು ನಾಯಿಯನ್ನು ಅವಹೇಳನಕಾರಿಯಾಗಿ ಅರ್ಥೈಸುವುದಿಲ್ಲ ಆದರೆ ಗಾತ್ರದಲ್ಲಿ ಮಾತ್ರ .. ಒಂದು ನಾಯಿ ಅದರ ಮೇಲೆ ಬೊಗಳಿದ್ದರಿಂದ ಆನೆ ಕೋಪಗೊಳ್ಳುತ್ತದೆ ಮತ್ತು ಅದನ್ನು ಕ್ರೂರವಾಗಿ ಪುಡಿಮಾಡಿ ಸಾಯುತ್ತದೆ ಎಂದು ಊಹಿಸಿಕೊಳ್ಳಿ ಎಂದು ವಾಗ್ದಾಳಿ ನಡೆಸಿದ್ದಾರೆ.

ದರ್ಶನ್, ಪ್ರಜ್ವಲ್ ರೇವಣ್ಣ, ಯಡಿಯೂರಪ್ಪ, ಸೂರಜ್ ವಿರುದ್ಧ ನಟಿ ರಮ್ಯಾ ಕಿಡಿ

• ಉದಯವಾಹಿನಿ, ಬೆಂಗಳೂರು

ನಟಿ, ಮಾಜಿ ಸಂಸದೆ ರಮ್ಯಾ ಅವರು ಮತ್ತೆ ಟ್ವಿಟರ್‌ನಲ್ಲಿ ತಮ್ಮ ವಾಗ್ದಾಳಿಯನ್ನು ಮುಂದುವರೆಸಿದ್ದು, ಈಗ ಅವರು ನಟ ದರ್ಶನ್, ಪ್ರಜ್ವಲ್ ರೇವಣ್ಣ, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಸೂರಜ್ ರೇವಣ್ಣ ವಿರುದ್ಧ ಕಿಡಿಕಾರಿದ್ದಾರೆ. ಟ್ವಿಟರ್‌ನಲ್ಲಿ ಅವರು ಕಾನೂನನ್ನು ಉಲ್ಲಂಘಿಸಿ ಸುದ್ದಿಯಲ್ಲಿರುವವರು ಶ್ರೀಮಂತರು ಮತ್ತು ಶಕ್ತಿಶಾಲಿಗಳು. ಅವರ ಹಿಂಸಾತ್ಮಕ ಕ್ರಿಯೆಗಳಿಗೆ ಬಡವರು, ಮಹಿಳೆಯರು ಮತ್ತು ಮಕ್ಕಳು ಬದುಕು ನಾಶವಾಗಿದೆ. ಈ ಅಪರಾಧಗಳನ್ನು ಹೊರತಂದ ಪೊಲೀಸರು ಮತ್ತು ಮಾಧ್ಯಮಗಳಿಗೆ ಹ್ಯಾಟ್ಸ್ ಆಫ್. ವಿಚಾರಣೆಯನ್ನು ತ್ವರಿತಗೊಳಿಸಿದಾಗ ಮತ್ತು ಪ್ರಕರಣಗಳನ್ನು ಅವುಗಳ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ದಾಗ ನಿಜವಾಗಿಯೂ ನ್ಯಾಯ ಸಿಗುತ್ತದೆ. ನ್ಯಾಯವು ಮೇಲುಗೈ ಸಾಧಿಸದಿದ್ದರೆ– ನಾವು ಸಾರ್ವಜನಿಕರಿಗೆ ಯಾವ ಸಂದೇಶವನ್ನು ನೀಡುತ್ತಿದ್ದೇವೆ ಅಂತ ಹೇಳಿದ್ದಾರೆ.

ಘೋರ ದುರಂತ : ಬಹುಮಹಡಿ ಕಟ್ಟಡದಿಂದ ಜಾರಿ ಬಿದ್ದ ಮಹಿಳೆ

• ಉದಯವಾಹಿನಿ, ಬೆಂಗಳೂರು

ಆಕಸ್ಮಿಕವಾಗಿ ಸೋಪ್ ಮೇಲೆ ಕಾಲಿಟ್ಟು ಮಹಿಳೆಯೊಬ್ಬರು ಕಟ್ಟಡದ ಮೇಲಿಂದ ಬಿದ್ದ ಘಟನೆ ಬೆಂಗಳೂರಿನ ಡಿ.ಜೆ.ಹಳ್ಳಿ ಠಾಣಾ ವ್ಯಾಪ್ತಿಯ ಕನಕನಗರದಲ್ಲಿ ನಡೆದಿದೆ. ಸದ್ಯ ಮಹಿಳೆಯನ್ನು ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಲಾಗಿದ್ದು, ಮಹಿಳೆ ಕೋಮಾಕ್ಕೆ ಜಾರಿದ್ದಾಳೆ ಎನ್ನಲಾಗಿದೆ. ಡಿಜೆ ಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಕನಕನಗರದಲ್ಲಿ ಈ ಪ್ರಕರಣ ನಡೆದಿದೆ. ಕಳೆದ ಮೂರು ದಿನದ ಹಿಂದ ನಡೆದ ಕೃತ್ಯ ತಡವಾಗಿ ಬೆಳಕಿಗೆ ಬಂದಿದೆ. ಛಾವಣಿಯ ಮೇಲೆ ಕೆಲವು ಕೆಲಸ ಮಾಡುತ್ತಿದ್ದ ವೇಳೆ ಈ ಘಟನೆ ನಡೆದಿದ್ದು, ಈ ವೇಳೆ ಮಹಿಳೆ ಪತಿ ಆಕೆಯನ್ನು ಕೈನಿಂದ ಹಿಡಿದು ರಕ್ಷಣೆ ಮಾಡಲು ಮುಂದಾಗಿದ್ದರು ಕೂಡ ಅದು ಕೊನೆಗೆ ಫಲನಿಡದೇ ಆಕೆ ನೆಲಕ್ಕೆ ಬಿದ್ದಿದ್ದಾಳೆ. ಈ ನಡುವೆ ಮಹಿಳೆಯನ್ನು ತಕ್ಷಣ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅವರ ಸ್ಥಿತಿ ಇಲ್ಲಿ ಗಂಭೀರವಾಗಿದೆ ಎನ್ನಲಾಗಿದೆ. ಡಿಜೆ ಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು ಮುಂದಿನ ಕಾನೂನು ಕ್ರಮವನ್ನು ಕೈಗೊಂಡಿದ್ದಾರೆ.

ಡಿಪ್ಲೊಮೊ ಕೋರ್ಸ್ ಪೂರ್ಣಗೊಳಿಸಿದವರಿಗೆ ವಿದೇಶದಲ್ಲಿ ಉದ್ಯೋಗ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮವು ರಾಜ್ಯದ ಯುವಕರಿಗೆ ಹೊರದೇಶಗಳಲ್ಲಿ ಉದ್ಯೋಗ ಒದಗಿಸುವಮಹತ್ವದ ಯೋಜನೆಯನ್ನು ಅನುಷ್ಠಾನಗೊಳಿಸಿದೆ.

ಉದಯವಾಹಿನಿ ಚಿತ್ರ

ಇದರ ಭಾಗವಾಗಿ ಸ್ಲೋವಾಕಿಯಾ ರಾಷ್ಟ್ರದಲ್ಲಿ ಬಿಇ, ಡಿಪ್ಲೊಮೊ, ಐಟಿಐ ಮತ್ತಿತರ ವೃತ್ತಿಪರ ಕೋರ್ಸ್‌ಗಳನ್ನು ಮುಗಿಸಿದ 94 ಯುವಕರಿಗೆ ಉದ್ಯೋಗ ನೀಡುವಲ್ಲಿ ಕೌಶಲ್ಯಾಭಿವೃದ್ಧಿ ನಿಗಮವು ಯಶಸ್ವಿಯಾಗಿದೆ. ಕೌಶಲ್ಯಾಭಿವೃದ್ಧಿ, ಜೀವನೋಪಾಯ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ರಾದ ಡಾ.ಶರಣಪ್ರಕಾಶ್ ಪಾಟೀಲ್ ಅವರು ಉದ್ಯೋಗವಿಲ್ಲದೆ ಕೆಲಸ ಹರಸುತ್ತಿದ್ದಯುವಕರು ಇದೀಗ ವಿದೇಶದಲ್ಲಿ ಕೈತುಂಬ ಸಂಬಳ ಪಡೆಯುತ್ತಿದ್ದು, ತಮ್ಮ ಭವಿಷ್ಯವ ರೂಪಿಸಿಕೊಂಡಿದ್ದಾರೆ. ಯುವಕರ ಕೌಶಲ್ಯಾ ಅರ್ಹತೆಗೆ ತಕ್ಕಂತೆ ಉದ್ಯೋಗಗಳನ್ನು ನೀಡಲಾಗುತ್ತಿದೆ. ಅವರಿಗೆ ಇಲ್ಲಿಯೇ ತರಬೇತಿ, ವೀಸಾ ವ್ಯವಸ್ಥೆ, ಗೃಹ ಇಲಾಖೆಯಲ್ಲಿ ದಾಖಲಾತಿಗಳ ಪ್ರಮಾಣಪತ್ರ ಪರಿಶೀಲನೆಮಾತ್ರವಲ್ಲದೆ ಹೊರ ರಾಷ್ಟ್ರಗಳಿಗೆ ತೆರಳುವವರಿಗೆ ಊಟ, ವಸತಿವ್ಯವಸ್ಥೆ, ಸಂಬಂಧಪಟ್ಟವರ ಭೇಟಿಗೆ ಬೇಕಾದ ಇನ್ನಿತರಸೌಲಭ್ಯಗಳನ್ನು ಸಹ ಇಲಾಖೆಯ ಅಧಿಕಾರಿಗಳೇನಿಗಾವಹಿಸುತ್ತಾರೆ.

ನಡ್ಡಾ, ಅಮಿತ್ ಮಾಳವೀಯಗೆ ನೀಡಿದ್ದ ಸಮನ್ಸ್‌ಗೆ ಹೈಕೋರ್ಟ್ ತಡೆ

• ಉದಯವಾಹಿನಿ, ಬೆಂಗಳೂರು

ಮುಸ್ಲಿಮರನ್ನು ಗುರಿಯಾಗಿಸಿಕೊಂಡು ಆಕ್ಷೇಪಾರ್ಹ ಪ್ರಚಾರ ವೀಡಿಯೊಗೆ ಸಂಬಂಧಿಸಿದಂತೆ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಅವರನ್ನು ವಿಚಾರಣೆಗೆ ಕರೆಯುವ ಅಗತ್ಯವಿಲ್ಲ ಎಂದು ಕರ್ನಾಟಕ ಹೈಕೋರ್ಟ್ ಹೇಳಿದೆ.

ನಡ್ಡಾ ಅಥವಾ ಮಾಳವೀಯ ಅವರ ವೈಯಕ್ತಿಕ ಉಪಸ್ಥಿತಿಯನ್ನು ಒತ್ತಾಯಿಸದೆ ಪ್ರಕರಣದ ತನಿಖೆ ಮುಂದುವರಿಯಬಹುದು ಎಂದು ನ್ಯಾಯಮೂರ್ತಿ ಕೃಷ್ಣ ಎಸ್ ದೀಕ್ಷಿತ್ ಹೇಳಿದರು. ಮೇ 4 ರಂದು ಬಿಜೆಪಿಯ ಕರ್ನಾಟಕ ಸಾಮಾಜಿಕ ಮಾಧ್ಯಮ ಹ್ಯಾಂಡಲ್ಗಳಲ್ಲಿ ಅಪ್ಲೋಡ್ ಮಾಡಲಾದ ಅನಿಮೇಟೆಡ್ ವೀಡಿಯೊದ ವಿರುದ್ಧ ಕಾಂಗ್ರೆಸ್ ದೂರು ನೀಡಿದ ನಂತರ ಮೇ 5 ರಂದು ಇಬ್ಬರೂ ಮತ್ತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ಎಫ್ಐಆರ್ ದಾಖಲಿಸಲಾಗಿದೆ.

ವೀಡಿಯೊವನ್ನು ಅಪ್ಲೋಡ್ ಮಾಡಿದ ಖಾತೆಯನ್ನು ಮಾಳವೀಯ ನಿರ್ವಹಿಸುತ್ತಿದ್ದಾರೆ ಮತ್ತು ನಡ್ಡಾ ಮತ್ತು ವಿಜಯೇಂದ್ರ ಅವರ ಸೂಚನೆಯ ಮೇರೆಗೆ ವೀಡಿಯೊವನ್ನು ಹಂಚಿಕೊಳ್ಳಲಾಗಿದೆ ಎಂದುಕಾಂಗ್ರೆಸ್ ದೂರಿನಲ್ಲಿ ತಿಳಿಸಿದೆ. ಧಾರ್ಮಿಕ ಆಧಾರದ ಮೇಲೆ ದ್ವೇಷವನ್ನು ಉತ್ತೇಜಿಸುವ ಹೇಳಿಕೆಗಳನ್ನು ನೀಡಿದ್ದಕ್ಕಾಗಿ ಮೂವರು ಬಿಜೆಪಿ ನಾಯಕರ ವಿರುದ್ಧ ಭಾರತೀಯ ದಂಡ ಸಂಹಿತೆಯ ನಿಬಂಧನೆಗಳ ಅಡಿಯಲ್ಲಿ ಜನ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಟರ್ಫ್ ಕ್ಲಬ್ ಪ್ರಕರಣ: ಕುದುರೆ ರೇಸ್‌ಗೆ ಹೈಕೋರ್ಟ್ ತಡೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಕುದುರೆ ಪಂದ್ಯಾವಳಿ ಆಯೋಜಿಸಲು ಅನುಮತಿ ನೀಡಿದ್ದ ಏಕಸದಸ್ಯ ನ್ಯಾಯಪೀಠದ ಮಧ್ಯಂತರ ಆದೇಶಕ್ಕೆ ವಿಭಾಗೀಯ ನ್ಯಾಯಪೀಠ ತಡೆ ವಿಧಿಸಿದೆ. ಏಕಸದಸ್ಯ ಪೀಠ ಆದೇಶ ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ಮುಖ್ಯ ನ್ಯಾಯಮೂರ್ತಿ ಎನ್ ವಿ ಅಂಜಾರಿಯಾ ಮತ್ತು ನ್ಯಾಯಮೂರ್ತಿ ಕೆ ವಿ ಅರವಿಂದ್ ಅವರ ವಿಭಾಗೀಯ ಪೀಠವು ಇಂದು ಪ್ರಕಟಿಸಿತು.

ಕುದುರೆ ರೇಸ್ ಆಯೋಜನೆ ಮಾಡಲು ಬೆಂಗಳೂರು ಟರ್ಫ್ ಕ್ಲಬ್‌ಗೆ ಪರವಾನಗಿ ನೀಡಲು ರಾಜ್ಯ ಸರ್ಕಾರ ನಿರಾಕರಿಸಿರುವ

ಉದಯವಾಹಿನಿ ಚಿತ್ರ

ಆದೇಶ ಸಕಾರಣದಿಂದ ಕೂಡಿದೆ.

ಬೆಂಗಳೂರು ಟರ್ಫ್ ಕ್ಲಬ್‌ಗೆ ರೇಸ್ ಆಯೋಜಿಸಲು ಪರವಾನಗಿ ನೀಡಲು ನಿರಾಕರಿಸಿರುವ ರಾಜ್ಯ ಸರ್ಕಾರದ ಆದೇಶಕ್ಕೆ ತಡೆ ನೀಡುವ ಮೂಲಕ ಏಕಸದಸ್ಯ ಪೀಠವು ತಪ್ಪಾಗಿ ತೀರ್ಮಾನಿಸಿದೆ. ಮೇಲ್ನೋಟಕ್ಕೆ ತಮ್ಮ ಪರ ಪ್ರಕರಣವಿದೆ ಎಂದು ತೋರಿಸಲು ರಾಜ್ಯ ಸರ್ಕಾರ ಸಫಲವಾಗಿದೆ. ಈ ಕಾರಣಕ್ಕಾಗಿ ಏಕಸದಸ್ಯ ಪೀಠದ ಆದೇಶವನ್ನು ಅಮಾನತು ಮಾಡಿದ್ದು, ಅದಕ್ಕೆ ತಡೆ ನೀಡಲಾಗಿದೆ ಎಂದು ಆದೇಶಿಸಿದೆ.

ಅರ್ಜಿ ವಿಚಾರಣೆ ಬಾಕಿ ಇರುವಾಗ ಬೆಂಗಳೂರು ಟರ್ಫ್ ಕ್ಲಬ್ ಆಫ್–ಕೋರ್ಸ್, ಆನ್ ಕೋರ್ಸ್ ರೇಸ್ ಪಂದ್ಯಾವಳಿ ಮತ್ತು ಬೆಟ್ಟಿಂಗ್ ನಡೆಸುವುದನ್ನು ನಿಷೇಧಿಸಲಾಗಿದ್ದು, ಇದು ಅರ್ಜಿಯ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ.

ಚನ್ನಪಟ್ಟಣ ಈಗ ಒಕ್ಕಲಿಗ ದಿಗ್ಗಜರ ರಣ ಕಣ

■ ಎಚ್.ಡಿ.ಕುಮಾರಸ್ವಾಮಿ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವಿನ ಸಂಘರ್ಷಕ್ಕೆ ಅಖಾಡ ಅಣಿ

• ಉದಯವಾಹಿನಿ, ರಾಮನಗರ

ಮತ್ತೊಮ್ಮೆ ಒಕ್ಕಲಿಗ ದಿಗ್ಗಜರ ಕಾದಾಟಕ್ಕೆ ಚನ್ನಪಟ್ಟಣ ಭೂಮಿಕೆಯಾಗಲಿದೆಯಾ 22 ವರ್ಷ ಬಳಿಕ ಮತ್ತೆ ಬೊಂಬೆನಾಡಿನ ನೆಲದಲ್ಲಿ ಮಾಜಿ ಪ್ರಧಾನಿ ದೇವೇಗೌಡರ ಕುಟುಂಬ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ನಡುವಿನ ರಾಜಕೀಯ ಕಾಳಗ ಅನುರಣಿಸಲಿದೆಯಾ..

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವಿನ ಸಂಘರ್ಷಕ್ಕೆ ಅಖಾಡ ಅಣಿಗೊಂಡಿದೆ.

ಚನ್ನಪಟ್ಟಣ ಅಖಾಡ

ಚನ್ನಪಟ್ಟಣ ಕ್ಷೇತ್ರವನ್ನು ಉಳಿಸಿಕೊಳ್ಳಬೇಕು ಎಂದು ಎಚ್‌ಡಿಕೆ, ಈ ಕ್ಷೇತ್ರವನ್ನು ಕಬ್ಜಾ ಮಾಡಿಕೊಂಡು ಜಿಲ್ಲೆಯಿಂದ ಎಚ್. ಡಿ.ದೇವೇಗೌಡರ ಕುಟುಂಬವನ್ನು ಹೊರಗಿಡಬೇಕು ಎಂದು ಡಿ.ಕೆ.ಶಿವಕುಮಾರ್ ಪಣತೊಟ್ಟಿದ್ದು, ಚನ್ನಪಟ್ಟಣದಲ್ಲಿ ಮತ್ತೊಮ್ಮೆ ಒಕ್ಕಲಿಗ ನಾಯಕರಿಬ್ಬರು ಕಾದಾಟಕ್ಕಿಳಿದಿದ್ದಾರೆ. ಬುಧವಾರ ಚನ್ನಪಟ್ಟಣಕ್ಕೆ ಎಂಟ್ರಿ ನೀಡಿದ ಡಿಕೆಶಿ ಟೆಂಪಲ್ ರನ್ ಮಾಡಿ, ಚನ್ನಪಟ್ಟಣವನ್ನು ಬದಲಾಯಿಸುತ್ತೇನೆ ಎಂದು ಹೇಳಿ ಹೋಗಿರುವ ಬೆನ್ನಲ್ಲೇ ಈ ಹಿಂದೆ ಕನಕಪುರ ಲೋಕಸಭಾ ಉಪಚುನಾವಣೆ, ನೀರಾ ಚಳವಳಿಯ ಸಮಯದ ರಾಜಕೀಯ ಜಿದ್ದಾಜಿದ್ದಿ ಮತ್ತೆ ಮರುಕಳಿಸುವ ಎಲ್ಲಾ ಲಕ್ಷಣಗಳು ಗೋಚರಿಸುತ್ತಿವೆ. ಚನ್ನಪಟ್ಟಣ ತಾಲೂಕಿನಲ್ಲಿ ನೀರಾ ಚಳವಳಿ ಉಚ್ರಾಯಸ್ಥಿತಿ ತಲುಪಿತ್ತು. ಅಂದು ಡಿ.ಕೆ.ಶಿವಕುಮಾರ್ ಪ್ರತಿನಿಧಿಸುತ್ತಿದ್ದ ಚನ್ನಪಟ್ಟಣ ತಾಲೂಕಿನ ವಿಠಲೇನಹಳ್ಳಿ ಗ್ರಾಮದಲ್ಲಿ ನೀರಾ ಹೋರಾಟಗಾರರ ಮೇಲೆ ಗೋಲಿಬಾರ್ ನಡೆದು ಇಬ್ಬರು ಸಾವಿಗೀಡಾಗಿದ್ದರು. ಇದನ್ನು ಖಂಡಿಸಿ ಅಂದಿನ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಡಿ.ಕೆ. ಶಿವಕುಮಾರ್ ವಿರುದ್ಧ ಮಾಜಿ ಪ್ರಧಾನಿ ದೇವೇಗೌಡ ಪಾದಯಾತ್ರೆ ನಡೆಸಿದರು. ಬಳಿಕ ಸಂಸದ ಎಂ.ವಿ. ಚಂದ್ರಶೇಖರ್ ಮೂರ್ತಿ ನಿಧನದಿಂದ ಕನಕಪುರ ಲೋಕಸಭಾ ಕ್ಷೇತ್ರಕ್ಕೆ ಉಪಚುನಾವಣೆ ಎದುರಾ ಯಿತು. ಈ ಚುನಾವಣೆಯಲ್ಲಿ ಎಚ್.ಡಿ.ದೇವೇ ಗೌಡರು- ಡಿ.ಕೆ.ಶಿವಕುಮಾರ್ ಮುಖಾಮುಖಿಯಾದರು. ಈ ಚುನಾವಣೆ ಅಕ್ಷರಶಃ ಜೆಡಿಎಸ್-ಕಾಂಗ್ರೆಸ್ ಕಾರ್ಯಕರ್ತರ ನಡುವಿನ ರಣಕಣವಾಗಿತ್ತು. ಇದೀಗ ಮತ್ತೆ ಚನ್ನಪಟ್ಟಣದ ಭೂಮಿಯಲ್ಲಿ ಅಂತಹುದೇ ಅಖಾಡಕ್ಕೆ ಸಮಯ ಹುರಿಗೊಂಡಿದೆ.

ಉದಯವಾಹಿನಿ ಚಿತ್ರ

ಇಬ್ಬರಿಗೂ ಅಸ್ತಿತ್ವದ ಪ್ರಶ್ನೆ: ಚನ್ನಪಟ್ಟಣದ ಉಪ ಚುನಾವಣೆ ಗೆಲ್ಲುವುದು ಎಚ್.ಡಿ.ಕುಮಾರಸ್ವಾಮಿ ಮತ್ತು ಡಿ.ಕೆ.ಶಿವಕುಮಾರ್ ಇಬ್ಬರಿಗೂ ಅಸ್ತಿತ್ವದ ಪ್ರಶ್ನೆಯಾಗಿದೆ. ಕೇಂದ್ರದಲ್ಲಿ ಕ್ಯಾಬಿನೆಟ್ ಸಚಿವರಾಗಿರುವ ಕುಮಾರಸ್ವಾಮಿ ತಾವು ಪ್ರತಿನಿಧಿಸಿದ್ದ ವಿಧಾನಸಭಾ ಕ್ಷೇತ್ರವನ್ನು ಯಾವುದೇ ಕಾರಣಕ್ಕೂ ತನ್ನ ರಾಜಕೀಯ ವೈರಿಗೆ ಬಿಟ್ಟುಕೊಡುವುದಿಲ್ಲ. ಇನ್ನು ರಾಜ್ಯದ ಡಿಸಿಎಂ ಡಿ.ಕೆ.ಶಿವಕುಮಾರ್ ಚನ್ನಪಟ್ಟಣ ವನ್ನು ಬಿಟ್ಟುಕೊಟ್ಟರೆ ತಮ್ಮ ಹಿನ್ನಡೆಯನ್ನು ತಾವೇ ಘೋಷಿಸಿಕೊಂಡಂತೆ. ಹೀಗಾಗಿ ಇಬ್ಬರು ನಾಯಕರ ಕಾದಾಟಕ್ಕೆ ಚನ್ನಪಟ್ಟಣ ರಣಾಂಗಣವಾಗಿದೆ.ಮಾಜಿ ಪ್ರಧಾನಿ ದೇವೇಗೌಡ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ನಡುವಿನ ರಾಜಕೀಯ ಸಂಘರ್ಷಕ್ಕೆ 40 ವರ್ಷಗಳ ಇತಿಹಾಸವಿದೆ. 1985ರಲ್ಲಿ ಸಾತನೂರು ವಿಧಾನಸಭಾ ಕ್ಷೇತ್ರದಿಂದ ಇಬ್ಬರು ಮುಖಾಮುಖಿಯಾಗಿದ್ದರು. 1999ರಲ್ಲಿ ಡಿಕೆಶಿ- ಎಚ್‌ಡಿಕೆ ಸಾತನೂರಿನಲ್ಲಿ ಮುಖಾಮುಖೀಯಾಗಿದ್ದರು. ಇನ್ನು 2002 ಕನಕಪುರ ಲೋಕಸಭಾ ಉಪಚುನಾವಣೆ ಎಚ್ ಡಿಡಿ-ಡಿಕೆಶಿ ನಡುವಿನ ಸಂಘರ್ಷವಾಗಿತ್ತು. 2007ರಲ್ಲಿ ಎಚ್.ಡಿ.ಕುಮಾರಸ್ವಾಮಿ ಸಿಎಂ ಆಗಿದ್ದಾಗ ಸಾತನೂರಿ ನಲ್ಲಿ ನಡೆಸಿದ ಕಾರ್ಯಕ್ರಮ ಇವರಿಬ್ಬರ ನಡುವಿನ ರಾಜಕೀಯ ಕಾದಾಟಕ್ಕೆ ಅಗ್ನಿಕುಂಡವಾಗಿತ್ತು. ಇದೀಗ ಮತ್ತೆ ಚನ್ನಪಟ್ಟಣದಲ್ಲಿ ಅದು ಮುಂದುವರಿದಿದೆ.

> ಚನ್ನಪಟ್ಟಣ ಅಖಾಡಕ್ಕೆ ತನ್ನ ಪುತ್ರ ನಿಖಿಲ್ ಕುಮಾರಸ್ವಾಮಿ ಅವರನ್ನು ಕಣಕ್ಕಿಳಿಸುವುದು ಪ್ರಯಾಸದ ಕೆಲಸ. ಇನ್ನು ಚನ್ನಪಟ್ಟಣ ಜೆಡಿಎಸ್ ಅಧ್ಯಕ್ಷ ಎಚ್.ಪಿ.ಜಯಮುತ್ತು ಅವರನ್ನು ಕಣಕ್ಕಿಳಿಸಿದರೆ ಡಿಕೆಎಸ್ ಸಹೋದರರ ಹಣದ ಅಬ್ಬರದ ಮುಂದೆ ಈಜಿ ದಡಸೇರುವುದು ಸುಲಭವಲ್ಲ. ಇದಕ್ಕಾಗಿ ಯೋಗೇಶ್ವರ್ ಅವರನ್ನೇ ಕಣಕ್ಕಿಳಿಸುವ ಇರಾದೆ ದಳಪತಿಗಳದ್ದಾಗಿದೆ.

ಡಿಕೆಶಿ ಚಕ್ರವ್ಯೂಹ ಭೇದಿಸಲು ಸೈನಿಕನೇ ಕಮ್ಯಾಂಗ ಡರ್

ಚನ್ನಪಟ್ಟಣ ಕೋಟೆಗೆ ಲಗ್ಗೆ ಇಡುವ ಮೂಲಕ ಡಿ.ಕೆ.ಶಿವ ಕುಮಾರ್ ಒಕ್ಕಲಿಗರ ಕೋಟೆಯಲ್ಲಿ ಎಚ್.ಡಿ.ಕುಮಾರಸ್ವಾಮಿ ಯನ್ನು ಮಣಿಸಲು ಚಕ್ರವ್ಯೂಹ ಹಣೆದಿದ್ದಾರೆ. ಮಾಜಿ ಪ್ರಧಾನಿಯ ಮಗ, ಅವರ ಉತ್ತರಾಧಿಕಾರಿ ಎಂದು ದೆಹಲಿಯಲ್ಲಿ ಬಿಂಬಿಸಿಕೊಂಡಿರುವ ಕುಮಾರಸ್ವಾಮಿ, ಈ ಇಮೇಜ್ ಕಳೆದುಕೊಳ್ಳಲು ಸಿದ್ಧವಿಲ್ಲ. ಹೀಗಾಗಿ, ಚನ್ನಪಟ್ಟಣದಲ್ಲಿ ತನ್ನೆಲ್ಲ ಶಕ್ತಿಯನ್ನು ಕ್ರೋಢಿಕರಿಸುವ ಜತೆಗೆ ಗೆಲ್ಲಿಸಬಲ್ಲ ಜಾಕಿಯನ್ನು ಕಣಕ್ಕಿಳಿಸಿ ಡಿಕೆಶಿ ರಚಿಸಿದ ಚಕ್ರವ್ಯೂಹವನ್ನು ಯಶಸ್ವಿಯಾಗಿ ಭೇದಿಸಬಲ್ಲ ಸೇನಾನಿ ಎಚ್‌ಡಿಕೆಗೆ ಅಗತ್ಯವಿದೆ.

ಹಿರಿಯ ನಾಗರಿಕರಿಗೆ : ಸಾಧನ ಸಲಕರಣೆ ವಿತರಣೆಗೆ ಅರ್ಜಿ ಆಹ್ವಾನ

• ಉದಯವಾಹಿನಿ, ಮಡಿಕೇರಿ



ಕೇಂದ್ರ ಸರ್ಕಾರದ ಆಲಿಮ್ಕೋ ಸಂಸ್ಥೆಯಿಂದ ಅಡಿಪ್ ಯೋಜನೆಯಡಿ ವಿಕಲಚೇತನರಿಗೆ ಹಾಗೂ ರಾಷ್ಟ್ರೀಯ ವಯೋಶ್ರೀ ಯೋಜನೆಯಡಿ ಹಿರಿಯ ನಾಗರಿಕರಿಗೆ ವಿವಿಧ ಸಾಧನ ಸಲಕರಣೆಗಳನ್ನು ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ. ಜಿಲ್ಲೆಯ ವಿಶೇಷಚೇತನರು ಹಾಗೂ ಹಿರಿಯ ನಾಗರಿಕರು ಮೌಲ್ಯಮಾಪನ ತಪಾಸಣಾ ಶಿಬಿರಕ್ಕೆ ಹಾಜರಾಗಲು ತಾಲ್ಲೂಕುವಾರು ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

ಮೌಲ್ಯಮಾಪನ ತಪಾಸಣಾ ಶಿಬಿರ

ಜುಲೈ, 26 ರಂದು ಕುಶಾಲನಗರ ತಾಲ್ಲೂಕು ಕಲಾಮಂದಿರ ಅಥವಾ ಗಾಯತ್ರಿ ಕಲ್ಯಾಣ ಮಂಟಪ, ಜುಲೈ, 27 ರಂದು ಸೋಮವಾರಪೇಟೆ ಚನ್ನಬಸಪ್ಪ ಸಭಾಂಗಣ, ಜುಲೈ, 28 ರಂದು ವಿರಾಜಪೇಟೆ ಮತ್ತು ಪೊನ್ನಂಪೇಟೆ ತಾಲ್ಲೂಕಿಗೆ ಗೋಣಿಕೊಪ್ಪಲು ಕೃಷಿ ವಿಜ್ಞಾನ ಕೇಂದ್ರ ಹಾಗೂ ಜುಲೈ, 29 ಮತ್ತು 30 ರಂದು ಮಡಿಕೇರಿ ತಾಲ್ಲೂಕಿನ ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ ಸಭಾಂಗಣ. ಈ ದಿನಾಂಕಗಳಂದು ಶಿಬಿರಗಳಲ್ಲಿ ಭಾಗವಹಿಸುವ ವಿಶೇಷಚೇತನರು ಯುಡಿಐಡಿ ಕಾರ್ಡ್, ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣಪತ್ರ ಅಥವಾ ಬಿಪಿಎಲ್ ಕಾರ್ಡ್, ಪಾಸ್ ಪೋರ್ಟ್ ಅಳತೆಯ ಭಾವಚಿತ್ರ ಹಾಗೂ ಹಿರಿಯ ನಾಗರಿಕರು ಆಧಾರ್ ಕಾರ್ಡ್, ಹಿರಿಯ ನಾಗರಿಕರ ಗುರುತಿನ ಚೀಟಿ, ಆದಾಯ ಪ್ರಮಾಣಪತ್ರ ಅಥವಾ ಬಿಪಿಎಲ್ ಕಾರ್ಡ್, ಪಾಸ್ಪೋರ್ಟ್ ಅಳತೆಯ ಭಾವಚಿತ್ರವನ್ನು ತರಬೇಕು.

> ಹೆಸರು ನೋಂದಾಯಿಸಿಕೊಳ್ಳಲು ಎಂಆರ್‌ಡಬ್ಲ್ಯೂಗಳಾದ ಸೋಮವಾರಪೇಟೆ ಹಾಗೂ ಕುಶಾಲನಗರ ತಾಲ್ಲೂಕಿನ ಹರೀಶ್ ಟಿ.ಆರ್. ಮೊ.ಸಂ.8861428931, ವಿರಾಜಪೇಟೆ ತಾಲ್ಲೂಕಿನವರು ಪ್ರಥನ್ಕುಮಾರ್ ಸಿ.ಬಿ. ಮೊ. ಸಂ.9900883654 ಹಾಗೂ ಮಡಿಕೇರಿ ತಾಲ್ಲೂಕಿನವರು ರಾಜೇಶ್ ಮೊ.ಸಂ. 807392914 ಹಾಗೂ ಹೆಚ್ಚಿನ ಮಾಹಿತಿಗೆ ಕಚೇರಿ ದೂ. ಸಂ. 08272-295829 ನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ವಿಮಲಾ ಅವರು ತಿಳಿಸಿದ್ದಾರೆ.

ಮಗುವಿಗೆ ಸಿಗರೇಟ್‌ನಿಂದ ಸುಟ್ಟು ಚಿತ್ರಹಿಂಸೆ

• ಉದಯವಾಹಿನಿ, ಕೋಲಾರ

ಉದಯವಾಹಿನಿ ಚಿತ್ರ

ಮೂರು ವರ್ಷದ ಬಾಲಕಿಗೆ ಮಲತಂದೆಯೊಬ್ಬ ಸಿಗರೇಟ್'ನಿಂದ ಸುಟ್ಟು ಚಿತ್ರಹಿಂಸೆ ನೀಡಿರುವ ಘಟನೆಯೊಂದು ಗೌರಿಬಿದನೂರಿನ ಟಿಪ್ಪು ನಗರದಲ್ಲಿ ವರದಿಯಾಗಿದೆ. ಆರೋಪಿ ಅಮ್ಜದ್‌ನನ್ನು ಪೋಕ್ಸೋ ಕಾಯ್ದೆಯಡಿ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ. ಮಗುವಿನ ತಾತ ಎಸ್‌ಜಿ ಅನ್ವರ್ ನೀಡಿದ ದೂರಿನ ಆಧಾರದ ಮೇಲೆ ಗೌರಿಬಿದನೂರು ಪೊಲೀಸರು ಅಮ್ಜದ್‌ನನ್ನು ಬಂಧಿಸಿದ್ದಾರೆ ಎಂದು ಚಿಕ್ಕಬಳ್ಳಾಪುರ ಎಸ್‌ಪಿ ಡಿಎಲ್ ನಾಗೇಶ್ ತಿಳಿಸಿದ್ದಾರೆ. ಜರೀನಾ ತಾಜ್ ಎಂಬಾಕೆ ಮೂರು ಮದುವೆಯಾಗಿದ್ದು ಮೊದಲ ಪತಿಯಿಂದ ಇಬ್ಬರು ಹೆಣ್ಣುಮಕ್ಕಳು ಮತ್ತು ಎರಡನೇ ಪತಿಯಿಂದ ಮತ್ತೊಂದು ಹೆಣ್ಣು ಮಗು ಜನಿಸಿದ್ದು ಇಬ್ಬರು ಗಂಡಂದಿರನ್ನು ತೊರೆದಿದ್ದ ಜರೀನಾ, 10 ತಿಂಗಳ ಹಿಂದೆ ಟ್ರಕ್ ಡ್ರೈವರ್ ಆಗಿದ್ದ 40 ವರ್ಷದ ಅಮ್ಜದ್ ಅಲಿಯಾಸ್ ಅಶು ನನ್ನು ಮೂರನೇ ಮದುವೆಯಾಗಿದ್ದಳು. ಎರಡನೇ ಪತಿಯ ಮೂರು ವರ್ಷದ ಹೆಣ್ಣು ಮಗುವಿಗೆ ಅಮ್ಜದ್ ಚಿತ್ರ ಹಿಂಸೆ ನೀಡಿದ್ದಾನೆ. ಮಗುವಿನ ಮುಖ, ಕತ್ತು ಹಾಗೂ ತಲೆ ಭಾಗಕ್ಕೆ ಸಿಗರೇಟ್ ನಿಂದ ಸುಟ್ಟು, ಮಗುವಿನ ಗುಪ್ತಾಂಗ ಕಚ್ಚಿ, ಮನಬಂದಂತೆ ಥಳಿಸಿದ್ದಾನೆ.

15 ವರ್ಷದ ಮತ್ತೊಬ್ಬ ಮಗಳ ಕೈ ಮುರಿದು ಬಳಿಕ ಪತ್ನಿ ಜರೀನಾ ಮೇಲೂ ಹಲ್ಲೆನಡೆಸಿದ್ದಾನೆ. ತೀವ್ರ ಗಾಯಗೊಂಡಿರುವ ಮೂರು ವರ್ಷದ ಮಗುವನ್ನು ಬೆಂಗಳೂರಿನ ಬೌರಿಂಗ್ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಕೊಡಿಸಲಾಗುತ್ತಿದೆ. ಸದ್ಯ ತಂದೆಯ ವಿಕೃತಿಯಿಂದ ಪುತ್ರಿ ಶಾಕ್ ಗೆ ಒಳಗಾಗಿದ್ದಾಳೆ.

'ಸ್ವಚ್ಛ ಭಾರತ್ ಮಿಷನ್-2' ಸೇರ್ಪಡೆಗೆ ಪ್ರಸ್ತಾವ

• ಉದಯವಾಹಿನಿ, ಮೈಸೂರು

ಉದಯವಾಹಿನಿ ಚಿತ್ರ

'ನಗರಕ್ಕೆ ಹೊಂದಿಕೊಂಡಿರುವ ಹಾಗೂ ಗ್ರಾಮ ಪಂಚಾಯಿತಿಯಿಂದ ಮೇಲ್ದರ್ಜೆಗೇರಿಸಿದ್ದರಿಂದ ಸೌಕರ್ಯಗಳ ಕೊರತೆ ಎದುರಿಸುತ್ತಿರುವ ಬೋಗಾದಿ, ಶ್ರೀರಾಂಪುರ, ಕಡಕೊಳ, ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಗಳನ್ನು ಕೇಂದ್ರ ಸರ್ಕಾರದ ಸ್ವಚ್ಛ ಭಾರತ್ ಮಿಷನ್-2ಗೆ ಸೇರಿಸಲು ಪ್ರಸ್ತಾವ ಸಲ್ಲಿಸಬೇಕು' ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಸೂಚಿಸಿದರು.

ಪಂ.ಪ್ರಗತಿ ಪರಿಶೀಲನೆ ಸಭೆ

ಇಲ್ಲಿನ ಜಲದರ್ಶಿನಿ ಅತಿಥಿ ಗೃಹದಲ್ಲಿರುವ ಶಾಸಕರ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಗರಸಭೆ, ಪಟ್ಟಣ ಪಂಚಾಯಿತಿಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.ಕಾಮಗಾರಿಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕು' ಎಂದು ನಿರ್ದೇಶನ ನೀಡಿದರು.

ಅನುದಾನದ ಕೊರತೆ: ಒಳಚರಂಡಿ ನಿರ್ಮಾಣ, ಕುಡಿಯುವ ನೀರಿನ ಸಮಸ್ಯೆ ನಿವಾರಣೆ ಹಾಗೂ ಸ್ವಚ್ಛತಾ ಕಾರ್ಯಕ್ಕೆ ಅನುದಾನ ಕೊರತೆ ಇದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಗ್ರಾಮ ಪಂಚಾಯಿತಿಯಿಂದ ಪಟ್ಟಣ ಪಂಚಾಯಿತಿಗೆ ಹಾಗೂ ನಗರಸಭೆಗೆ ಮೇಲ್ದರ್ಜೆಗೇರಿಸಿದ ಬಳಿಕ ಸಾರ್ವಜನಿಕರಿಂದ ಸಂಗ್ರಹವಾಗುತ್ತಿರುವ ತೆರಿಗೆಯಿಂದ ನಿರ್ವಹಣೆ ಮಾಡಲಾಗುತ್ತಿದೆ. ಪ್ರಮುಖ ಯೋಜನೆ ಕೈಗೆತ್ತಿಕೊಳ್ಳಲು ಅನುದಾನದ ಕೊರತೆ ಇದೆ ಎಂದು ತಿಳಿಸಿದರು.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾರ್ಯಪಾಲಕ ಎಂಜಿನಿಯರ್ ಆಸಿಫ್ ಮಾತನಾಡಿ, 'ಸ್ವಚ್ಛಭಾರತ್ ಮಿಷನ್ ಯೋಜನೆ-2ಗೆ ಹೂಟಗಳ್ಳಿ ನಗರಸಭೆ ಸೇರಿದೆ. ಉಳಿದ ನಾಲ್ಕು ಪಟ್ಟಣ ಪಂಚಾಯಿತಿಗಳನ್ನು ಸೇರಿಸಿದರೆ ಯುಜಿಡಿ ಸಂಪರ್ಕ ಕಲ್ಪಿಸಲು ಅನುದಾನ ದೊರೆಯಲಿದೆ' ಎಂದರು.

ಅಜ್ಜಯನಕೆರೆಗೆ ಕಲುಷಿತ ನೀರು ಸೇರದಂತೆ ರೂಪಾ ನಗರದಿಂದ ರಾಯನಕೆರೆವರೆಗೆ ಯುಜಿಡಿ ಸಂಪರ್ಕ ಕಲ್ಪಿಸಲು 25 ಕೋಟಿ ಕ್ರಿಯಾಯೋಜನೆ ಸಲ್ಲಿಸಲಾಗಿದೆ. ಸರ್ಕಾರದಿಂದ ಅನುಮೋದನೆ ಆಗಬೇಕಿದೆ' ಎಂದು ತಿಳಿಸಿದರು.

> ನಂಜನಗೂಡು, ಹುಣಸೂರು ಕೂಡ ಎಸ್‌ಬಿಎಂ-2ಗೆ ಸೇರಿದೆ' ಎಂದು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ಶುಭಾ ತಿಳಿಸಿದರು.

ಮಾಲೂರಿಗೆ ಯರಗೋಳ್ ಡ್ಯಾಂ ನೀರು ಪೂರೈಕೆ

• ಉದಯವಾಹಿನಿ, ಮಾಲೂರು

ಉದಯವಾಹಿನಿ ಚಿತ್ರ

ಪಟ್ಟಣದ ಮಾರುತಿ ಬಡಾವಣೆ ಬಳಿ ನಗರ ನೀರು ಸರಬರಾಜು ಒಳಚರಂಡಿ ಮಂಡಳಿ ವತಿಯಿಂದ ನಿರ್ಮಿಸಿರುವ ಓವರ್ ಹೆಡ್ ಟ್ಯಾಂಕ್‌ಗೆ ಯರಗೋಳ್ ಡ್ಯಾಂ ನೀರು ಪೂರೈಸಿ, ಪಟ್ಟಣದ ವಿವಿಧ ವಾರ್ಡ್‌ಗಳಿಗೆ ಶುದ್ಧ ಕುಡಿಯುವ ನೀರು ಸರಬರಾಜು ಮಾಡಲು ಚಾಲನೆ ನೀಡಲಾಯಿತು.

ಈ ವೇಳೆ ಶಾಸಕ ಕೆ.ವೈ.ನಂಜೇಗೌಡ ಮಾತನಾಡಿ, ಯರಗೋಳ್ ಕುಡಿಯುವ ನೀರಿನ ಯೋಜನೆಯಿಂದ ಪಟ್ಟಣದ ಓವರ್ ಹೆಡ್ ಟ್ಯಾಂಕ್‌ಗೆ ಪೈಪ್‌ಲೈನ್ ಮೂಲಕ ನೀರು ಪೂರೈಕೆಯಾಗಿದ್ದು, ಪಟ್ಟಣದ ಜನತೆಗೆ ಇದೇ ಸೋಮವಾರದಿಂದ ಪ್ರತಿನಿತ್ಯ 3.2 ದಶಲಕ್ಷ ಲೀಟರ್ ಶುದ್ಧ ಕುಡಿಯುವ ನೀರು ಪುರಸಭೆಯಿಂದ ಸರಬರಾಜು ಮಾಡಲಾಗುವುದು ಎಂದು ಹೇಳಿದರು. ಯರಗೋಳ್ ಡ್ಯಾಮ್‌ನಿಂದ ನೀರು ಸರಬರಾಜು ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಳೆದ 6 ತಿಂಗಳ ಹಿಂದೆ ಚಾಲನೆ ನೀಡಿದ್ದರು. ಆದರೆ, ಪಟ್ಟಣಕ್ಕೆ ನೀರು ತಲುಪಿರಲಿಲ್ಲ. ಈ ಹಿಂದೆ ಯರಗೋಳ್ ಡ್ಯಾಂ ನಿರ್ಮಾಣಕ್ಕೂ ಮೊದಲು ಪೈಪ್‌ಲೈನ್ ಮಾಡಿದ್ದರಿಂದ, ಪೈಪ್‌ಲೈನ್ ದುರಸ್ತಿಯಾದ ಕಾರಣ ಇಲಾಖೆ ಅಧಿಕಾರಿಗಳು ಪೈಪ್‌ಲೈನ್ ದುರಸ್ತಿಗೊಳಿಸಿ ಓವರ್ ಹೆಡ್ ಟ್ಯಾಂಕಿಗೆ ಶುದ್ಧ ಕುಡಿಯುವ ನೀರು ಸರಬರಾಜು ಮಾಡಲಾಗಿದೆ. ಇದೇ ಸೋಮವಾರದಿಂದ ಪಟ್ಟಣದ 12 ವಾರ್ಡ್‌ಗಳಿಗೆ ನೀರು ಸರಬರಾಜು ಆಗುತ್ತದೆ ಎಂದು ತಿಳಿಸಿದರು.

ಖಾಸಗಿ ಬಡಾವಣೆ ನಗರಸಭೆ, ಪ.ಪಂಚಾಯಿತಿಗೆ ಹಸ್ತಾಂತರ

• ಉದಯವಾಹಿನಿ, ಮೈಸೂರು

'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರವಾಗಿರುವ ಖಾಸಗಿ ಬಡಾವಣೆಗಳನ್ನು ಆಯಾ ವ್ಯಾಪ್ತಿಯ ನಗರಸಭೆ ಮತ್ತು ಪಟ್ಟಣ ಪಂಚಾಯಿತಿಗೆ ವಹಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಮುಡಾ ಅಧ್ಯಕ್ಷ ಕೆ.ಮರೀಗೌಡ ತಿಳಿಸಿದರು.ಪ್ರಾಧಿಕಾರದ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ನೇತೃತ್ವದ ಅಧಿಕಾರಿಗಳ ತಂಡದೊಂದಿಗೆ ಸೋಮನಾಥನಗರ, ಆರ್.ಟಿ.ನಗರ, ಸಿದ್ದರಾಮಯ್ಯ ಬಡಾವಣೆ, ಐಶ್ವರ್ಯ ನಗರ, ಎಸ್.ಬಿ.ಎಂ ಲೇಔಟ್, ಚಾಮುಂಡಿಬೆಟ್ಟದ ಬಳಿ ಇರುವ ವಿದ್ಯುತ್ ಚಿತಾಗಾರವನ್ನು ಶುಕ್ರವಾರ ಪರಿಶೀಲಿಸಿ ಅವರು ಮಾತನಾಡಿದರು. ಸೋಮನಾಥನಗರ ಬಡಾವಣೆಯಲ್ಲಿ ಒಳಚರಂಡಿ ವ್ಯವಸ್ಥೆ ಮತ್ತು ಸೆಪ್ಟಿಕ್ ಟ್ಯಾಂಕ್ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು. ಕೇರ್ಗಳ್ಳಿ ಕೆರೆಯಿಂದ ಬರುವ ನೀರು ಹರಿದು ಹೋಗಲು ಚರಂಡಿ ನಿರ್ಮಿಸಲಾಗುವುದು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆ ಮೇರೆಗೆ ಲಿಂಗಾಬುದ್ಧಿಪಾಳ್ಯದ ಸಿದ್ದರಾಮಯ್ಯ ಬಡಾವಣೆಗೆ ಒಳಚರಂಡಿ, ಕುಡಿಯುವ ನೀರು ಒದಗಿಸುವುದರೊಂದಿಗೆ ಸಂಪೂರ್ಣ ಅಭಿವೃದ್ಧಿ ಪಡಿಸಲಾಗುವುದು' ಎಂದು ಭರವಸೆ ನೀಡಿದರು.

ಆರ್.ಟಿ ನಗರದಲ್ಲಿ ನಿಜವಾದ ಭೂಮಾಲೀಕರಿಗೆ ತಲುಪಬೇಕಾದ ಹಣ ತಲುಪಿಸಲು ಕ್ರಮಕೈಗೊಳ್ಳಲಾಗುವುದು' ಎಂದರು.

ಸರ್ಕಾರಿ ಶಾಲೆಯ ಮಕ್ಕಳಿಗೆ ಲೇಖನ

ಅಂತರಾಳದಿಂದ... EDITORIAL

ವಿಷಯುಕ್ತ ಮದ್ಯ ಕುಡಿದು ಸಾವು ಸರ್ಕಾರದ್ದೇ ಸಂಪೂರ್ಣ ಹೊಣೆ

ಉದಯವಾಹಿನಿ ಚಿತ್ರ

ತಮಿಳುನಾಡಿನ ಉತ್ತರ ಭಾಗದ ಕಲ್ಲಕುರಿಚ್ಚಿ ಎಂಬಲ್ಲಿ ವಿಷಯುಕ್ತ ಮದ್ಯ ಕುಡಿದು ಎರಡು ದಿನಗಳಲ್ಲಿ 47 ಮಂದಿ ಮೃತಪಟ್ಟಿದ್ದಾರೆ. ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ನಡೆದ ಅತ್ಯಂತ ದೊಡ್ಡ ದುರಂತ ಇದು ಕಳೆದ ವರ್ಷವೂ ತಮಿಳುನಾಡಿನಲ್ಲಿ ವಿಷಯುಕ್ತ ಮದ್ಯದ ಎರಡು ದುರಂತಗಳು ನಡೆದಿದ್ದವು. ಅವುಗಳಲ್ಲಿ 17 ಜನರು ಮೃತಪಟ್ಟಿದ್ದರು. ಆದರೆ, ಅದಕ್ಕೂ ಹಿಂದಿನ 15 ವರ್ಷಗಳಲ್ಲಿ ಮದ್ಯಕ್ಕೆ ಸಂಬಂಧಿಸಿ ದುರಂತಗಳು ಘಟಿಸಿರಲಿಲ್ಲ. ಆಕ್ರಮವಾಗಿ ಮದ್ಯ ತಯಾರಿಸುವಿಕೆ, ಕಳ್ಳಬಟ್ಟಿಯಂತಹ ಪಿಡುಗನ್ನು ನಿಯಂತ್ರಿಸುವಲ್ಲಿ ಅಲ್ಲಿನ ಸರ್ಕಾರ ಯಶಸ್ವಿಯಾಗಿತ್ತು ಎಂದೇ ಭಾವಿಸಲಾಗಿತ್ತು. ಆಕ್ರಮ ಮದ್ಯ ತಯಾರಿಸಲು ಬಳಸಲಾಗುವ ಮೆಥನಾಲ್ ಪೂರೈಕೆ ಮತ್ತು ವಿತರಣೆಯನ್ನು ನಿಯಂತ್ರಿಸಲು ಕಾಯ್ದೆಗೆ ತಿದ್ದುಪಡಿಯನ್ನೂ ತರಲಾಗಿತ್ತು. ಆದರೆ, ಆಕ್ರಮ ಮದ್ಯ ತಯಾರಿ ಮತ್ತು ಪೂರೈಕೆಯ ಸಮಸ್ಯೆ ಇನ್ನೂ ಇದೆ ಎಂಬುದರತ್ತ ಕಲ ಕುರಿಚ್ಚಿ ಪ್ರಕರಣವು ಬೆಳಕು ಚೆಲ್ಲಿದೆ.

ಆಕ್ರಮ ಮದ್ಯ ತಯಾರಿಕೆ ಮತ್ತು ಮಾರಾಟ ಜಾಲವನ್ನು ಪತ್ತೆ ಮಾಡಿ. ತಡೆಯುವಲ್ಲಿ ಜಿಲ್ಲಾಡಳಿತ, ಪೊಲೀಸ್ ಇಲಾಖೆ. ಅಬಕಾರಿ ಇಲಾಖೆಯು ವಿಫಲವಾಗಿವೆ. ಮೆಥನಾಲ್ ಪೂರೈಕೆಯ ಮೇಲೆ ನಿಗಾ ಇರಿಸುವಲ್ಲಿಯೂ ಇಲಾಖೆಗಳು ವಿಫಲವಾಗಿವೆ. ಮದ್ಯದ ದರವನ್ನು ಟಾಸ್‌ಮ್ಯಾಕ್ ಹೆಚ್ಚಳ ಮಾಡಿದೆ. ಇದರಿಂದಾಗಿಯೂ ಜನರು ಅಗ್ಗದ ಮದ್ಯ ಪೂರೈಸುವವರಿಂದ ಮದ್ಯ ಖರೀದಿ ಮಾಡಿದ್ದಾರೆ. ಪ್ರಕರಣದಲ್ಲಿ ಕೆಲವರನ್ನು ಬಂಧಿಸಲಾಗಿದೆ. ಈ ದುರಂತಕ್ಕೆ ಕಾರಣರಾದ ಪ್ರತಿಯೊಬ್ಬರಿಗೂ ತಕ್ಕ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕು. ತಮಿಳುನಾಡಿನ ಬೇರೆ ಭಾಗಗಳಲ್ಲಿಯೂ ಆಕ್ರಮ ಮದ್ಯ ತಯಾರಿ ಜಾಲಗಳು ಇವೆ ಎಂಬುದರಲ್ಲಿ ಅನುಮಾನವೇನೂ ಇಲ್ಲ. ಅವುಗಳನ್ನು ಮುಚ್ಚಿಸುವ ದಿಸೆಯಲ್ಲಿ ಕೆಲಸ ಆಗಬೇಕು.

ಬಹುಶಃ. ಇಷ್ಟು ವರ್ಷಗಳಲ್ಲಿ ಸಾವು ನೋವು ಸಂಭವಿಸಿಲ್ಲದ ಕಾರಣ ಈ ಕುರಿತು ಯಾರೂ ಗಮನಹರಿಸಿರಲಿಲ್ಲ. ವಿಷಯುಕ್ತ ಮದ್ಯ ಕುಡಿದು ಜನರು ಸಾಯುತ್ತಿದ್ದಾರೆ ಎಂದರೆ ಆಡಳಿತದ ವೈಫಲ್ಯವೇ ಅದಕ್ಕೆ ಕಾರಣ. ರಾಜ್ಯ ಸರ್ಕಾರವನ್ನೇ ಅದಕ್ಕೆ ಹೊಣೆ ಮಾಡಬೇಕಾಗುತ್ತದೆ.

ಮದ್ಯವನ್ನು ಸಂಪೂರ್ಣವಾಗಿ ನಿಷೇಧಿಸುವುದು ಕಷ್ಟಸಾಧ್ಯ. ಆದರೆ, ಆರೋಗ್ಯಕರವಾದ ಮದ್ಯ ನೀತಿಯೊಂದನ್ನು ಜಾರಿಗೊಳಿಸುವುದು ಅಸಾಧ್ಯವೇನಲ್ಲ. ತಮಿಳುನಾಡು ರಾಜ್ಯ ಮಾರುಕಟ್ಟೆ ನಿಗಮ ನಿಯಮಿತವು (ಟಾಸ್‌ಮ್ಯಾಕ್) ಚಿಲ್ಲರೆ ಮದ್ಯ ಮಾರಾಟ ಮಳಿಗೆಗಳನ್ನು ನಿರ್ವಹಿಸುತ್ತಿದೆ. ಆದರೆ, ಅಗ್ಗದ ದರದಲ್ಲಿ ಹೆಚ್ಚು ಮತ್ತು ತರುವಂತಹ ಮದ್ಯವು ದೊರೆತಾಗ ಜನರು ಅದರತ್ತ ಆಕರ್ಷಿತರಾಗುತ್ತಾರೆ. ಪೊಲೀಸ್ ಇಲಾಖೆ, ಅಬಕಾರಿ ಇಲಾಖೆ ಮತ್ತು ಜಿಲ್ಲಾಡಳಿತವು ಜಾಗೃತವಾಗಿದ್ದರೆ ಇದನ್ನು ತಡೆಯುವುದು ಕಷ್ಟವೇನಲ್ಲ. ಮೆಥನಾಲ್ ಪೂರೈಕೆಯನ್ನು ನಿಯಂತ್ರಣದಲ್ಲಿ ಇರಿಸುವುದು ಕೂಡ ಅಸಾಧ್ಯವಲ್ಲ. ವಿಷಯುಕ್ತ ಮದ್ಯ ತಯಾರಿಸುವವರು. ಅದನ್ನು ಸಾಗಿಸುವವರು, ಅದನ್ನು ಮಾರುವವರದ್ದು ಒಂದು ಜಾಲವಾದರೆ. ಅವರನ್ನು ರಕ್ಷಿಸುವುದಕ್ಕೂ ಪೊಲೀಸರು ಮತ್ತು ಇತರ ಅಧಿಕಾರಿಗಳು ಇರುವ ಒಂದು ಜಾಲ ಇದೆ. ಸ್ಥಳೀಯ ಮಟ್ಟದಲ್ಲಿ ಇವರಿಗೆ ರಾಜಕೀಯ ರಕ್ಷಣೆಯೂ ಇದೆ. ಇಂತಹ ರಕ್ಷಣೆ ಇಲ್ಲದೆ ಈ ರೀತಿಯ ಆಕ್ರಮ ಚಟುವಟಿಕೆ ನಡೆಸಲು ಸಾಧ್ಯವಿಲ್ಲ. ಕಲ್ಲಕುರಿಚ್ಚಿ ಜಿಲ್ಲಾಧಿಕಾರಿಯನ್ನು ವರ್ಗಾಯಿಸಲಾಗಿದೆ. ಕೆಲವು ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ ಇಲ್ಲವೇ ವರ್ಗಾಯಿಸಲಾಗಿದೆ. ಆದರೆ, ಅನಾಹುತ ನಡೆದ ಬಳಿಕ ಇಂತಹ ಕ್ರಮಗಳನ್ನು ಕೈಗೊಳ್ಳುವುದರಿಂದ ಯಾವುದೇ ಪ್ರಯೋಜನ ಇಲ್ಲ.

ಆಕ್ರಮ ಮದ್ಯ ಕುಡಿದು ಸಂತ್ರಸ್ತರಾಗುವವರಲ್ಲಿ ಸಮಾಜದ ದುರ್ಬಲ ವರ್ಗದವರೇ ಇರುತ್ತಾರೆ. ಕಲ್ಲಕುರಿಚ್ಚಿಯಲ್ಲಿಯೂ ಹಲವು ಕುಟುಂಬಗಳು ಅನಾಥವಾಗಿವೆ. ಈ ಕುಟುಂಬಗಳು ಅನುಭವಿಸುವ ನೋವು ಮತ್ತು ಸಂಕಷ್ಟಗಳನ್ನು ಯಾವುದೇ ರೀತಿಯ ಪರಿಹಾರದಿಂದಲೂ ನಿವಾರಿಸಲು ಸಾಧ್ಯವಿಲ್ಲ.

• ಹಿಂದಿನ ಸಂಚಿಕೆಯಿಂದ

ದುರ್ಯೋಧನನ ಬಳಿ ಹೋಗಿ, '' ಪ್ರೀತಿಯಿಂದ ಸೋದರ ನಿನಗಾಗಿ ದುಃಖಿಸಬೇಡ. ಇದ್ದುದನ್ನೆಲ್ಲಾ ಕಳೆದುಕೊಂಡು, ಈಗ ಪ್ರಾಣವನ್ನು ಕಳೆದುಕೊಳ್ಳಲು ಕಾಯುತ್ತ ನೆಲದ ಮೇಲೆ ಬಿದ್ದಿರುವೆ. ಇದರಲ್ಲಿ ನಮ್ಮದೇನೂ ತಪ್ಪಿಲ್ಲ; ಎಲ್ಲವೂ ನೀನೇ ಮಾಡಿಕೊಂಡದ್ದು. ವಿಧಿಯ ಈ ಏರ್ಪಾಡನ್ನು ನಿನ್ನ ಮೇಲೆ ನೀನೇ ತಂದುಕೊಂಡಿರುವೆ. ದುರ್ಯೋಧನ, ನಿನ್ನನ್ನು ಕಂಡು ನನಗೆ ಅಸೂಯೆಯಾಗುತ್ತಿದೆ. ನೀನು ಸ್ವರ್ಗಕ್ಕೆ ಹೋಗುತ್ತಿದ್ದೀಯೆ, ಆದರೆ ನಾವು ಸಮಸ್ತ ವೈಭವವನ್ನೂ ಕಳೆದುಕೊಂಡ ಈ ಭೂಮಿಯ ಮೇಲೆ ಬದುಕಿರಬೇಕಾಗಿದೆ. ಮಹಾರಾಜ, ನಿನಗೆ ನಮ್ಮ ನಮಸ್ಕಾರ ಎಂದು ಹೃದಯವೇಧಕವಾದ ದುಃಖದಿಂದ ಅಳತೊಡಾಗಿದನು. ಈ ಒಬ್ಬ ಮನುಷ್ಯನಿಂದಾದ ಲೋಕನಾಶವೆಷ್ಟು! ಈಗ ಅವನ ನಾಶವೂ ಸಮೀಪಿಸಿದೆ.

ಸಾಮ್ರಾಟನಾಗಿರುವ ಇವನು ಭೀಮನಿಂದ ತೊಡೆ ಒಡೆಯಲಪ್ಪು ಭೂಮಿಯಲ್ಲಿ ಬಿದ್ದಿದ್ದಾನೆ! ಎಂಥ ದುರಂತ! ಮೃದುಹೃದಯದ ಯುಧಿಷ್ಠಿರನಿಗೆ ಇದನ್ನು ಸಹಿಸುವ ಸಾಮರ್ಥ್ಯವಿರಲಿಲ್ಲ.

★ ★ ★ ★

ಯುದ್ಧದಲ್ಲಿ ಭೀಮನ ಅಧರ್ಮಾಚರಣೆಯಿಂದ ಬಲರಾಮನಿಗೆ ಬಹಳ ಕೋಪ ಬಂದಿತ್ತು. ಅವನು, ''ಭೀಮ, ಈ ಹೊತ್ತು ನೀನು ಮಾಡಿದ ಕೆಲಸದಿಂದ ನಿನ್ನ ಗುರುವಿಗೆ ದೊಡ್ಡ ಅಪಚಾರ ಮಾಡಿರುವೆ. ಯುದ್ಧದಲ್ಲಿ ಶತ್ರುವಿಗೆ ಸೊಂಟದಿಂದ ಕೆಳಗೆ ಹೊಡೆಯುವುದುಂಟೆ! ಇದು ಯೋಧನಿಗೆ ತೀರ ಕೀಳು ನಡತೆ; ನನ್ನ ಶಿಷ್ಯನನ್ನು ಅನ್ಯಾಯದಿಂದ ಕೊಂದುದಕ್ಕಾಗಿ ನಾನು ನಿನ್ನನ್ನೀಗ ಕೊಲ್ಲುವೆ ಎಂದು ತನ್ನ ಹಲಾಯುಧವನ್ನೆತ್ತಿಕೊಂಡು ಭೀಮನ ಮೇಲೇರಿ ಬಂದನು. ಕೃಷ್ಣನು ಓಡಿಬಂದು, ತನ್ನ ಎರಡೂ ಕೈಗಳಿಂದ ಅಣ್ಣನನ್ನು ಅಪ್ಪಿ ಹಿಡಿದು, ಮಹಾ ಸಾಹಸದಿಂದ ಅವನನ್ನು ತಡೆದು, ''ಅಣ್ಣ, ನಿನ್ನ ಕೋಪವನ್ನು ಉಪಸಂಹರಿಸಿಕೋ. ಭೀಮನು ಮಾಡಿದ್ದು ಸರಿಯಾಗಿದೆ. ಇದು ಯುದ್ಧನಿಯಮಗಳಿಗೆ ವಿರೋಧವಾಗಿರಬಹುದು; ಆದರೆ ದುರ್ಯೋಧನನ ಮೇಲಿನ ನಿನ್ನ ಕುರುಡು ಪ್ರೀತಿಯ ಭರದಲ್ಲಿ ಅವನು ಪಾಂಡವರಿಗೆ ಮಾಡಿರುವ ಅನ್ಯಾಯಗಳನ್ನೆಲ್ಲ ನೀನು ಮರೆತಂತೆ ತೋರುತ್ತಿದೆ. ದುರ್ಯೋಧನನು ಯಾವಾಗ ನ್ಯಾಯವಾಗಿ ನಡೆದುಕೊಂಡಿದ್ದಾನೆ ಉದ್ದಕ್ಕೂ ಅವನು ಪಾಂಡವರಿಗೆ ಮೋಸ ಮಾಡಿಕೊಂಡೇ ಬಂದಿದ್ದಾನೆ. ಯುದ್ಧವನ್ನು ತಪ್ಪಿಸಲು ಪಾಂಡವರು ಇನ್ನಿಲ್ಲದ ಹಾಗೆ ಪ್ರಯತ್ನಪಟ್ಟರು. ನಿನಗದು ಗೊತ್ತು. ದ್ರೌಪದಿಯನ್ನು ಈ ದುರಹಂಕಾರಿಯ ಎದುರಿಗೆ ಎಳೆದು ತಂದಾಗ, ಇವನು ಪಾಂಡವರ ಸಮ್ಮುಖದಲ್ಲೇ ಅವಳಿಗೆ ತೊಡೆ ತಟ್ಟಿ ತೋರಿಸಿ, ತನ್ನ ರಾಣೀವಾಸವನ್ನು ಸೇರಿಕೋ ಎಂದು ಹೇಳಿ ಅವಮಾನ ಮಾಡಿದನು. ಯಾವ ಮನುಷ್ಯ ತನ್ನ ಹೆಂಡತಿಗಾದ ಇಂಥ ಅವಮಾನವನ್ನು ಸಹಿಸಿಕೊಳ್ಳುತ್ತಾನೆ ಈ ತೊಡೆಗಳನ್ನು ಆಗಲೇ ಒಡೆಯಬೇಕಾಗಿತ್ತು. ದುರ್ಯೋಧನನ ಕಡೆಗೆ ಹೊರಟ ಭೀಮನನ್ನು ಯುಧಿಷ್ಠಿರನು ತಡೆದ; ಆಗಲೇ ಭೀಮ ನಿನ್ನ ತೊಡೆಗಳನ್ನು ಒಂದಲ್ಲ ಒಂದು ದಿನ ಒಡೆಯುತ್ತೇನೆಂದು ಪ್ರತಿಜ್ಞೆ ಮಾಡಿದ.

ಮುಂದುವರಿಯುವುದು...

ಸಮಾರಂಭಗಳಲ್ಲಿ ಉಳಿಯುವ ಆಹಾರವನ್ನು ಸದುಪಯೋಗ ಮಾಡಬೇಕು

ಸಾಮಾಜಿಕ ಕಳಕಳಿ
ಹೆಚ್.ಎಸ್. ಪ್ರತಿಮಾ
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ ಶಿಕ್ಷಕಿ, ಹಾಸನ

• ಉದಯವಾಹಿನಿ, ವಿಶೇಷ

ಸರಿಸಮರು ಯಾರಿಹರು ಮಾನವರ ಬದುಕಿನಲಿ ಕರಿನೆರಳು ಬೀಳುವುದು ಸಹಜವದುವೆ ಪರಿಪರಿಯ ಬೇಡುವೆನು ಆಹಾರ ಹಂಚುತಿರಿ ಮರೆಯದೆಯೆ ಸಹಕರಿಸಿ ಲಕ್ಷ್ಮಿ ದೇವಿ

ಮೇಲಿನ ಮುಕ್ತ ಕದಂತೆ ಎಲ್ಲರೂ ಸರಿಸಮಾನರೇನಿಲ್ಲ. ಒಬ್ಬ ಕೆಳಗಾದರೆ ಇನ್ನೊಬ್ಬ ಮೇಲೆ ಎಂಬಂತೆ ಏರು ಪೇರುನ ಜೀವನ ಸಹಜವಾದದ್ದು ಎಂಬುದು ಅರ್ಥವಾಗುತ್ತದೆ. ಕಷ್ಟ -ಸುಖ, ನೋವು -ನಲಿವು, ಕಡಿಮೆ- ಹೆಚ್ಚು, ಏರು-ಇಳಿತ, ಹೀಗೆ ಎಷ್ಟೆಂದು ಅರ್ಥವನ್ನು ಹೇಳುವುದು. ಒಬ್ಬ ಬಡವನಾದರೆ ಇನ್ನೊಬ್ಬ ಶ್ರೀಮಂತ , ಶ್ರೀಮಂತನ ಕೈ ಕೆಳಗೆ ಹಲವಾರು ಬಡವರ ಕೆಲಸ ಮಾಡುತ್ತಾರೆ.

ಹಾಗೆಯೆ ಸರಿಸಮಾನರು ಈ ಭೂಮಿಯ ಮೇಲೆ ಯಾರು ಇಲ್ಲ. ಇಂದು ಶ್ರೀಮಂತ ನಾಳೆ ಬಡವ ನಾಗಬಲ್ಲ. ಇಂದು ಬಡವ ನಾಳೆ ಶ್ರೀಮಂತನಾಗಬಲ್ಲ. ಈ ಕಾಲದ ಆಟ ಏನಿದೆಯೋ ಯಾರಿಗೂ ತಿಳಿದಿಲ್ಲ. ಎಲ್ಲವೂ ವಿಧಿ ಲಿಖಿತ. ಇಂತಹ ಜೀವನದಲ್ಲಿ ಸ್ವಾರ್ಥಿಗಳ ದರ ಬಾರೆ ಹೆಚ್ಚು. ಸರಿಸಮರು ಇಲ್ಲದಿರುವ ಈ ಪ್ರಪಂಚದಲ್ಲಿ ಕಪ್ಪು ನೆರಳು ಹೇಳದೆ ಬೀಳುತ್ತದೆ. ಅಂದರೇನು ಯಾರಿಗೂ ತಿಳಿಯದೆ ಬರುತ್ತದೆ.

ನಾವು ಬಯಸುವುದು ಒಂದಾದರೆ ಇನ್ನೊಬ್ಬರಿಗೆ ಸಿಗುವುದೇ ಒಂದು. ಇಂತಹ ಪ್ರಪಂಚದಲ್ಲಿ ಎಲ್ಲವೂ ದುಬಾರಿಯಾಗಿ ಹೋಗಿದೆ. ಈ ಪ್ರಪಂಚದಲ್ಲಿ ಆಹಾರಕ್ಕೆ ಇರುವ ಬೆಲೆ ಬಹಳವಾದದ್ದು. ಮನುಷ್ಯನಿಗೆ ಗಾಳಿ, ನೀರು, ಆಹಾರ, ಬಟ್ಟೆ, ಹೀಗೆ ದಿನನಿತ್ಯದ ವಸ್ತುಗಳ ಅವಶ್ಯಕತೆ ಇದ್ದೇ ಇರುತ್ತದೆ. ಗಾಳಿ, ನೀರು, ಆಹಾರ, ಇಲ್ಲದಿದ್ದರೆ ಆತ ಜೀವಿಸಲು ಸಾಧ್ಯವಿಲ್ಲ.

ಅಂತಹದರಲ್ಲಿ ಇದು ಬಾರಿಯ ಜೀವನದಲ್ಲಿ ಮರೆಯದೆಯ ಸಹಕರಿಸಿ ನೀವು ಸಮಾರಂಭಗಳಲ್ಲಿ ಉಳಿಯುವಂತಹ ಆಹಾರವನ್ನು ಪ್ಲಾಸ್ಟಿಕ್ ಕವರ್ ಗಳಿಗೆ ಕಟ್ಟಿ ಎಸೆದಿರಿ ಅದನ್ನು ರಸ್ತೆ ಬದಿಯಲ್ಲಿರುವ ಎಷ್ಟೋ ಬಡವರು ಉಪವಾಸವಿರುತ್ತಾರೆ.

ಅವರಿಗೆ ಹಂಚಿ ವೃದ್ಧಾಶ್ರಮಗಳಿಗೆ ನೀಡಿ, ಅದು ಇಲ್ಲವೆಂದರೆ ರಸ್ತೆ ಬದಿಯಲ್ಲಿರುವ ಪ್ರಾಣಿಗಳಿಗೆ ಹಾಕಿ. ಇಂದು ನಾಯಿಗಳಿಗೆ ಆಹಾರ ಸಿಗದೇ, ಸಣ್ಣ ಮಕ್ಕಳನ್ನು ಕಂಡರೆ ಸಾಕು ಕಚ್ಚಿ ಮಕ್ಕಳನ್ನು ಚಿತ್ರಹಿಂಸೆ ಮಾಡುತ್ತಿವೆ. ಇದಕ್ಕೆಲ್ಲ ಕಾರಣ ಮೂಕ ಪ್ರಾಣಿಗಳಿಗೆ ಆಹಾರ ಸಿಗುತ್ತಿಲ್ಲ. ಪ್ರತಿಯೊಂದು ಅನ್ನದ ಅಗಲಿನ ಮೇಲೆ ತಿನ್ನುವವರ ಹೆಸರು ಬರೆದಿದೆ ಎಂದು ಹೇಳುವುದು ಹಿರಿಯರ ಒಂದು ಮಾತು.

ಅಂತಹ ಆಹಾರವನ್ನು ಊಟವಾಗಿ ನೀಡಬೇಕೆ ಹೊರತು ಅದನ್ನು ಎಲ್ಲಿ ಬೇಕೆಂದರೆ ಚೆಲ್ಲಬಾರದು. ಚೆಲ್ಲುವ ಪ್ರಕಾರಗಳು ಸಹ ಸರಿ ಇರುವುದಿಲ್ಲ. ಪ್ಲಾಸ್ಟಿಕ್ ಕವರ್‌ಗಳಲ್ಲಿ ಕಟ್ಟಿಗೆಯುವುದು, ಪ್ಲಾಸ್ಟಿಕ್ ಬಾಕ್ಸ್ ಗಳಲ್ಲಿ ಹಾಕಿ ಹಾಗೆ ಎಸೆಯುವುದು ಹೀಗೆ ಮಾಡಿದಾಗ ಯಾವ ಪ್ರಾಣಿಗಳಿಗೂ ಸಹ ಆಹಾರದಕ್ಕುವುದಿಲ್ಲ.

ಎಷ್ಟು ಮಂದಿ ಆಹಾರವಿಲ್ಲದೆ ದಿನನಿತ್ಯ ಸಾಯಿಸಿದ್ದಾರೆ. ಆಹಾರ ಬಿದ್ದವರಿಗೆ ಅದರ ಬೆಲೆ ತಿಳಿಯುತ್ತಿಲ್ಲ. ಒಂದು ತುತ್ತು ಅನ್ನ ಸಿಕ್ಕರೆ ಸಾಕು ಪ್ರಾಣ ಉಳಿಯುವುದು ಎಂಬ ಪರಿಸ್ಥಿತಿಯಲ್ಲಿ ನಮ್ಮ ಹಲವಾರು ಜನರು ಇದ್ದಾರೆ. ಒಮ್ಮೆ ನಾವು ಓಡಾಡುವ ಬೀದಿಯಲ್ಲಿ ಗಮನಿಸಿ ನೋಡಿ. ಆಹಾರಕ್ಕಾಗಿ ವೃದ್ಧರು ಬಹಳಷ್ಟು ಪರಿತಪಿಸುತ್ತಿರುತ್ತಾರೆ. ಹೀಗೆ ನಾನು ಒಂದು ಸಮಾರಂಭಕ್ಕೆ ಹೋಗಿದ್ದೆ ಅಲ್ಲಿ ಬಹಳಷ್ಟು ಜನ ಆಹಾರವನ್ನು ಹಾಕಿಸಿಕೊಂಡು ವ್ಯರ್ಥವಾಗಿ ಬಿಟ್ಟಿದ್ದರು. ನಾನು ಅವರಿಗೆ ಕೇಳಿದೆ ಏಕೆ ಹೀಗೆ ಬೇಡವೆಂದರೋ ಹಾಕಿಸಿಕೊಂಡು ಬಿಡುತ್ತೀರಾ ಎಷ್ಟು ಬೇಕು ಅಷ್ಟೇ ಹಾಕಿಸಿಕೊಳ್ಳಬೇಕೆಲ್ಲವೇ ಅಂದೆ. ಅವರು ವಿನಯತೆಯಿಂದ ಆಯ್ತು ಮೇಡಂ ಎಂದರು. ಮತ್ತೊಂದೆಡೆ ನೋಡಿದೆ. ಅಲ್ಲಿ ಸಣ್ಣ ಮಗುವನ್ನು ಕೂರಿಸಿ ದೊಡ್ಡವರು ತಿನ್ನುವಷ್ಟು ಹಣವನ್ನು ಹಾಕಿಸಿಕೊಂಡು ವ್ಯರ್ಥ ಮಾಡಿದರು. ಅವರಿಗೂ ನಾನು ಹೇಳಿದ್ದು ಒಂದೇ ಮಾತು ಆ ಮಗು ತನಗೆ ತಾನೆ ಊಟ ಮಾಡುವಷ್ಟು ದೊಡ್ಡವನಾಗಿಲ್ಲ ಮೇಡಂ ದಯಮಾಡಿ ನೀವು ಈ ರೀತಿಯ ಆಹಾರವನ್ನು ವ್ಯರ್ಥ ಮಾಡಬೇಡಿ ಎಂದೆ ಅವರು ಸಹ ನಗುನಗುತ್ತಾ ಇನ್ನೊಮ್ಮೆ ಆಗೋದು ಬಿಡಿ ಮೇಡಂ ಎಂದು ಹೇಳಿಕೊಂಡು ಹೋದರು. ನನಗೆ ಬಹಳಷ್ಟು ಬೇಸರವಾಯಿತು. ಈ ರೀತಿಯ ಆಹಾರದ ವ್ಯರ್ಥ ನಮಗೆ ನಾವು ಮಾಡಿಕೊಳ್ಳುತ್ತಿರುವ ನಷ್ಟವೆಂದು

ಉದಯವಾಹಿನಿ ಚಿತ್ರ

ಪ್ರಪಂಚದಲ್ಲಿ ಎಲ್ಲವೂ ದುಬಾರಿ

ಕೊಂಡೆ ಅಲ್ಲಿ ಊಟ ಮಿಕ್ಕಿದ್ದರೆ ವೃದ್ಧಾಶ್ರಮಗಳಿಗೂ ಅಥವಾ ಬಾಲ ಮಂದಿರಗಳಿಗೂ ನೀಡಿ ಎಂದು ಫೋನ್ ನಂಬರ್ ಕೊಟ್ಟು ಬಂದೆ ನಂತರದಲ್ಲಿ ಯಾಕೋ ಎರಡು ದಿನ ಬಹಳಷ್ಟು ಬೇಸರವಾಯಿತು . ಅದು ನನಗೆ ವಸತೇನೂ ಅಲ್ಲ ನಾನು ದಿನನಿತ್ಯ ನೋಡುತ್ತಿರುವ ಕೆಲಸವೇ ಅದು. ಹಾಗೆ ನಾನು ಒಂದು ಶಾಲೆಗೂ ಸಹ ಊಟಕ್ಕೆ ಕರೆದಾಗ ಹೋಗಿದ್ದೆ ಅಲ್ಲಿ ಊಟ ಮುಗಿಸಿ ಬಂದ ನಂತರದಲ್ಲಿ ಅಲ್ಲಿನ ಶಾಲಾ ಮುಖ್ಯಸ್ಥರು ಮಿಕ್ಕ ಊಟಗಳನ್ನು ಪರಿಚಿತರಿಗೆ ಫೋನ್ ಕರೆಗಳ ಮುಖಾಂತರ ಕರೆದು ಅವರಿಗೆ ಕೊಡುತ್ತಿದ್ದರು.

ಅದನ್ನು ಕಂಡ ನಾನು ಬಹಳ ಸಂತಸವನ್ನು ಪಟ್ಟೆ, ನಾನು ಹೇಳುವುದು ಒಂದೇ ಎಲ್ಲರೂ ದುಡಿಯುವುದು ಹೊಟ್ಟೆಗಾಗಿಯೇ, ಹಾಕುವ ಬಟ್ಟೆಗಾಗಿಯೇ, ಮನೆಯ ಮಂದಿ ಗೋಸ್ಕರ ಕಷ್ಟಪಡುತ್ತಾರೆ. ಅಂತಹದರಲ್ಲಿ ನಾವು ಯಾಕೆ ತಿಳಿದು ತಪ್ಪು ಮಾಡುತ್ತಿದ್ದೇವೆ. ನಮ್ಮ ಯುವ ಪೀಳಿಗೆಯಂತೂ ತಿನ್ನುವ ಆಹಾರಗಳನ್ನೆಲ್ಲ ಮುಖಕ್ಕೆ ಬಳಿದುಕೊಂಡು ಸಂಭ್ರಮಿಸುವುದು ಎಷ್ಟು ಸರಿ ಹೇಳಿ. ಅದನ್ನು ಬಡ ಮಕ್ಕಳಿಗೆ ನೀಡಿದರೆ ಸಂತಸದಿಂದ ತಿನ್ನುವರು. ನಮ್ಮ ಉದ್ದೇಶ ಒಳ್ಳೆಯದಾಗಿರಬೇಕು. ನಮ್ಮ ಉದ್ದೇಶ ಇತರರಿಗೆ ಉಪಕಾರವನ್ನು ಮಾಡುವ ರೀತಿಯಲ್ಲಿರಬೇಕು. ಆಗಲೇ ಅದು ನಮಗೆ ಪ್ರತಿಬಿಂಬವಾಗಿ ನಮ್ಮ ಜೀವನದಲ್ಲಿ ಒಳಿತನ್ನು ಮಾಡುತ್ತವೆ.

ಅಂಕಗಳ ಬೆನ್ನೇರಿ

ವಿಶ್ವಾಸ್.ಡಿ.ಗೌಡ

• ಉದಯವಾಹಿನಿ, ವಿಶೇಷ

ಎಲ್ಲರೂ ನೂರಕ್ಕೆ ನೂರು ಅಂಕ ತೆಗೆದುಕೊಂಡ ಬಗ್ಗೆಯೇ ಮಾತಾಡುತ್ತಿದ್ದಾರೆ ಅದು ಖಂಡಿತ ಸಾಧನೆಯೇ, ಜ್ಞಾನದಿಂದ ಬರೆದಿರಲಿ, ಕಂಠಪಾಠ ಮಾಡಿರಲಿ , ಎಲ್ಲದಕ್ಕೂ ಪ್ರಯತ್ನ ಅವಶ್ಯ.. ಮಕ್ಕಳಿಗೆಲ್ಲ ಶುಭಾಷಯಗಳನ್ನು ಹೇಳಲೇಬೇಕು. ಆದರೆ, ಪಾಲಕರಾಗಿ ನಾವಿಷ್ಟೇ ಮಾಡಿದರೆ ಸಾಕೇ..ನಾಗರೀಕರಾಗಿ ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಆಗಾಗ ಒರೆಗೆ ಹಚ್ಚಿ ಪರೀಕ್ಷಿಸುವ ಜವಾಬ್ದಾರಿ ನಮ್ಮದಲ್ಲವೇ,

ನಮ್ಮ ಶಿಕ್ಷಣ ಹೇಗಿದೆ ಅಂದರೆ ಬಿ.ಕಾಂ ಮಾಡಿದವನಿಗೆ ಚೆಕ್ ಬುಕ್ ಕೊಟ್ಟು ಪೇಮೆಂಟ್ ರೆಡಿ ಮಾಡು ಅಂದ್ರೆ ಚೆಕ್ ಬರ್ಯೋಕೆ ಬರಲ್ಲ. ಬ್ಯಾಂಕ್‌ಗೆ ಕಳಿಸಿ ಡಿಡಿ ತಗೊಂಬಾ ಅಂದ್ರೆ ಡಿಡಿ ಪಾರಂ ಪಿಲಪ್ ಮಾಡೊಕೆ ಅಲ್ಲಿಗೆ ಬಂದಿರೊರ ಹೆಲ್ಪ ತಗೊತಾನೆ ಇಂಡಸ್ಟ್ರಿಯಲ್ ಪ್ರೊಡಕ್ಶನ್ ಇಂಜಿನಿಯರ್ ಒಬ್ಬನಿಗೆ quote to cash process ಹೇಳೊ ಅಂದ್ರೆ ಖರೀದಿ, ಬಟವಡೆ, ಮಾರಾಟ, ವಸೂಲಿ ಅಂತ ಮಾತು ಮುಗಿಸ್ತಾನೆ ಬಿ.ಎಡ್ ಮಾಡಿ ಬಂದಿರೊ ವಿಜ್ಞಾನ ಶಿಕ್ಷಕ ಪೆಂಡೂಲಮ್ ತಯಾರಿಸಲು ಬೇಕಾದ ವಸ್ತುಗಳಿಗಾಗಿ ಪೇಟೆಗೆ ಹೊಗ್ತಾನೆ ಮನೇಲಿ ಸುಟ್ಟ ಬಲ್ಬ ಚೇಂಜ್ ಮಾಡೊಕೂ ಯೂಟ್ಯೂಬ್ ವಿಡಿಯೊ ನೋಡೊ ಕಾಲ ಇದು.

ಕೌಶಲ್ಯಗಳಿಗೆ ಶಾಲೆಗಳಲ್ಲಿ ಜಾಗವಿಲ್ಲ

ಎಲ್ಲಿಯವರೆಗೆ ಸಾಮಾನ್ಯ ಜ್

ಶಕ್ತಿ ಯೋಜನೆ ಬಂದರೂ ಸಿಗಲಿಲ್ಲ ಹೊಸ ಮಾರ್ಗ

ಕೆಂಭಾವಿ ಜನತೆಗೆ ಹಳೇ ಮಾರ್ಗವೇ ಗತಿ ಎಂದ ಅಧಿಕಾರಿಗಳು, ಬೇಡಿಕೆ ತಕ್ಕಂತೆ ಇಲ್ಲ ಬಸ್ ಪ್ರಯಾಣಿಕರ ಪರದಾಟ

• ಉದಯವಾಹಿನಿ, ಕೆಂಭಾವಿ

ರಾಜ್ಯ ಸರಕಾರದ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಶಕ್ತಿ ಯೋಜನೆ ಬಂದು ವರ್ಷ ಗತಿಸಿದರೂ ಕೂಡಾ ಯಾದಗಿರಿ ವಿಭಾಗದಿಂದ ಪಟ್ಟಣಕ್ಕೆ ಯಾವುದೇ ಹೊಸ ಮಾರ್ಗ ಸೃಷ್ಟಿಯಾಗದೇ ಇರುವುದು ಇಲ್ಲಿನ ಪ್ರಯಾಣಿಕರಿಗೆ ಹಳೆ ಮಾರ್ಗಗಳೇ ಗತಿ ಎನ್ನುವಂತಾಗಿದೆ. ಶಕ್ತಿ ಯೋಜನೆಯಿಂದ ಬಸ್‌ನಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಳ ಕಂಡಿದೆ. ಇದನ್ನು ಮನಗಂಡು ರಾಜ್ಯ ಸರಕಾರ ಹೊಸ ಬಸ್‌ಗಳನ್ನು ನೀಡಿ ಹೊಸ ಮಾರ್ಗ ಸೃಷ್ಟಿಸಿ ಪ್ರಯಾಣಿಕರಿಗೆ ತೊಂದರೆಯಾಗದಂತೆ ಕ್ರಮವಹಿಸಲು ತಿಳಿಸಿದೆ. ಇಷ್ಟಾಗ್ಯೂ ಕೂಡಾ ಇಲ್ಲಿನ ಅಧಿಕಾರಿಗಳು ಕೆಂಭಾವಿ ಮತ್ತು ವಲಯದಿಂದ ಪ್ರಯಾಣಿಸುವ ಪ್ರಯಾಣಕರಿಗೆ ಕೇವಲ ಒಂದೇ ಒಂದು ಹೊಸ ಮಾರ್ಗ ಆರಂಭಿಸಿ ಕೈ ತೊಳೆದುಕೊಂಡಿದೆ.

ಬೇಡಿಕೆ ತಕ್ಕಂತೆ ಇಲ್ಲ ಬಸ್ ಪ್ರಯಾಣಿಕರ ಪರದಾಟ

ಪ್ರಯಾಣಿಕರ ಮತ್ತು ವಿದ್ಯಾರ್ಥಿಗಳ ಬೇಡಿಕೆಗೆ ಅನುಗುಣವಾಗಿ ಬಸ್‌ಗಳು ಇಲ್ಲದೇ ಕೊರತೆ ಉಂಟಾಗಿದ್ದು, ಹೀಗಾಗಿ ಪ್ರಯಾಣಿಕರು ಇಲ್ಲಿನ ಬಸ್ ನಿಲ್ದಾಣದಲ್ಲಿ ಹೆಚ್ಚು ಕಾಲ ಕಳೆಯಬೇಕಾಗುತ್ತಿದೆ. ಇದರಿಂದ ಬಸ್ ನಿಲ್ದಾಣ ತುಂಬಿ ತುಳುಕಿದ್ದು, ಹಲವು ಪ್ರಯಾಣಿಕರು ಹೊರಗಡೆ ಬಸ್ ನಿಲ್ಲುವ ಸ್ಥಳದಲ್ಲಿ ನಿಂತು ಬಂದ ಬಸ್ಸಿಗೆ ಎದ್ನೋ,ಬಿದ್ನೋ ಎಂದು ಹತ್ತಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗಿದೆ. ಇದನ್ನು ನಿವಾರಿಸಿ ಹೊಸ ಮಾರ್ಗ ಆರಂಭಿಸುವುದು ಮತ್ತು ಇಲ್ಲಿನ ಬಸ್ ನಿಲ್ದಾಣಕ್ಕೆ ಹೈಟಕ್ ಟಚ್ ನೀಡುವಂತೆ ಇತ್ತಿಚೇಗೆ ಟಿಪ್ಪು ಸುಲ್ತಾನ ಅಭಿಮಾನಿಗಳ ಮಹಾವೇದಿಕೆ ಅಧ್ಯಕ್ಷ ಬಂದೇನವಾಜ್ ನಾಲತವಾಡ, ಕೆಂಭಾವಿ ನಾಗರೀಕರ ಹಿತ ರಕ್ಷಣಾ ಸಮಿತಿ ಸೇರಿ ಹತ್ತಹಲವು ಸಂಘಟನೆಗಳು ಸುಮಾರು ಬಾರಿ ಮನವಿ ಸಲ್ಲಿಸಿದರೂ , ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಕ್ಷೇತ್ರದ ಶಾಸಕ ದರ್ಶನಾಪುರ ಅವರ ಗಮನಕ್ಕೂ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ಹೊಸ ಹೊಸ ಬಸ್ ಮಾರ್ಗಗಳನ್ನು ಆರಂಭಿಸಬೇಕು ಇಲ್ಲವಾದರೆ ಹೋರಾಟದ ಎಚ್ಚರಿಕೆಯನ್ನು ಸಾರ್ವಜನಿಕರು ನೀಡಿದ್ದಾರೆ.

ಫಾರಂ 4ರಲ್ಲಿನ ಮಾತ್ರ ಓಡುವ ಬಸ್: ಕೆಂಭಾವಿ ಹಾಯ್ದುಹೋಗುವ ಹಲವು ನೂತನ ಬಸ್ ಮಾರ್ಗಗಳನ್ನು ತಯಾರಿಸಿ ಫಾರಂ.ನಂ.4ರ ತಯಾರಿಸಿರುವ ಅಧಿಕಾರಿಗಳು ಇನ್ನೇನು ರಸ್ತೆಗಿಳಿದು ಸಂಚಾರ ಮಾಡುವಷ್ಟರಲ್ಲಿಯೇ ರದ್ದು ಮಾಡಿದ ಹಲವು ನಿರ್ದೇಶನಗಳು ಕೆಂಭಾವಿ ಮೇಲೆ ಅಧಿಕಾರಿಗಳಿರುವ ನಿಷ್ಕಾಳಜಿ ಮತ್ತು ಮಲತಾಯಿ ಧೋರಣೆ ಎದ್ದು ತೋರಿಸುತ್ತಿದೆ.

ಉದಯವಾಹಿನಿ ಚಿತ್ರ

> ಮೊದಲಿನಿಂದಲೂ ಕೆಂಭಾವಿ ವಲಯದ ಮೇಲೆ ಸಾರಿಗೆ ಅಧಿಕಾರಿಗಳ ಮಲತಾಯಿ ಧೋರಣೆ ಇದ್ದು, ಇದೀಗ ಮತ್ತೊಮ್ಮೆ ಮುಂದುವರೆಸಿದ್ದಾರೆ. ಇನ್ನಾದಾರೂ ಹೊಸ ಬಸ್ ಓಡಿಸಿ ಪ್ರಯಾಣಿಕರಿಗೆ ಅನುಕೂಲ ಮಾಡಿ ಕೊಡಬೇಕು
> -ವೀರೇಶ್ ಕೆಂಭಾವಿ

> ಯಾದಗಿರಿ ವಿಭಾಗದಿಂದ ಗ್ಯಾರಂಟಿ ಯೋಜನೆ ಬಂದ ನಂತರ 70 ಹೊಸ ಮಾರ್ಗಗಳನ್ನು ಆರಂಭಿಸಲಾಗಿದೆ.ಇದರಲ್ಲಿ ಯಾವುದೇ ಹೊಸ ಬಸ್ ಪ್ರಾರಂಭಿಸಿಲ್ಲ. ಮುಂಬರುವ ದಿಗಳಲ್ಲಿ ಕೆಂಭಾವಿಗೂ ಹೊಸ ಮಾರ್ಗ ಸೃಷ್ಟಿಸಿ ಬಸ್ ಓಡಿಸಲಾಗುವುದು
> -ಮಲ್ಲಯ್ಯ ಹಿರೇಮಠ, ವಿಭಾಗೀಯ ಸಂಚಲಾನಾಧಿಕಾರಿ ಯಾದಗಿರಿ

ಇದ್ದ ಬಸ್‌ಗಳಿಗೂ ಕತ್ತರಿ ಪ್ರಯೋಗ

ಹೊಸ ಮಾರ್ಗ ಇಲ್ಲಿನ ಪ್ರಯಾಣಿಕರಿಗೆ ಗಗನಕುಸುಮವಾದರೇ ಇನ್ನೊಂದೆಡೆ ಈ ಹಿಂದೆ ಕೆಂಭಾವಿಯಿಂದ ಬೇರೆ ಕಡೆ ಹೋಗುತ್ತಿದ್ದ ಹಳೆಯ ಮಾರ್ಗಗಳಿಗೆ ಕತ್ತರಿ ಪ್ರಯೋಗ ಕೂಡಾ ಮಾಡುವ ಮೂಲಕ ಈ ಭಾಗಕ್ಕೆ ಮಲತಾಯಿ ಧೋರಣೆ ತೋರಿರುವುದು ಸ್ಪಷ್ಟವಾಗಿದೆ. ಇದಲ್ಲದೇ ಶಕ್ತಿ ಯೋಜನೆಯಿಂದ ದೂರದ ಧಾರ್ಮಿಕ ಸ್ಥಳಗಳಿಗೆ ಹೋಗಿ ದರ್ಶನ ಮಾಡಿಕೊಂಡು ಬರಬೇಕೆಂಬ ಆಸೆಯಲ್ಲಿದ್ದ ಮಹಿಳಾ ಪ್ರಯಾಣಿಕರಿಗೆ ನಿರಾಸೆ ಮೂಡಿಸಿದ್ದು, ಅನಿವಾರ್ಯವಾಗಿ ಶಹಾಪುರ, ಸುರಪುರ ಹಾಗೂ ಯಾದಗಿರಿಗೆ ತೆರಳಿ ಅಲ್ಲಿಂದ ತಾವು ಅಂದುಕೊಂಡ ಕಡೆ ಹೋಗಬೇಕಾಗಿದೆ.

ಕಾಡು ಹಂದಿ ಬೇಟೆ ಇಬ್ಬರ ಬಂಧನ

• ಉದಯವಾಹಿನಿ, ಚಿತ್ತಾಪುರ

ಉದಯವಾಹಿನಿ ಚಿತ್ರ

ಅರಣ್ಯ ಪ್ರದೇಶದಲ್ಲಿ ಕಾಡುಹಂದಿಯನ್ನು ಬೇಟೆಯಾಡಿದ ಇಬ್ಬರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ ಘಟನೆ ಶುಕ್ರವಾರ ನಡೆದಿದೆ. ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನವರು ಎನ್ನಲಾದ ಸೋಮೇಶ್ ತಂದೆ ಅಯ್ಯಪ್ಪಾ ಮತ್ತು ಅಂಬರೀಷ್ ತಂದೆ ಮಣಮಪ್ಪ ಎಂಬುವವರು ಚಿತ್ತಾಪುರ ಪೋಲಿಸ್ ಠಾಣಾ ವ್ಯಾಪ್ತಿಯ ಮುಡಬೂಳ್ ಗ್ರಾಮದ ಹತ್ತಿರ ಕಾಡು ಹಂದಿಯ ಬೇಡೆಯಾಡಿ ಬುಲೇರೋ ವಾಹನದಲ್ಲಿ ರಾಯಚೂರು ಕಡೆಗೆ ತೆಗೆದುಕೊಂಡು ಹೋಗುತ್ತಿರುವಾಗ ಕರ್ತವ್ಯ ನಿರತರಾಗಿದ್ದ ಬೀಟ್ ಪೊಲೀಸ್ ಪೇದೆ ಒಬ್ಬರು ತಪಾಸಣೆ ನಡೆಸಿದ ಠಾಣೆಗೆ ಕರೆತಂದು ಪಿಎಸ್‌ಐ ಶ್ರೀಶೈಲ ಅಂಬಾಟಿ ಅವರು ವಿಚಾರಣೆ ನಡೆಸಿದ ನಂತರ ವಲಯ ಅರಣ್ಯಾಧಿಕಾರಿಗಳಿಗೆ ಹಸ್ತಾಂತರಿಸಿದ್ದಾರೆ.

ಅರಣ್ಯ ಇಲಾಖೆಯ ಕಲಬುರ್ಗಿಯ ಡಿಸಿಎಫ್ ಸುಮಿತ್ ಪಾಟೀಲ್ ಅವರ ಮಾರ್ಗದರ್ಶನದಲ್ಲಿ ಐಎಫ್‌ಎಸ್ ಕಲಬುರಗಿ, ಎಸಿಎಫ್ ಎಂಡಿ.ಮುನೀರ್ ಅಹಮದ್ ಸರ್, ಆರ್‌ಎಫ್‌ಒ ವಿಜಯಕುಮಾರ್ ಅವರು ಕಾರ್ಯಾಚರಣೆ ನಡೆಸಿ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಜೆಎಂಎಫ್‌ಸಿ ನ್ಯಾಯಾಧೀಶರು ಆರೋಪಿಗಳನ್ನು 14 ದಿನಗಳ ಕಾಲ ನ್ಯಾಯಾಂಗ ಬಂಧನ ವಿಧಿಸಿದ್ದಾರೆ.

ಈ ಸಂದರ್ಭದಲ್ಲಿ ಡಿಆರ್‌ಎಫ್‌ಒ ಅನಿಲಕುಮಾರ, ಮಂಜುನಾಥ ಹಂದ್ರಾಳ್, ಸಂತೋಷ ಟೆಂಗಳಿ, ಜಟ್ಟೆಪ್ಪ ನಾವಿ, ಪೀರಪ್ಪ ಕತ್ತಿ, ಬೀಟ್ ಫಾರೆಸ್ಟರ್ ರಮೇಶ ಹಾದಿಮನಿ, ಚಂದ್ರಕಾಂತ್, ಜಾಫರ್, ಮಲ್ಲಪ್ಪ, ಮಹದೇವ ಸೇರಿದಂತೆ ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಇದ್ದರು.

ಬಿಜೆಪಿ ಆಡಳಿತದ ಸ್ಮಾರ್ಟ್ ಸಿಟಿ ಯೋಜನೆಯ ಕರ್ಮಕಾಂಡ ಬಯಲು

• ಉದಯವಾಹಿನಿ, ಮಂಗಳೂರು

ಉದಯವಾಹಿನಿ ಚಿತ್ರ

ಬಿಜೆಪಿ ಆಡಳಿತದ ಮಂಗಳೂರು ನಗರದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯ ಕರ್ಮಕಾಂಡ ಒಂದೊಂದಾಗಿ ಹೊರಬರುತ್ತಿದೆ. ಕಳಪೆ ಕಾಮಗಾರಿ, ಹಣ ಕಾಸು ದುರುಪಯೋಗ, ಭ್ರಷ್ಟಾಚಾರದಿಂದ ಇಡೀ ಯೋಜನೆ ಹಳ್ಳ ಹಿಡಿದಿದೆ. ಯಾರದೊ ಕಾಸು ಯಲ್ಲಮ್ಮನ ಜಾತ್ರೆ ಎಂಬಂತೆ ಜನಪ್ರತಿನಿಧಿಗಳು, ಅಧಿಕಾರಿಗಳು ನಡೆದುಕೊಳ್ಳುತ್ತಿದ್ದಾರೆ ಎಂದು ಡಿವೈಎಫ್‌ಐ ರಾಜ್ಯಾಧ್ಯಕ್ಷ, ಸಾಮಾಜಿಕ ಹೋರಾಟಗಾರ ಮುನೀರ್ ಕಾಟಿಪಳ್ಳ ಆರೋಪಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ಇದು ಮಂಗಳೂರು ಜಿಲ್ಲಾಧಿಕಾರಿ ಕಚೇರಿಯಿಂದ ವಾಣಿಜ್ಯ ಕೇಂದ್ರ ಹಳೆ ಬಂದರಿಗೆ ಸಾಗುವ ನೆಲ್ಲಿಕಾಯಿ ರಸ್ತೆ. ಈ ರಸ್ತೆಯನ್ನು ಒಟ್ರಾಶಿ ದುಡ್ಡು ಸುರಿದು ಸುಂದರವಾಗಿ ಕಾಣುವಂತೆ ನವೀಕರಣಗೊಳಿಸಲಾಗಿದೆ. ಈ ರಸ್ತೆಯ ಫುಟ್ ಪಾತ್‌ಗೆ ಹಾಕಿರುವ ಉತ್ಕೃಷ್ಟ ಗುಣಮಟ್ಟದ ಇಂಟರ್‌ಲಾಕ್‌ಗಳು ಅಲ್ಲಲ್ಲಿ ಎದ್ದು ಪಾದಚಾರಿಗಳು ಎಡವಿ ಬೀಳತೊಡಗಿದ್ದಾರೆ. ಇಷ್ಟು ಸಾಲದು ಎಂಬಂತೆ ಫುಟ್ ಪಾತ್ ನಲ್ಲಿ ಹಾಕಿರುವ ಗಟ್ಟಿಮುಟ್ಟಾದ ದುಬಾರಿ ದರದ ಚೇಂಬರ್‌ಗಳಲ್ಲಿ ಒಂದು ಪಾದ ಚಾರಿಗಳ ತೂಕ ಭರಿಸಲಾಗದೆ ಮುರಿದು ಹೋಗಿದೆ. ಈಗ ಕತ್ತಲೆಯಲ್ಲಿ ನಡೆಯುವಾಗ (ಹಗಲಲ್ಲೂ ಅಪಾಯ ಇದೆ) ಈ ಚೇಂಬರ್‌ಗೆ ಕಾಲಿಟ್ಟರೆ ಸೀದಾ ಚರಂಡಿಯ ಒಳಗಡೆ ಬೀಳಬೇಕು. ಆ ರೀತಿ ಬಿದ್ದಾಗ ಪ್ರಾಣ ಹೋದರೂ ಅಚ್ಚರಿಯಿಲ್ಲ. ಕೈಕಾಲು ಮುರಿಯುವುದಂತೂ ಗ್ಯಾರಂಟಿ. (ಈಗಾಗಲೆ ಮುರಿದಿರಲೂ ಬಹುದು) ಎಂದಿದ್ದಾರೆ.

> ಇದು ಬಿಜೆಪಿ ಆಡಳಿತದ ಸ್ಮಾರ್ಟ್ ಸಿಟಿಯ ದುರವಸ್ಥೆ. ಇಂತಹ ಅಧ್ವಾನಗಳು ದಿನಕ್ಕೊಂದು ಬಯಲಿಗೆ ಬರುತ್ತಿದೆ. ಭ್ರಷ್ಟಾಚಾರದ ಕತೆ ಒತ್ತಟ್ಟಿಗಿರಲಿ, ಮುರಿದಿರುವ ಚೇಂಬರ್ ತಕ್ಷಣವೇ ಬದಲಾಯಿಸಿ ನಾಗರಿಕರ ಪ್ರಾಣ, ಕೈಕಾಲು ಅಪಾಯಕ್ಕೀಡಾದಂತೆ ನೋಡಿಕೊಳ್ಳಬೇಕು ಎಂಬ ಕನಿಷ್ಟ ಪ್ರಜ್ಞೆಯೂ ಬಿಜೆಪಿ ಆಡಳಿತಕ್ಕಿಲ್ಲ. ಅವರು ಹೊಸ ಕಾಂಕ್ರೀಟ್ ರಸ್ತೆಗಳನ್ನು ನಿರ್ಮಿಸುವುದು, ಅಗೆಯುವುದು, ನಿರ್ಮಿಸುವುದು ಅಗೆಯುವುದು... ಎಂಬ ದುಡ್ಡು ಹೊಡೆಯುವ, ಕಮಿಷನ್ ಹೊಡೆಯುವ ಕಾಯಕದಲ್ಲೇ ಬಿಝಿಯಾಗಿದೆ
> -ಮುನೀರ್ ಕಾಟಿಪಳ್ಳ

ಸಿಎಂ ವಿರುದ್ಧ ಜನಾರ್ದನ ರೆಡ್ಡಿ ಆಕ್ಷೇಪಾರ್ಹ ಟೀಕೆ: ಕೈ ಬಣಗಳ ಪ್ರತಿಭಟನೆ

• ಉದಯವಾಹಿನಿ, ಗಂಗಾವತಿ

ಉದಯವಾಹಿನಿ ಚಿತ್ರ

ಪೆಟ್ರೋಲ್, ಡಿಸೇಲ್ ದರ ಹೆಚ್ಚಳ ಖಂಡಿಸಿ ಕೊಪ್ಪಳ ದಲ್ಲಿ ಬಿಜೆಪಿ ಹಮ್ಮಿಕೊಂಡಿದ್ದ ಪ್ರತಿಭಟನೆಯ ಸಂದರ್ಭದಲ್ಲಿ ಶಾಸಕ ಗಾಲಿ ಜನಾರ್ದನ ರೆಡ್ಡಿ ಸಿಎಂ ಸಿದ್ದರಾಮಯ್ಯ ಅವರ ವಿರುದ್ಧ ಆಕ್ಷೇಪಾರ್ಹ ಶಬ್ದಗಳಿಂದ ಟೀಕಿಸಿದ್ದನ್ನು ಖಂಡಿಸಿ ಗಂಗಾವತಿ ನಗರ ಹಾಗೂ ಗ್ರಾಮೀಣ ಬ್ಲಾಕ್ ಕಾಂಗ್ರೇಸ್ ಕರೆ ನೀಡಿದ್ದ ಪ್ರತಿಭಟನೆಯು ವಿಚಿತ್ರ ಸ್ವರೂಪದಿಂದ ಕೂಡಿತ್ತು. ಹಲವು ವರ್ಷಗಳಿಂದ ಗಂಗಾವತಿಯಲ್ಲಿ ಕಾಂಗ್ರೇಸ್ ಹಲವು ಬಣಗಳನ್ನು ಹೊಂದಿದ್ದು ಗುರುವಾರದ ಪ್ರತಿಭಟನೆಯಲ್ಲಿ ಮತ್ತೊಮ್ಮೆ ಕಾಂಗ್ರೆಸ್‌ಗೆ ಮುಜುಗರವಾಗುವಂತಹ ವಾತಾವರಣ ಸೃಷ್ಟಿಯಾಗಿತ್ತು.

ಶ್ರೀಕೃಷ್ಣದೇವರಾಯ ವೃತ್ತದಲ್ಲಿ ಒಂದು ಕಡೆ ಕಾಂಗ್ರೇಸ್ ಪಕ್ಷದ ಬ್ಲಾಕ್ ಅಧ್ಯಕ್ಷ ಶಾಮೀದ್ ಮನಿಯಾರ್ ಬಣ ಮತ್ತು ಮತ್ತೊಂದು ಕಡೆ ಮಾಜಿ ಸಚಿವ ಇಕ್ಬಾಲ್ ಅನ್ಸಾರಿಯ ಆಪ್ತರ ಬಣ ಪ್ರತೇಕ ಪ್ರತೇಕವಾಗಿ ವಿರುದ್ಧ ಪ್ರತಿಭಟನೆ ಮಾಡುವ ಮೂಲಕ ಶಾಸಕ ಗಾಲಿ ಜನಾರ್ದನರೆಡ್ಡಿ ಹೇಳಿಕೆಯನ್ನು ಖಂಡಿಸಲಾಯಿತು. ಈ ಸಂದರ್ಭದಲ್ಲಿ ಬಸ್ ನಿಲ್ದಾಣ ಹಾಗೂ ರಸ್ತೆಯುದ್ಕಕ್ಕೂ ನಿಂತಿದ್ದ ಜನರು ಕಾಂಗ್ರೇಸ್ ಪಕ್ಷದ ಬಣಗಳ ಪ್ರತೇಕ ಪ್ರತಿಭಟನೆ ಕಂಡು ಮನೋರಂಜನೆ ಪಡೆಯುವಂತಾಗಿತ್ತು.

ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ಶಾಮೀದ್ ಮನಿಯಾರ್ ಮಾತನಾಡಿ, ಶಾಸಕರಾಗಿರುವ ಜನಾರ್ದನ ರೆಡ್ಡಿಯವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಪಮಾನ ಮಾಡಿದ್ದಾರೆ. ಗೌರವಯುತವಾದ ಸ್ಥಾನದಲ್ಲಿರುವ ಮುಖ್ಯಮಂತ್ರಿಗಳಿಗೆ ಈ ರೀತಿಯಾಗಿ ಹೇಳಿಕೆ ನೀಡುವ ಮೂಲಕ ಅಪಮಾನ ಮಾಡಿರುವುದು ಖಂಡನೀಯ. ಕಾಂಗ್ರೇಸ್ ಪಕ್ಷದ ಸರಕಾರ ಅಧಿಕಾರಕ್ಕೆ ಬಂದ 1 ವರ್ಷದ ಅವಧಿಯಲ್ಲಿಯೇ ಜನಪರ ಯೋಜನೆಗಳಾಗಿರುವ 5 ಯೋಜನೆಗಳನ್ನು ಜಾರಿ ಮಾಡಿ, ಜನರ ವಿಶ್ವಾಸವನ್ನು ಪಡೆದುಕೊಂಡಿದ್ದಾರೆ.

> ಜನರಿಂದ ಆಯ್ಕೆಯಾಗಿರುವ ಮುಖ್ಯಮಂತ್ರಿಗಳಿಗೆ ತಳಮಟ್ಟದಲ್ಲಿ ಹೇಳಿಕೆ ನೀಡುವುದು ತಪ್ಪು, ಕೂಡಲೇ ಶಾಸಕ ಗಾಲಿ ಜನಾರ್ದನ ರೆಡ್ಡಿಯವರು ಹೇಳಿಕೆಯನ್ನು ವಾಪಸ್ ಪಡೆದುಕೊಳ್ಳಬೇಕು. ಇಲ್ಲದಿದ್ದರೆ ಮುಂದಿನ ದಿನಮಾನಗಳಲ್ಲಿ ರಾಜ್ಯದ ಎಲ್ಲಾ ಭಾಗಗಳಲ್ಲಿ ಹೋರಾಟಗಳನ್ನು ನಡೆಸಲಾಗುತ್ತದೆ ಎಂದು ಎಚ್ಚರಿಸಿದರು.

ಜಯದೇವ ಆಸ್ಪತ್ರೆ ಕಟ್ಟಿದ್ದು ಡಾ.ಮಂಜುನಾಥ ಅಲ್ಲ

• ಉದಯವಾಹಿನಿ, ಕಲಬುರಗಿ

ಡಾ.ಸಿ.ಎನ್. ಮಂಜುನಾಥ್ ಅವರು ಕಟ್ಟಿದ ಜಯದೇವ ಆಸ್ಪತ್ರೆಯ ಗೌರವ ರಾಜ್ಯ ಕಾಂಗ್ರೇಸ್ ಸರಕಾರ ಹಾಳು ಮಾಡುತ್ತಿದೆ ಎನ್ನುವ ಅಶೋಕ ಹೇಳಿಕೆಗೆ ತಿರುಗೇಟು ನೀಡಿದ ಸಚಿವ ಪ್ರಿಯಾಂಕ್ ಖರ್ಗೆ, ಜಯದೇವ ಆಸ್ಪತ್ರೆ ಮಂಜುನಾಥ್ ಕಟ್ಟಿದ್ದಲ್ಲ, ಸರಕಾರ ಕಟ್ಟಿ ಬೆಳೆಸಿದ ಆಸ್ಪತ್ರೆಯಾಗಿದೆ ಎಂದರು. ಕಲಬುರಗಿಗೆ ಜಯದೇವ ತಂದಿದ್ದು ಸಚಿವ ಡಾ. ಶರಣಪ್ರಕಾಶ ಪಾಟೀಲ್ ಹೊರತು ಬೇರೆಯವರಲ್ಲ ಎಂದು ಸಚಿವ ಖರ್ಗೆ ಹೇಳಿದರು.

ಸಿಎಸ್‌ಆರ್ ಅಡಿ ಶಾಲಾ ಕೋಣೆಗಳ ನಿರ್ಮಾಣ: ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಅಡಿ ಸುಮಾರು 2000 ಸಾವಿರ ಕೋ.ರೂ ವೆಚ್ಚದಲ್ಲಿ ಶಾಲಾ ಕೋಣೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ಸಚಿವ ಖರ್ಗೆ ಇದೇ ಸಂದರ್ಭದಲ್ಲಿ ತಿಳಿಸಿದರು.

ಸಿಎಸ್ ಆರ್ ಅಡಿಯಲ್ಲಿ ರೂ 2,000 ಕೋಟಿಯಲ್ಲಿ ಅನುದಾನ ಸಂಗ್ರಹಿಸಿ ಬೆಂಗಳೂರು ಹೊರತುಪಡಿಸಿ ಗ್ರಾಮೀಣ ಮಟ್ಟದ ಶಾಲೆಗಳಿಗೆ ಮೂಲಭೂತ ಸೌಲಭ್ಯ ಒದಗಿಸುವ ಯೋಚನೆ ಇದ್ದು ಎನ್‌ಆರ್ ಐ ಗಳು ಸೇರಿದಂತೆ ಇತರೆ ದಾನಿಗಳಿಂದ ಅನುದಾನ ಸಂಗ್ರಹಿಸಲಾಗುವುದು ಎಂದು ಹೇಳಿದರು.

ಉದಯವಾಹಿನಿ ಚಿತ್ರ

L& T ಕಂಪನಿ ವಿರುದ್ಧ ಕ್ರಮ

ಎಲ್ ಅಂಡ್ ಟಿ ಸಂಸ್ಥೆ ಕೈಗೆತ್ತಿಕೊಂಡಿರುವ ಕಾಮಗಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ ಎನ್ನುವ ದೂರುಗಳ ಹಿನ್ನೆಲೆ ನಿನ್ನೆ ಬೆಂಗಳೂರಿನಲ್ಲಿ ಸಿಎಸ್ ಮಟ್ಟದಲ್ಲಿ ಸಿಎಂ ಸಭೆ ನಡೆಸಿ ಕಂಪನಿಯ ಎಂಡಿಯೊಂದಿಗೆ ಚರ್ಚಿಸಿದ್ದು ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಸಚಿವ ಖರ್ಗೆ ಹೇಳಿದರು.

ಡಾ.ಕಮಲಾ ಹಂಪನಾ ನಿಧನಕ್ಕೆ ಸಚಿವ ಶಿವರಾಜ ತಂಗಡಗಿ ತೀವ್ರ ಶೋಕ

• ಉದಯವಾಹಿನಿ, ಕೊಪ್ಪಳ

ಕನ್ನಡದ ಹಿರಿಯ ಸಾಹಿತಿ ಡಾ.ಕಮಲಾ ಹಂಪನಾ ಅವರ ನಿಧನಕ್ಕೆ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ. ಡಾ. ಕಮಲಾ ಹಂಪನಾ ಅವರು ಕನ್ನಡ ಸಾಂಸ್ಕೃತಿಕ ಲೋಕದ ಆಸ್ತಿ, ಕಥೆ, ಕಾದಂಬರಿ, ವಿಮರ್ಶೆ, ವೈಚಾರಿಕ ಸಾಹಿತ್ಯ, ಶಿಶು ಸಾಹಿತ್ಯ, ಅನುವಾದ ಹಾಗೂ ಸಂಶೋಧನಾ ಸಾಹಿತ್ಯ ಹೀಗೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಅಮೂಲ್ಯವಾದ ಕೃತಿಗಳನ್ನು ರಚಿಸಿದ್ದ ಡಾ.ಕಮಲಾ ಹಂಪನಾ ಅವರು ಮಹಾರಾಣಿ ಕಾಲೇಜಿನಲ್ಲಿ ಅಧ್ಯಾಪಕರಾಗಿ ವೃತ್ತಿ ಆರಂಭಿಸಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾಗಿ ಹಾಗೂ ಮೈಸೂರು ವಿಶ್ವವಿದ್ಯಾಲಯ, ಹಂಪಿ ವಿಶ್ವವಿದ್ಯಾಲಯ ಮುಂತಾದ ಕಡೆಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಬಹಳ ದೊಡ್ಡ ಶಿಷ್ಯ ಪರಂಪರೆಯನ್ನು ಹೊಂದಿದ್ದಾರೆ.

71ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಅವರು, ನಾಡೋಜ ಸೇರಿದಂತೆ ವಿವಿಧ ಪ್ರತಿಷ್ಠಿತ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು. ಅವರ ಇಡೀ ಕುಟುಂಬ ಕನ್ನಡ ಸಾಂಸ್ಕೃತಿಕ ಲೋಕಕ್ಕೆ ಅನನ್ಯವಾದ ಕೊಡುಗೆಯನ್ನ ನೀಡುತ್ತಿದೆ.

ಭಗವಂತ ಅವರ ಕುಟುಂಬಕ್ಕೆ ಅವರ ಅಗಲಿಕೆಯ ಈ ದುಃಖವನ್ನು ಭರಿಸುವ ಶಕ್ತಿ ನೀಡಲಿ, ಕನ್ನಡ ಸಾಂಸ್ಕೃತಿಕ ಲೋಕ ಅವರನ್ನು ಸದಾ ಗೌರವಪೂರ್ವಕವಾಗಿ ನೆನಪಿಸಿಕೊಳ್ಳುತ್ತದೆ ಎ

ದಿನ ಭವಿಷ್ಯ

ರಾಹುಕಾಲ	ಬೆಳಿಗ್ಗೆ	05:58 ರಿಂದ 07:34
ಗುಳಿಕ ಕಾಲ	ಬೆಳಿಗ್ಗೆ	01:57 ರಿಂದ 03:33
ಯಮಗಂಡ ಕಾಲ	ಮಧ್ಯಹ್ನ	01:57 ರಿಂದ 03:33

ಮೇಷ ಸ್ನೇಹಿತರು ನಿಮ್ಮ ಆಲೋಚನೆಗಳ ಮೇಲೆ ಗಮನಾರ್ಹ ಪ್ರಭಾವ ಬೀರಬಹುದಾದ ಯಾರಾದರೂಬ್ಬರನ್ನು ನಿಮಗೆ ಪರಿಚಯಿಸುತ್ತಾರೆ. ನಿಮ್ಮ ಹಣವನ್ನು ಉಳಿಸಲು ನೀವು ಇಂದು ನಿಮ್ಮ ಮನೆಯ ಜನರೊಂದಿಗೆ ಮಾತನಾಡಬೇಕು. ಅವರ ಸಲಹೆ ನಿಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸಹಾಯಕವಾಗುತ್ತದೆ.

ವೃಷಭ ನಿಮ್ಮ ವ್ಯಕ್ತಿತ್ವವನ್ನು ಸುಧಾರಿಸಲು ಗಂಭೀರ ಪ್ರಯತ್ನಗಳನ್ನು ಮಾಡಿ. ಇಂದು ನೀವು ಸುಲಭವಾಗಿ ಬಂಡವಾಳ ಪಡೆಯಬಹುದು ?ಬಾಕಿಯಿರುವ ಸಾಲಗಳನ್ನು ಸಂಗ್ರಹಿಸಬಹುದು ಅಥವಾ ಹೊಸ ಯೋಜನೆಗಳಿಗೆ ಕೆಲಸ ಮಾಡಲು ಹಣ ಕೇಳಬಹುದು.

ಮಿಥುನ ನಿಮ್ಮ ಅನುಮಾನದ ಪ್ರಕೃತಿ ನಿಮಗೆ ಸೋಲಿನ ಮುಖ ತೋರಿಸಬಹುದು. ನಿಮ್ಮ ಜೀವನ ಸಂಗಾತಿಯೊಂದಿಗೆ ಸೇರಿ ಇಂದು ನೀವು ಭವಿಷ್ಯಕ್ಕೆ ಯಾವುದೇ ಆರ್ಥಿಕ ಯೋಜನೆಯನ್ನು ಮಾಡಬಹುದು ಮತ್ತು ಈ ಯೋಜನೆ ಯಶಸ್ಸಿಯಾಗಲಿದೆ ಎಂದು ಭರವಸೆ ಇದೆ.

ಕರ್ಕಾಟಕ ನಿಮ್ಮ ಮನಸ್ಸು ಒಳ್ಳೆಯ ವಿಷಯಗಳನ್ನು ಗ್ರಹಿಸುತ್ತದೆ. ನೀವು ಪ್ರಯಾಣ ಮಾಡುತ್ತಿದ್ದರೆ ನಿಮ್ಮ ಅಮೂಲ್ಯ ವಸ್ತುಗಳ ಬಗ್ಗೆ ವಿಶೇಷ ಗಮನ ಹರಿಸಿ, ನೀವು ಇದನ್ನು ಮಾಡದಿದ್ದರೆ ಸರಕುಗಳು ಕದಿಯುವ ಸಾಧ್ಯತೆಯಿದೆ. ನಿಮ್ಮ ಜ್ಞಾನದಾಹ ನಿಮಗೆ ಹೊಸ ಸ್ನೇಹಿತರನ್ನು ಪಡೆಯಲು ಸಹಾಯ ಮಾಡುತ್ತದೆ.

ಸಿಂಹ ನಿಮ್ಮ ಕಚೇರಿಯನ್ನು ಬೇಗನೆ ಬಿಡಲು, ನೀವು ನಿಜವಾಗಿಯೂ ಆನಂದಿಸುವದನ್ನು ಮಾಡಲು ಪ್ರಯತ್ನಿಸಿ. ಆರ್ಥಿಕವಾಗಿ ಇಂದು ನೀವು ಸಾಕಷ್ಟು ಬಲವಾಗಿ ಕಾಣುವಿರಿ, ಗ್ರಹ ಮತ್ತು ನಕ್ಷತ್ರಗಳ ಚಲನೆಯಿಂದ ಇಂದು ನಿಮಗಾಗಿ ಹಣವನ್ನು ಸಂಪಾದಿಸುವ ಅನೇಕ ಅವಕಾಶಗಳು ಉಂಟಾಗುತ್ತವೆ.

ಕನ್ಯಾ ಆಹಾರದ ಸ್ವಾದ ಉಪ್ಪಿನಿಂದ ಬರುವಂತೆ ಅತೃಪ್ತಿಯಿದ್ದಾಗಲೇ ನೀವು ಸಂತೋಷದ ಮೌಲ್ಯವನ್ನು ಅರ್ಥ ಮಾಡಿಕೊಳ್ಳುತ್ತೀರಿ. ಜೀವನ ಸಂಗಾತಿಯೊಂದಿಗೆ ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ಜಗಳವಾಗುವ ಸಾಧ್ಯತೆ ಇದೆ. ಇಂದು ನಿಮ್ಮ ದುಂದುಗಾರಿಕೆಯ ಮೇಲೆ ನಿಮ್ಮ ಸಂಗಾತಿ ನಿಮಗೆ ಮಾತುಗಳು ಹೇಳಬಹುದು.

ತುಲಾ ಇಂದು ನಿಮ್ಮನ್ನು ಆವರಿಸುವ ಭಾವನಾತ್ಮಕ ಮನಸ್ಥಿತಿಯಿಂದ ನೀವು ಹೊರಬರಲು ಬಯಸಿದರೆ ಹಿಂದಿನದ್ದೆಲ್ಲವನ್ನೂ ಮರೆತುಬಿಡಬೇಕು. ನೀವು ಇಂದು ಗಣನೀಯ ಪ್ರಮಾಣದ ಹಣವನ್ನು ಸಹ ಹೊಂದಿರುತ್ತೀರಿ ಮತ್ತು ಅದರೊಂದಿಗೆ ಮನಸ್ಸಿನ ಶಾಂತಿ ಇರುತ್ತದೆ.

ವೃಶ್ಚಿಕ ವಿಶೇಷವಾಗಿ ತಿರುವುಗಳಲ್ಲಿ ವಾಹನ ಚಾಲನೆ ಮಾಡುವಾಗ ಎಚ್ಚರಿಕೆಯಿಂದಿರಿ. ಬೇರೆಯವರ ಉದಾಸೀನತೆ ನಿಮಗೆ ಸಮಸ್ಯೆಗಳನ್ನು ಉಂಟುಮಾಡಬಹುದು. ನೀವು ನಿಮ್ಮ ಸ್ನೇಹಿತರೊಂದಿಗೆ ಎಲ್ಲಿಗಾದರೂ ಸುತ್ತಾಡಲು ಹೋಗುತ್ತಿದ್ದರೆ, ಹಣವನ್ನು ಚೆನ್ನಾಗಿ ಯೋಚಿಸಿ ಖರ್ಚು ಮಾಡಿ. ಹಣದ ನಷ್ಟವಾಗಬಹುದು.

ಧನಸ್ಸು ಆರೋಗ್ಯದ ಬಗ್ಗೆ ಸ್ವಲ್ಪ ಗಮನ ನೀಡಬೇಕು. ಇಂದಿನ ದಿನ, ನಿಮ್ಮ ಬಳಿ ಸಾಲವನ್ನು ಕೇಳುವ ಮತ್ತು ಅದನ್ನು ಹಿಂತಿರುಗಿಸದೆ ಇರುವಂತಹ ಸ್ನೇಹಿತರಿಂದ ನೀವು ನಿಮ್ಮನ್ನು ತಪ್ಪಿಸುವ ಅಗತ್ಯವಿದೆ. ಒಬ್ಬರು ಇನ್ನೊಬ್ಬರ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳುವ ಮೂಲಕ ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸಿ.

ಮಕರ ದ್ವೇಷದ ಭಾವನೆ ದುಬಾರಿಯೆನಿಸಬಹುದು. ಇದು ನಿಮ್ಮ ಸಹನೆಯನ್ನು ಕುಂಠಿತಗೊಳಿಸುವುದಷ್ಟೇ ಅಲ್ಲದೇ ನಿಮ್ಮ ವಿವೇಚನಾಶಕ್ತಿಯನ್ನೂ ಕುಂಠಿತಗೊಳಿಸುತ್ತದೆ, ಸಂಬಂಧದಲ್ಲಿ ಶಾಶ್ವತ ಬಿರುಕನ್ನು ಸೃಷ್ಟಿಸುತ್ತದೆ. ದಿನದ ಆರಂಭದಲ್ಲಿ ಇಂದು ನೀವು ಯಾವುದೇ ಆರ್ಥಿಕ ನಷ್ಟವನ್ನು ಹೊಂದಿರಬಹುದು.

ಕುಂಭ ನೀವು ವಿರಾಮದ ಸಂತೋಷವನ್ನು ಅನುಭವಿಸಲಿದ್ದೀರಿ. ಹಣಕಾಸು ಲಾಭ ಒಂದಕ್ಕಿಂತ ಹೆಚ್ಚು ಮೂಲಗಳಿಂದ ಬರುತ್ತದೆ. ನಿಮ್ಮ ಹಾಸ್ಯದ ಪ್ರಕೃತಿ ನಿಮ್ಮ ಸುತ್ತಮುತ್ತಲಿನ ಪರಿಸರವನ್ನು ಬೆಳಗಿಸುತ್ತದೆ. ನೀವು ಕೆಲವು ಪ್ರವಾಸೀ ತಾಣಗಳಿಗೆ ಭೇಟಿ ನೀಡುವ ಮೂಲಕ ನಿಮ್ಮ ಪ್ರೇಮ ಜೀವನವನ್ನು ಉಜ್ವಲಗೊಳಿಸಬಹುದು.

ಮೀನ ನಿಮ್ಮ ಸ್ನೇಹಿತರು ಅಥವಾ ಕುಟುಂಬ ಸದಸ್ಯರೊಂದಿಗಿನ ಸಂತಸದ ಪ್ರಯಾಣ ನಿಮಗೆ ಸಮಾಧಾನ ನೀಡುತ್ತದೆ. ಇಂದು ಸಾಲಗಾರನು ನಿಮಗೆ ಹೇಳದೆ ನಿಮ್ಮ ಖಾತೆಗೆ ಹಣವನ್ನು ಸೇರಿಸಬಹುದು. ಇದರ ಬಗ್ಗೆ ತಿಳಿದು ನೀವು ಆಶ್ಚರ್ಯಚಕಿತರಾಗಬಹು ಮತ್ತು ಸಂತೋಷವು ಪಡೆಯಬಹುದು.

ಅವ್ಯವಸ್ಥೆ ಬಗ್ಗೆ ಅಧಿಕಾರಿಗಳ ಗಮನ ಸೆಳೆಯಲು ಪ್ರಯತ್ನ

ಇದೇ ತುಂಗಾ ನದಿ ಮುಂದೆ ಹರಿಹರ, ಹೊಸಪೇಟೆಗೆ ಹೋಗುತ್ತದೆ. ಮಂತ್ರಾಲಯದಲ್ಲಿ ಬಳಸುವುದೂ ಇದೇ ನದಿ ನೀರು

• ಉದಯವಾಹಿನಿ, ಶಿವಮೊಗ್ಗ

ಉದಯವಾಹಿನಿ ಚಿತ್ರ

ಕೊಳಚೆ ಪ್ರದೇಶದಂತೆ ಕಾಣುತ್ತಿದೆ

ಮಂತ್ರಾಲಯದಲ್ಲಿ ರಾಯರ ದರ್ಶನಕ್ಕೆ ಹೋದಾಗ ತುಂಗಾ ನದಿ ನೀರನ್ನು ಕಣ್ಣಿಗೊತ್ತಿಕೊಂಡು ಪುಣ್ಯಸ್ನಾನ ಮಾಡುತ್ತೇವೆ. ಅದನ್ನು ತೀರ್ಥವೆಂದು ಸೇವಿಸುತ್ತೇವೆ. ಆದರೆ ಈ ತುಂಗಾ ನದಿ ಶಿವಮೊಗ್ಗದಲ್ಲಿ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ನಟ ಅನಿರುದ್ಧ್ ಜತ್ಕಾರ್ ಇತ್ತೀಚೆಗೆ ಅಲ್ಲಿಗೆ ಹೋಗಿದ್ದಾಗ ಕಣ್ಣಾರೆ ನೋಡಿ ಅಲ್ಲಿನ ಅವ್ಯವಸ್ಥೆ ಬಗ್ಗೆ ಜನಪ್ರತಿನಿಧಿಗಳ ಮತ್ತು ಅಧಿಕಾರಿಗಳ ಗಮನ ಸೆಳೆಯಲು ಪ್ರಯತ್ನಿಸಿದ್ದಾರೆ. ಶಿವಮೊಗ್ಗದ ಮೂಲಕ ಹಾದು ಹೋಗುವ ತುಂಗಾ ನದಿ ನೀರಿನ ದುಸ್ಥಿತಿ ಬಗ್ಗೆ ನಟ ಅನಿರುದ್ಧ್ ಜತ್ಕಾರ್ ಜನರ ಗಮನ ಸೆಳೆಯುವ ಪ್ರಯತ್ನ ಮಾಡಿದ್ದಾರೆ.

ತಮ್ಮ ಚೆಫ್ ಚಿದಂಬರ ಸಿನಿಮಾ ಪ್ರಮೋಷನ್ ಕಾರ್ಯಕ್ರಮಕ್ಕೆ ತೆರಳಿದಾಗ ಈ ನದಿಯ ದುಸ್ಥಿತಿ ಕಂಡು ಇದರ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ. ಇದೇ ತುಂಗಾ ನದಿ ಮುಂದೆ ಹರಿಹರ, ಹೊಸಪೇಟೆಗೆ ಹೋಗುತ್ತದೆ. ಅಷ್ಟೇ ಅಲ್ಲ, ಬಳಿಕ ಮಂತ್ರಾಲಯದಲ್ಲಿ ರಾಯರ ದರ್ಶನಕ್ಕೆ ಹೋದಾಗ ಬಳಸುವುದೂ ಇದೇ ನದಿ ನೀರನ್ನು. ಆದರೆ ಈ ನದಿ ಶಿವಮೊಗ್ಗದಲ್ಲಿರುವ ಅವಸ್ಥೆ ನೋಡಿದರೆ ನಿಜಕ್ಕೂ ಶಾಕ್ ಆಗುವುದು ಸಹಜ. ಈ ನದಿಗೆ ಇಲ್ಲಿ ಚರಂಡಿ ನೀರು ಬಂದು ಸೇರುತ್ತದೆ. ನದಿಯಲ್ಲಿ ಗಿಡ-ಗಂಟುಗಳು ಬೆಳೆದಿದ್ದು, ಕೊಳಚೆ ಪ್ರದೇಶದಂತೆ ಕಾಣುತ್ತಿದೆ. ನದಿಗೆ ಸಾಕಷ್ಟು ಕಸ ಸೇರುತ್ತಿದೆ. ಈ ಭಾಗಕ್ಕೆ ಬಂದರೆ ಕೊಳಚೆಗೆ ಬಂದಂತೆ ಕೆಟ್ಟ ವಾಸನೆ ಬರುತ್ತಿದೆ.

> ನದಿಗಳನ್ನು ನಾವು ದೇವರೆಂದು ಪೂಜಿಸುತ್ತೇವೆ. ನದಿ ತಾಯಿ ಸಮಾನ. ಇದೇ ನೀರು ಮಂತ್ರಾಲಯಕ್ಕೆ ಹೋಗುತ್ತದೆ. ಅಲ್ಲಿ ನಾವು ಪೂಜ್ಯ ಭಾವನೆಯಿಂದ ಅದನ್ನು ಸೇವಿಸುತ್ತೇವೆ. ಆದರೆ ಈ ನದಿ ನೀರಿಗೆ ಇಂತಹ ಕಲ್ಮಶಗಳೆಲ್ಲಾ ಸೇರಿ ಅದನ್ನೇ ನಾವು ಸೇವಿಸಿದರೆ ಅದು ಎಷ್ಟು ಅಪಾಯಕಾರಿ. ಹೀಗಾಗಿ ದಯವಿಟ್ಟು ನಮ್ಮ ಅಧಿಕಾರಿಗಳು, ಜನಪ್ರತಿನಿಧಿಗಳು ಈ ನದಿಯ ಅವ್ಯವಸ್ಥೆ ಸರಿಪಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ
> -ಅನಿರುದ್ಧ್, ನಟ

ನದಿಗಳು ನಮ್ಮ ಜೀವನಾಡಿ

ಅವುಗಳನ್ನು ಸ್ವಚ್ಛವಾಗಿಟ್ಟುಕೊಂಡರೆ ಅದು ಎಷ್ಟೋ ಜನರಿಗೆ ಬದುಕು ನೀಡುತ್ತದೆ. ಆದರೆ ಅದನ್ನೇ ಮಲಿನಗೊಳಿಸಿದರೆ ಅದು ನಮಗೆ ವಿಷವಾಗಬಹುದು. ತುಂಗಾ ನದಿ ಎಂದರೆ ನಮ್ಮ ಪ್ರಮುಖ ನದಿಗಳಲ್ಲೊಂದು. ಅದನ್ನು ಸ್ವಚ್ಛವಾಗಿ, ಸುಂದರವಾಗಿ ಕಾಪಾಡುವುದು ನಮ್ಮ ಹೊಣೆ. ನದಿಯ ಸುಧಾರಣೆ ಹೆಸರಿನಲ್ಲಿ ಕೋಟಿ ಕೋಟಿ ಹಣ ಪೋಲು ಮಾಡುವ ಬದಲು ಸರಿಯಾಗಿ ಯೋಜನೆ ರೂಪಿಸಿ ಅವುಗಳು ಉಪಯೋಗಕ್ಕೆ ಲಭ್ಯವಾಗುವಂತೆ ಮಾಡುವುದು ಜನನಾಯಕರ, ಅಧಿಕಾರಿಗಳ ಹೊಣೆಯಾಗಿರುತ್ತದೆ.

ಈ ನದಿಯ ಸ್ವಚ್ಛತೆ ಬಗ್ಗೆ ಯಾರೂ ಗಮನ ಕೊಡುತ್ತಿಲ್ಲ ಎನ್ನುವುದು ವಿಪರ್ಯಾಸ. ವಿಚಿತ್ರ ವೆಂದರೆ ಈ ನದಿಯ ಒಂದು ಬದಿಗೆ ಎತ್ತರವಾದ ತಡೆಗೋಡೆ ನಿರ್ಮಿಸಲಾಗಿದೆ. ಆದರೆ ಆ ಗೋಡೆ ಅಲ್ಲಿ ಅಗತ್ಯವೇ ಇರಲಿಲ್ಲ. ಇಲ್ಲಿನ ಸ್ಥಳೀಯರನ್ನು ವಿಚಾರಿಸಿದಾಗ ಈ ಯೋಜನೆಗೆ 103 ಕೋಟಿ ರೂ. ಖರ್ಚಾಗಿದೆ ಎಂದು ಮಾಹಿತಿ ಸಿಕ್ಕಿದೆ ಎಂದು ನಟ ಅನಿರುದ್ಧ್ ಹೇಳಿದ್ದಾರೆ. ಇಷ್ಟು ಎತ್ತರದ ಗೋಡೆಯಿಂದ ಅಪಾಯವೇ ಹೆಚ್ಚು, ಮಕ್ಕಳು ಅಥವಾ ಯಾರಾದರೂ ಇಲ್ಲಿಂದ ಬೀಳುವ ಅಪಾಯವಿದೆ. ಅದರ ಬದಲು ಮೆಟ್ಟಿಲುಗಳನ್ನು ನಿರ್ಮಿಸಿ ಜನರು ಬಂದು ಕೂತು ನದಿಯನ್ನು ವೀಕ್ಷಿಸುವ ರೀತಿ ಮಾಡಿದ್ದರೆ ಜನರಿಗೆ ಉಪಯೋಗವಾಗುತ್ತಿತ್ತು. ಜೊತೆಗೆ ನದಿ ನೀರಿಗೆ ಕಸ-ಕಡ್ಡಿ ಅಥವಾ ಚರಂಡಿ ನೀರು ಬಾರದಂತೆ ತಡೆದರೆ ಈ ನದಿ ನೀರು ಬಳಕೆಗೆ ಯೋಗ್ಯವಾಗುತ್ತದೆ ಎಂದು ಅವರು ಹೇಳಿದ್ದಾರೆ.

ರಸ್ತೆ ದುರಸ್ಥಿ ಮಾಡಿಸದಿದ್ದರೆ ಚುನಾವಣೆ ಬಹಿಷ್ಕಾರ

• ಉದಯವಾಹಿನಿ, ಜೇವರ್ಗಿ

ಉದಯವಾಹಿನಿ ಚಿತ್ರ

ಮಳೆಯಿಂದ ಕಿತ್ತುಹೋದ ರಸ್ತೆ ದುರಸ್ಥಿ ಮಾಡಬೇಕು ಈ ಸಮಸ್ಯೆ ಬಗೆ ಹರಿಸುವಂತೆ ಜೇವರ್ಗಿ ತಾಲ್ಲೂಕ ದಂಡಾಧಿಕಾರಿಗಳಿಗೆ ಮತ್ತು ಚುನಾಯಿತ ಜನಪ್ರನಿಧಿಗಳಿಗೆ ಹಲವು ಬಾರಿ ಮನವಿ ಮಾಡಿಕೊಂಡರು ಯಾವ ಪ್ರಯೋಜನ ಆಗಿಲ್ಲ. ಆದ್ದರಿಂದ ಮುಂಬರುವ ಜಿಲ್ಲಾ ಪಂಚಾಯತ ಮತ್ತು ತಾಲ್ಲೂಕ ಪಂಚಾಯತ ಚುನಾವಣೆಯನ್ನು ಗ್ರಾಮದ ರೈತರು ನಾವೆಲ್ಲರೂ ಬಹಿಸ್ಕಾರ ಮಾಡುವದಾಗಿ ರೈತರಾದ ಬಸ್ಸು ಸಾಹುಕಾರ್ ಅರಕೇರಿ ತಿಳಿಸಿದ್ದಾರೆ.

ಜೇವರ್ಗಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಮಾವನೂರ ಗ್ರಾಮದಿಂದ ಸೊನ್ನ ಗ್ರಾಮಕ್ಕೆ ಸಂಪರ್ಕಿಸುವ ಬಂಡಿ ದಾರಿ (ರಸ್ತೆ)ಮಳೆಯಿಂದ ಸಂಪೂರ್ಣ ಕೊಚ್ಚಿ ಹೋಗಿದೆ. ಈ ರಸ್ತೆ ಮೂಲಕ ನೂರಾರು ರೈತರು ತಮ್ಮ ಜಮೀನುಗಳಿಗೆ ವ್ಯವಸಾಯ ಮಾಡುವದಕ್ಕೆ ಬೆಳೆದ ತೊಗರಿ ಹತ್ತಿ ಇನ್ನಿತರ ಬೆಳೆಗಳು ಹೊಲಗಳಿಂದ ಮನೆಗಳಿಗೆ, ಮಾರುಕಟ್ಟೆಗೆ ಸಾಗಿಸುವದಕ್ಕೆ ಇರುವುದೊಂದೇ ರಸ್ತೆ ಪ್ರತಿ ವರ್ಷ ಮಳೆಗಾಲದಲ್ಲಿ ಈ ರಸ್ತೆ ಇದೇ ರೀತಿ ಹಾಳಾಗುತ್ತಿರುತ್ತದೆ ಇದರಿಂದ ನಮಗೆ ವ್ಯವಸಾಯ ಮಾಡುವದಕ್ಕೆ ತುಂಬಾ ತೊಂದ್ರೆ ಆಗುತ್ತಿದೆ. ಕ್ಷೇತ್ರದ ಶಾಸಕರು, ಕೆ ಕೆ ಆರ್ ಡಿ ಬಿ ಅಧ್ಯಕ್ಷರು ಆದ ಅಜಯ್ ಸಿಂಗ್ ರವರು ಇತ್ತ ಕಡೆ ಗಮನ ಹರಿಸಿ ರಸ್ತೆ ದುರಸ್ಥಿ ಮಾಡಿಸಿಕೊಡಬೇಕು ಎಂದು ಬಸ್ಸು ಸಾಹುಕಾರ್ ಅರಕೇರಿ ಆಗ್ರಹಿಸಿದರು.

> ರಸ್ತೆ ದುರಸ್ಥಿ ಮಾಡಿಸುವದಾಗಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕ್ರಿಯಾ ಯೋಜನೆ ಸಿದ್ದಪಡಿಸಿ ಕೆಲಸ ಮಾಡಿಸದೆ ಬಿಲ್ ಪಾವತಿ ಮಾಡಿಕೊಂಡಿರುವ ಬಗ್ಗೆ ನಮ್ಮ ಬಳಿ ದಾಖಲೆಗಳಿವೆ ಶೀಘ್ರದಲ್ಲಿ ತನಿಖೆ ಮಾಡಲು ಅರ್ಜಿ ಸಲ್ಲಿಸುತ್ತೇನೆ. ಗ್ರಾಮದ ಜನಿವಾರ ರಸ್ತೆ ಕೂಡ ಮಳೆಯಿಂದ ಸಂಪೂರ್ಣ ಹಾಳಾಗಿದೆ ರಸ್ತೆ ಒತ್ತುವರಿಯಾಗಿದೆ. ದುರಸ್ಥಿ ಮಾಡಿಸಲು ಶಾಸಕರಿಗೆ ಮನವಿ ಸಲ್ಲಿಸಿದ್ದೇವೆ ದುರಸ್ಥಿ ಮಾಡಿಸುವದಾಗಿ ಆಶ್ವಾಸನೆ ನೀಡಿದ್ದಾರೆ.
> -ಸಿದ್ದನಗೌಡ ಬಿರೆದಾರ
> ಸಾಮಾಜಿಕ ಹೋರಾಟಗಾರ

ಮಗನ ವರಸೆಯ ಸಂಬಂಧಿಯೊಂದಿಗೆ ಸರಸ ಗಂಡನಿಗೆ ವಿಷ ಹಾಕಿ ಕೊಂದ ಪತ್ನಿ

• ಉದಯವಾಹಿನಿ, ಚಿಕ್ಕಮಗಳೂರು

ಉದಯವಾಹಿನಿ ಚಿತ್ರ

ಪತ್ನಿಯ ಅನೈತಿಕ ಸಂಬಂಧವನ್ನು ಪ್ರಶ್ನಿಸಿದಕ್ಕೆ ಗಂಡನಿಗೆ ವಿಷ ಹಾಕಿ ಸಹಜ ಸಾವಿನ ಕಥೆ ಕಟ್ಟಿದ್ದ ಘಟನೆ ಕಡೂರು ತಾಲ್ಲೂಕಿನ ದೊಡ್ಡಿಬೀರನಹಳ್ಳಿ ಗ್ರಾಮದಲ್ಲಿ ನಡೆದಿದೆ. ಈ ರೀತಿ ತನ್ನ ಅಣ್ಣನ ಮಗನಿಂದಲೇ ಕೊಲೆಯಾದ ವ್ಯಕ್ತಿಯನ್ನು ಜಯಣ್ಣ(42) ಎಂದು ಗುರುತಿಸಲಾಗಿದೆ.

ಊಟದಲ್ಲಿ ವಿಷ ಹಾಕಿ ಕೊಲೆ ಮಾಡಿದ್ದು, ನಂತರ ಹೊಟ್ಟೆ ನೋವಿನಿಂದ ಸಾವನ್ನಪ್ಪಿದ್ದಾರೆ ಎಂದು ಕಥೆ ಕಟ್ಟಿದ್ದಾರೆ.

ಅಷ್ಟೇ ಅಲ್ಲದೇ ಮೃತ ದೇಹವನ್ನು ಕಾರಿನಲ್ಲಿ ಊರೆಲ್ಲಾ ಸುತ್ತಾಡಿಸಿ ಆಸ್ಪತ್ರೆಗೆ ಕರೆದೊಯ್ಯುವ ನಾಟಕವನ್ನು ಆಡಿದ್ದಾರೆ. ಸದ್ಯ ಮಗಳಿಂದ ಹತ್ಯೆಯ ಹಿಂದಿನ ಅಸಲಿ ಕಥೆ ರಿವಿಲ್ ಆಗಿದೆ. ಈ ಬಗ್ಗೆ ಸಂಬಂಧಿಕರಿಗೆ ಅನುಮಾನ ಬಂದು ಪೊಲೀಸರಿಗೆ ದೂರು ನೀಡಿದ್ದು, ವಿಚಾರಣೆ ವೇಳೆ ಮೃತ ಜಯಣ್ಣನ ಅಣ್ಣನ ಮಗ ಕಿರಣ್ ಜೊತೆ ಅನೈತಿಕ ಸಂಬಂಧ ಇದಿದ್ದು ದೃಢವಾಗಿದೆ.

ಅಲ್ಲದೇ ಮರಣೋತ್ತರ ವರದಿಯಲ್ಲಿ ಕೊಲೆ ಮಾಡಿರುವುದು ಗೊತ್ತಾಗಿದೆ. ಆರೋಪಿಗಳಾದ ಮೃತನ ಪತ್ನಿ ಶೃತಿ ಹಾಗೂ ಮಗ ಕಿರಣ್ ರಸನ್ನು ಸಖರಾಯಪಟ್ಟಣ ಠಾಣೆ ಪೊಲೀಸ್ ವಶಕ್ಕೆ ಪಡೆದಿದ್ದಾರೆ.

ಎತ್ತುಗಳನ್ನು ಪೂಜಿಸಿ ಆರಾಧಿಸುವ ಹಬ್ಬ ಕಾರ ಹುಣ್ಣಿಮೆ

• ಉದಯವಾಹಿನಿ, ಕೆಂಭಾವಿ

ಉದಯವಾಹಿನಿ ಚಿತ್ರ

ರೈತನೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ದುಡಿಯುವ ಎತ್ತುಗಳನ್ನು ಪೂಜಿಸಿ ಆರಾಧಿಸುವ ಹಬ್ಬ ಕಾರ ಹುಣ್ಣಿಮೆಯನ್ನು ಪಟ್ಟಣವು ಸೇರಿದಂತೆ ವಲಯದಲ್ಲಿ ರೈತರು ಸಂಭ್ರಮದಿಂದ ಆಚರಿಸಿದರು. ಸಂಪ್ರದಾಯದಂತೆ ಗ್ರಾಮಗಳ ಅಗಸಿಯಲ್ಲಿ ಬೇವಿನ ತಪ್ಪಲು, ಕೊಬ್ಬರಿಯ ಹಾರಮಾಡಿ ಅಗಸಿ ಬಾಗಿಲಿಗೆ ಕಟ್ಟುತ್ತಾರೆ. ರೈತರು ತಮ್ಮ ಸಿಂಗಾರಗೊಂಡ ಎತ್ತುಗಳನ್ನು ಪ್ರದರ್ಶನದೊಂದಿಗೆ ಮೆರವಣಿಗೆ ಮೂಲಕ ಓಡಿಸಿಕೊಂಡು ಬಂದು ಬಾಗಿಲಿಗೆ ಕಟ್ಟಿದ ಕೊಬ್ಬರಿಯನ್ನು ಹರಿದುಕೊಂಡು ಹೋಗುವುರು.

ಈ ಸಂದರ್ಭದಲ್ಲಿ ಬಿಳಿ ಎತ್ತು ಮೊದಲಾದರೆ ಬಿಳಿ ಧಾನ್ಯಗಳು, ಕೆಂಪೆತ್ತು ಮುಂದಾದರೆ ಕೆಂಪು ಕಾಳುಗಳ ಫಸಲು ಉತ್ತಮವಾಗಿ ಬೆಳೆಯುತ್ತವೆ ಎಂಬುವುದು ನಮ್ಮ ರೈತಾಪಿಗಳ ನಂಬಿಕೆ. ಕಾರ ಹುಣ್ಣುಮೆಯ ದಿನ ತಮಟೆ ವಾದ್ಯಗಳ ಸಮೆತ ಎತ್ತುಗಳ ಓಟದ ರೋಮಾಂಚನ ಸ್ಪರ್ಧೆಯ ಜನಪದ ಸಂಭ್ರಮ ಗ್ರಾಮೀಣ ಭಾಗಗಳಲ್ಲಿ ಇನ್ನೂ ಉಳಿದುಕೊಂಡಿರುವುದು ಹೆಮ್ಮೆಯ ವಿಷಯ ಎನ್ನಬಹುದ ರೈತರು ತಮ್ಮ ತಮ್ಮ ರಾಸುಗಳಿಗೆ ಬೆಳಿಗ್ಗೆಯೆ ಅರಿಸಿಣ, ಎಣ್ಣೆ ಈರುಳ್ಳಿ ಸೇರಿಸಿ ಅಂಬಲಿಯನ್ನು ಗೊಟ್ಟದ ಮೂಲಕ ಕುಡಿಸಿದರು.

ಕೊಂಬುಗಳನ್ನು ಕೆತ್ತಿ, ಜಳಕ ಮಾಡಿಸಿ ಮೈ ತುಂಬ ಬಣ್ಣ ಹಚ್ಚಿ, ಝುಲ್ಲಾ, ಕೊಂಬು ಅಣಸು, ಹಣಕಟ್ಟು, ಗೊಂಡೆ, ಮೋತಿಮೊಗಡ, ಕೊರಳ ಕರಿದಾಂಡು ಇತ್ಯಾದಿಗಳಿಂದ ಅಲಂಕರಿಸಿ, ಪೂಜೆ ಸಲ್ಲಿಸಿ, ಓಡಿಸುವ ಮೂಲಕ ರಾಸುಗಳ ಪ್ರದರ್ಶನದಿಂದ ಸಂಭ್ರಮಿಸಿದರು.

ನೀಟ್ ಪರೀಕ್ಷೆಯಲ್ಲಿ ಭಾರೀ ಅಕ್ರಮ ನಡೆದಿದೆ: ಸಚಿವ

• ಉದಯವಾಹಿನಿ, ರಾಯಚೂರು



ವೈದ್ಯಕೀಯ ಪ್ರವೇಶಾತಿಗೆ ನಡೆಯುವ ನೀಟ್ ಪರೀಕ್ಷೆಯಲ್ಲಿ ಭಾರೀ ಅಕ್ರಮ ನಡೆದಿರುವುದು ಬೆಳಕಿಗೆ ಬಂದಿದ್ದು, ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ಬಹು ದೊಡ್ಡ ಹಗರಣ ಇದಾಗಿದೆ ಎಂದು ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ ಹಾಗೂ ಜೀವನೋಪಾಯ ಸಚಿವ ಡಾ. ಶರಣ್ ಪ್ರಕಾಶ್ ಪಾಟೀಲ್ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಿನದಿಂದ ದಿನಕ್ಕೆ ನೀಟ್ ಪರೀಕ್ಷೆಯಲ್ಲಿ ಹೊಸ ಹೊಸ ಪ್ರಕರಣಗಳು ಆಚೆಗೆ ಬರುತ್ತಿವೆ. ಕೇಂದ್ರ ಸರ್ಕಾರದ ವೈಫಲ್ಯಗಳಿಂದಾಗಿ ಇತಿಹಾಸದಲ್ಲಿ ಮೊದಲ ಬಾರಿಗೆ ನೀಟ್ ಪರೀಕ್ಷೆಯಲ್ಲೂ ಅಕ್ರಮ ನಡೆದಿರುವುದು ಆಶ್ಚರ್ಯ ತಂದಿದ

ವಿದೇಶಿ ವಿದ್ಯಾರ್ಥಿಗಳಿಗೆ ಸ್ವಯಂಚಾಲಿತ ಗ್ರೀನ್‌ಕಾರ್ಡ್ ಒದಗಿಸುವ ಘೋಷಣೆ

ಇಲ್ಲಿ ಓದಿ ಭಾರತಕ್ಕೆ ಮರಳುತ್ತಾರೆ, ಕೋಟ್ಯಧೀಶರಾಗುತ್ತಾರೆ, ಭಾರತೀಯರ ಮೇಲೇಕೆ ಡೊನಾಲ್ಡ್ ಟ್ರಂಪ್ ಕಣ್ಣು?

ವಾಷಿಂಗ್ಟನ್: ವಲಸಿಗರ ವಿರುದ್ಧ ಸದಾ ಸಿಡಿಮಿಡಿಗೊಳ್ಳುತ್ತಿದ್ದ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಬದಲಾಗಿದ್ದಾರೆ. ವಲಸೆ ಕುರಿತಾದ ತಮ್ಮ ನಿಲವನ್ನು ಅವರು ಸಡಿಲಗೊಳಿಸಿದ್ದಾರೆ. ಭಾರತದಂತಹ ದೇಶಗಳಿಂದ ಬಂದು ಅಮೆರಿಕದ ಕಾಲೇಜುಗಳಲ್ಲಿ ಪದವಿ ಪಡೆಯುವ ವಿದೇಶಿ ವಿದ್ಯಾರ್ಥಿಗಳು ತಾಯ್ನಾಡಿಗೆ ಮರಳದಂತೆ ತಡೆದರೆ ಅಮೆರಿಕದ ಪ್ರಗತಿಗೆ ನೆರವಾಗಲಿದೆ ಎನ್ನುವುದು ಟ್ರಂಪ್ ಯೋಜನೆಯಾಗಿದೆ.

ಈ ಬಾರಿಯ ಅಧ್ಯಕ್ಷೀಯ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷದ ಜೋ ಬೈಡನ್ ಅವರನ್ನು ಅಧಿಕಾರದಿಂದ ಇಳಿಸಿ, ಎರಡನೇ ಬಾರಿಗೆ ಅಧ್ಯಕ್ಷರಾಗುವ ಬಯಕೆಯಲ್ಲಿರುವ ಟ್ರಂಪ್, ಭಾರತೀಯ ಸಮುದಾಯ ಸೇರಿದಂತೆ ಅಮೆರಿಕದಲ್ಲಿ ನೆಲೆಸಿರುವ ವಿವಿಧ ದೇಶಗಳ ಮತದಾರರನ್ನು ಸೆಳೆಯಲು ಗ್ರೀನ್ ಕಾರ್ಡ್ ಅಸ್ತ್ರ ಪ್ರಯೋಗಿಸಿದ್ದಾರೆ. ಅಮೆರಿಕದಲ್ಲಿ ಪದವಿ ಪಡೆದು ತಾಯ್ನಾಡಿಗೆ ವಾಪಸಾಗುವ ಭಾರತ ಹಾಗೂ ಚೀನಾದಂತಹ ದೇಶಗಳ ವಿದ್ಯಾರ್ಥಿಗಳು, ಅಲ್ಲಿ ಕೋಟ್ಯಧಿಪತಿಗಳಾಗುತ್ತಾರೆ. ಇದನ್ನು ತಡೆಯಲು ಅವರಿಗೆ ಸ್ವಯಂಚಾಲಿತ ಗ್ರೀನ್‌ಕಾರ್ಡ್ ವಿತರಿಸುವ ಭರವಸೆಯನ್ನು ಟ್ರಂಪ್ ನೀಡಿದ್ದಾರೆ. ಈ ವರ್ಷದ ನವೆಂಬರ್‌ನಲ್ಲಿ ನಡೆಯಲಿರುವ ಅಮೆರಿಕ ಅಧ್ಯಕ್ಷೀಯ ಚುನಾವಣೆಗೂ ಮುನ್ನ ಡೊನಾಲ್ಡ್ ಟ್ರಂಪ್ ಅವರ ವಲಸೆ ವಿರೋಧಿ ನಿಲುವಿನ ತದ್ವಿರುದ್ಧ ನಡೆ ಕುತೂಹಲ ಮೂಡಿಸಿದೆ. ವಲಸೆ ಹಾಗೂ ಅಕ್ರಮ ವಲಸಿಗರ ಗಡಿಪಾರು ಪ್ರತಿ ಬಾರಿಯೂ ಚುನಾವಣಾ ವಿಷಯವಾಗಿ ಮುನ್ನೆಲೆಗೆ ಬರುತ್ತಿದ್ದು, ಮತದಾರರನ್ನು ಸೆಳೆಯಲು ಪ್ರಮುಖ ಅಂಶವಾಗಿದೆ. ವಲಸೆ ವಿರೋಧಿ ನಿಲುವು ಹೊಂದಿದ್ದರೂ, ಟ್ರಂಪ್ ಅವರು ಅರ್ಹತೆ ಆಧಾರದ ಕಾನೂನುಬದ್ಧ ವಲಸೆ ವ್ಯವಸ್ಥೆಯನ್ನು ಸದಾ ಪ್ರತಿಪಾದಿಸುತ್ತಾ ಬಂದಿದ್ದಾರೆ.



ನಾನು ಏನು ಮಾಡಲು ಬಯಸಿದ್ದೇನೆ ಮತ್ತು ಏನು ಮಾಡುತ್ತೇನೆ ಎಂದರೆ– ನೀವು ಕಾಲೇಜು ಒಂದರಿಂದ ಪದವಿ ಪಡೆಯುತ್ತೀರಿ. ನಿಮ್ಮ ಡಿಪ್ಲೊಮಾದ ಭಾಗವಾಗಿ ನೀವು ಸ್ವಯಂಚಾಲಿತವಾಗಿ ಗ್ರೀನ್ ಕಾರ್ಡ್ ಪಡೆಯಬೇಕು ಎನ್ನುವುದು ನನ್ನ ಆಲೋಚನೆ. ಈ ದೇಶದಲ್ಲಿ ಉಳಿಯುವಂತೆ ನೆರವಾಗಲು ಗ್ರೀನ್ ಕಾರ್ಡ್ ಬೇಕು. ಹಾಗೆಯೇ ಇದು ಜೂನಿಯರ್ ಕಾಲೇಜುಗಳನ್ನೂ ಒಳಗೊಳ್ಳುತ್ತದೆ ಎಂದು ಟ್ರಂಪ್ ಅವರು 'ಆಲ್ ಇನ್' ಪಾಡ್‌ಕಾಸ್ಟ್‌ನಲ್ಲಿ ಹೇಳಿದ್ದಾರೆ.

ನಾವು ಹಾರ್ವರ್ಡ್, ಎಂಐಟಿಯಿಂದ, ಅತ್ಯದ್ಭುತ ಶಾಲೆಗಳಲ್ಲಿ ಓದಿದ ಜನರನ್ನು ಕಳೆದುಕೊಳ್ಳುತ್ತಿರುವುದು ಖೇದನೀಯ. ನಾನು ಏನು ಮಾಡಬೇಕೆಂದು ಬಯಸಿದ್ದೇನೆಯೋ, ಅದನ್ನು ಮಾಡಿಬಿಡುತ್ತಿದ್ದೆ. ಆದರೆ ಆಗ ನಾವು ಕೋವಿಡ್ ಸಮಸ್ಯೆಯನ್ನು ಬಗೆಹರಿಸಬೇಕಿತ್ತು. ಆಗ ಅದು ಒಂದಷ್ಟು ಕಾಲ ಪ್ರಾಬಲ್ಯ ಮೆರೆದಿತ್ತು ಎಂದು ತಾವು ಅಧಿಕಾರದಲ್ಲಿ ಇದ್ದಾಗ ಈ ಯೋಜನೆಯನ್ನು ಜಾರಿಗೆ ತರಲು ಸಾಧ್ಯವಾಗದ್ದಕ್ಕೆ ಕೋವಿಡ್ ಸಾಂಕ್ರಾಮಿಕ ಕಾರಣ ಎಂದು ತಿಳಿಸಿದ್ದಾರೆ.

ಕೋವಿಡ್ ಕಾರಣದಿಂದ ಸಾಧ್ಯವಾಗಿರಲಿಲ್ಲ

ಅಮೆರಿಕಕ್ಕೆ ಜಗತ್ತಿನ ಮೂಲೆ ಮೂಲೆಯಿಂದ ಅತ್ಯುತ್ತಮ ಮತ್ತು ಚಾಣಾಕ್ಷರನ್ನು ಆಮದು ಮಾಡಿಕೊಳ್ಳಲು ನಮಗೆ ಹೆಚ್ಚು ಶಕ್ತಿ ನೀಡುತ್ತೀರಿ ಎಂದು ನಮಗೆ ಮಾತು ಕೊಡಿ. ಪ್ರತಿಷ್ಠಿತ ಕಾಲೇಜಿನಲ್ಲಿ ಪದವಿ ಪಡೆಯುವ ವ್ಯಕ್ತಿಗಳು, ಇಲ್ಲಿಯೇ ಉಳಿದುಕೊಳ್ಳಬೇಕು ಎಂದು ಶತಾಯಗತಾಯ ಪ್ರಯತ್ನ ಮಾಡುತ್ತಾರೆ. ಒಂದು ಕಂಪೆನಿ, ಒಂದು ಪರಿಕಲ್ಪನೆಯ ಯೋಜನೆಗಳನ್ನು ಹೊಂದಿರುತ್ತಾರೆ. ಆದರೆ ಅವರ ಯೋಜನೆ ಫಲಪ್ರದವಾಗುವುದಿಲ್ಲ. ಅವರು ಭಾರತಕ್ಕೆ ವಾಪಸ್ ಹೋಗುತ್ತಾರೆ, ಅವರು ಚೀನಾಕ್ಕೆ ಮರಳುತ್ತಾರೆ. ಅವರು ಆ ಸ್ಥಳಗಳಲ್ಲಿ ಅದೇ ಮೂಲ ಕಂಪೆನಿಯನ್ನು ಸ್ಥಾಪಿಸುತ್ತಾರೆ. ಮತ್ತು ಅವರು ಸಾವಿರ ಮತ್ತು ಸಾವಿರಾರು ಮಂದಿಗೆ ಉದ್ಯೋಗ ನೀಡುವ ಮೂಲಕ ಬಹುಕೋಟಿ ಒಡೆಯರಾಗುತ್ತಾರೆ. ಇಂತಹ ಹಲವು ಕಥೆಗಳನ್ನು ಕೇಳಿದ್ದೇವೆ. ಅವರು ಅದನ್ನು ಇಲ್ಲಿಯೇ ಮಾಡಬಹುದಾಗಿದೆ ಎಂದು ಟ್ರಂಪ್ ತಮ್ಮ ಬದಲಾದ ನಿಲುವಿಗೆ ವಿವರಣೆ ಕೊಟ್ಟಿದ್ದಾರೆ.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಕಿಂಗ್‌ಪಿನ್‌ಗಾಗಿ ಹುಡುಕಾಟ



ನವದೆಹಲಿ: ನೀಟ್ ಪರೀಕ್ಷಾ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದ ಪ್ರಮುಖ ಆರೋಪಿ ಮತ್ತು ಕಿಂಗ್‌ಪಿನ್ ಸಂಜೀವ್ ಕುಮಾರ್ ಅಲಿಯಾಸ್ ಸಂಜೀವ್ ಮುಖಿಯಾಗಾಗಿ ಬಿಹಾರ ಪೊಲೀಸರು ತೀವ್ರ ಹುಡುಕಾಟ ನಡೆಸಿದ್ದಾರೆ. ಸಂಜೀವ್ ಮುಖಿಯಾ ಮೂಲತಃ ನಳಂದದ ನಾಗರನೌಸಾ ನಿವಾಸಿ ಆಗಿದ್ದು, ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದ ಪ್ರಮುಖ ಆರೋಪಿ ಎಂದು ಪೊಲೀಸರು ಶಂಕಿಸಿದ್ದಾರೆ. ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ಈತ ತಲೆಮರೆಸಿಕೊಂಡಿದ್ದಾನೆ.

ಸಂಜೀವ್ ಕಳೆದ ಎರಡು ದಶಕಗಳಿಂದ ವಿವಿಧ ಸ್ಪರ್ಧಾತಕ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳ ಸೋರಿಕೆ ದಂಧೆಯಲ್ಲಿ ತೊಡಗಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಇತ್ತೀಚೆಗೆ ಬಿಹಾರದಲ್ಲಿ ಮುಕ್ತಾಯಗೊಂಡ ಶಿಕ್ಷಕರ ಮರು ನೇಮಕಾತಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ಸೋರಿಕೆ ಪ್ರಕರಣದಲ್ಲೂ ಸಂಜೀವ್ ಮುಖಿಯಾ ಅವರ ಪುತ್ರ ಡಾ.ಶಿವಕುಮಾರ್ ಕೂಡ ಭಾಗಿಯಾಗಿ ಸದ್ಯ ಬಂಧನದಲ್ಲಿದ್ದಾರೆ. ಈ ಪ್ರಕರಣ ಬೆಳಕಿಗೆ ಬಂದ ನಂತದ ಆರ್ಥಿಕ ಅಪರಾಧಗಳ ಘಟಕ (ಇಒಯು) 279 ಆರೋಪಿಗಳನ್ನು ಬಂಧಿಸಿ 68 ದಿನಗಳ ಕಾಲ ತೀವ್ರ ತನಿಖೆ ನಡೆಸಿದ ಬಳಿಕ ಆರೋಪಿ ಶಿವಕುಮಾರ್‌ನನ್ನು ಜೈಲಿಗೆ ಕಳುಹಿಸಿದ್ದರು. 2010ರಿಂದ ಪ್ರಶ್ನೆ ಪತ್ರಿಕೆ ಸೋರಿಕೆ ದಂಧೆಯಲ್ಲಿ ತೊಡಗಿರುವ ಸಂಜೀವ್ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದ ಪ್ರಮುಖ ಆರೋಪಿಯಾಗಿದ್ದಾನೆ. ಈತ ತನ್ನದೇ ಆದ ಗ್ಯಾಂಗ್‌ಅನ್ನು ಮಾಡಿಕೊಂಡು ದಂಧೆ ನಡೆಸುತ್ತಿರುವುದಾಗಿ ಬಿಹಾರ ಪೊಲೀಸರು ಪತ್ತೆ ಹಚ್ಚಿದ್ದಾರೆ. ಇತ್ತೀಚೆಗಷ್ಟೇ ಸಂಜೀವ್ ಮುಖಿಯಾ ಮತ್ತವನ ಗ್ಯಾಂಗ್‌ನಿಂದ ಬಿಪಿಎಸ್‌ಸಿ (ಬಿಹಾರ ಲೋಕಸೇವಾ ಆಯೋಗ) ಪರೀಕ್ಷೆಯ ಪತ್ರಿಕೆಯೂ ಸೋರಿಕೆಯಾಗಿತ್ತು ಎಂಬ ಆರೋಪ ಇದೆ.

ದೇಶಾದ್ಯಂತ ನೆಟ್‌ವರ್ಕ್: ಸಂಜೀವ್ ಮುಖಿಯಾ ಅನೇಕ ಪೇಪರ್ ಸೋರಿಕೆಯಂತಹ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ ಎನ್ನಲಾಗುತ್ತಿದ್ದು, ಇದೀಗ ಅವರ ಹೆಸರೇ ಪ್ರಮುಖವಾಗಿ ಕೇಳಿ ಬರುತ್ತಿದೆ. ಈತ ದೇಶಾದ್ಯಂತ ನೆಟ್‌ವರ್ಕ್ ಹೊಂದಿದ್ದು, ತಮ್ಮ ಗ್ರೂಪ್ ಸದಸ್ಯರಿಂದ ಕಳೆದ 20 ವರ್ಷಗಳಿಂದ ದಂಧೆ ನಡೆಸುತ್ತಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ರಾಜಕೀಯದಲ್ಲೂ ಸಕ್ರಿಯ

ಸಂಜೀವ್ ಮುಖಿಯಾ ಹಣ ಬಲದ ಮೇಲೆ ತಮ್ಮ ರಾಜಕೀಯದಲ್ಲೂ ಸಕ್ರಿಯನಾಗಿದ್ದಾನೆ ಎನ್ನಲಾಗುತ್ತಿದೆ. ಸದ್ಯ ನೀಟ್ ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ತಲೆ ಮರೆಸಿಕೊಂಡಿರುವ ಆರೋಪಿ ಸಂಜೀವ್ ಮುಖಿಯಾಗಾಗಿ ಪೊಲೀಸರು ಶೋಧಕಾರ್ಯ ನಡೆಸುತ್ತಿದ್ದಾರೆ. ಇದೇ ಪ್ರಕರಣದಲ್ಲಿ ಇದೂ ವರೆಗೂ 14 ಜನರನ್ನು ಬಿಹಾರ ಪೊಲೀಸರು ಬಂಧಿ ಸಿದ್ದು, ಇವರೆಲ್ಲರನ್ನೂ ವಿಚಾರಣೆಗೆ ಒಳಪಡಿಸಲಾಗಿದೆ.

ಮಹಿಳೆ ಮೇಲೆ ಅತ್ಯಾಚಾರವೆಸಗಿ ಕೊಂದು ಬೆತ್ತಲೆ ದೇಹ ಪೊದೆಗೆ ಎಸೆದ ದುರುಳರು

ಹೈದರಾಬಾದ್: ದುಷ್ಕರ್ಮಿಗಳ ತಂಡವೊಂದು ಮಹಿಳೆ ಮೇಲೆ ಅತ್ಯಾಚಾರ ನಡೆಸಿ ನಂತರ ಕೊಲೆ ಮಾಡಿ ಬೆತ್ತಲೆ ದೇಹವನ್ನು ಪೊದೆಗಳಲ್ಲಿ ಎಸೆದು ಪರಾರಿಯಾಗಿರುವ ಘಟನೆ ಆಂಧ್ರಪ್ರದೇಶದ ಕುಗ್ರಾಮವೊಂದರಲ್ಲಿ ನಡೆದಿದೆ. ಬಾಪಟ್ಲಾ ಜಿಲ್ಲೆಯಲ್ಲಿ ಎಪುರುಪಾಲೇಂ ಗ್ರಾಮದ ಮಹಿಳೆಯ ಬೆತ್ತಲೆ ಶವ ಸಮೀಪದ ಬಾಲಕಿಯ ಪ್ರೌಢಶಾಲೆ ಬಳಿಯ ಪೊದೆಯೊಂದರಲ್ಲಿ ಪತ್ತೆಯಾಗಿದೆ. ಮಹಿಳೆಯು ಪ್ರಕತಿಯ ಕರೆಗೆ ಹಾಜರಾಗಲು ಹೋಗಿದ್ದ ಸಂದರ್ಭದಲ್ಲಿ ಇಂತಹ ಘಟನೆ ನಡೆದಿದೆ ಎಂದು ಬಪಟ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಕುಲ್ ಜಿಂದಾಲ್ ತಿಳಿಸಿದ್ದಾರೆ.

ಹತ್ಯೆಯ ತನಿಖೆಗಾಗಿ ಐದು ತಂಡಗಳನ್ನು ರಚಿಸಲಾಗಿದೆ ಮತ್ತು ಮಹಿಳೆಯ ಮೇಲೆ ಅತ್ಯಾಚಾರ ನಡೆದಿದೆ ಎಂದು ಪೊಲೀಸರು ಶಂಕಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಗ್ರಾಮಕ್ಕೆ ಭೇಟಿ ನೀಡುವಂತೆ ಗಹ ಸಚಿವ ವಂಗಲಪುಡಿ ಅನಿತಾ ಅವರಿಗೆ ಸೂಚಿಸಿದ್ದಾರೆ.

48 ಗಂಟೆಗಳಲ್ಲಿ ಅಪರಾಧಿಗಳನ್ನು ಬಂಧಿಸಬೇಕು. ಯಾವುದೇ ಲೋಪಕ್ಕೆ ಅವಕಾಶವಿಲ್ಲ ಮತ್ತು ಮುಖ್ಯಮಂತ್ರಿ 10 ಲಕ್ಷ ಪರಿಹಾರವನ್ನು ಘೋಷಿಸಿದ್ದಾರೆ ಎಂದು ಅನಿತಾ ಹೇಳಿದರು, ಹೆಚ್ಚಿದ ಮಾದಕ ದ್ರವ್ಯ ಸೇವನೆಯಿಂದ ಇಂತಹ ಅಪರಾಧಗಳು ಹೆಚ್ಚಾಗುತ್ತಿವೆ ಎಂದು ಸರ್ಕಾರ ಶಂಕಿಸಿದೆ.

ಆಂಧ್ರಪ್ರದೇಶವು ಮಾದಕವಸ್ತು ಪ್ರಕರಣಗಳನ್ನು ಎದುರಿಸಲು ಪ್ರತ್ಯೇಕ ಸೆಲ್ ಅನ್ನು ಸಹ ಹೊಂದಿಲ್ಲ, ಮಾದಕ ದ್ರವ್ಯ ಪೂರೈಕೆ ಮತ್ತು ದುರುಪಯೋಗವನ್ನು ತಡೆಯಲು ನಾವು ಯುದ್ಧದ ಆಧಾರದ ಮೇಲೆ ಕೆಲಸ ಮಾಡಲು ಉದ್ದೇಶಿಸಿದ್ದೇವೆ ಎಂದು ಅವರು ಹೇಳಿದರು.

ವಯನಾಡಿನಲ್ಲಿ ಪ್ರಿಯಾಂಕಾ ಪರ ದೀದಿ ಪ್ರಚಾರ

ನವದೆಹಲಿ: ರಾಹುಲ್‌ಗಾಂಧಿ ರಾಜೀನಾಮೆಯಿಂದ ತೆರವಾಗಲಿರುವ ಕೇರಳದ ವಯನಾಡಿನಿಂದ ಸ್ಪರ್ಧಿಸಲು ತೀರ್ಮಾನಿಸಿರುವ ಪ್ರಿಯಾಂಕಾ ಗಾಂಧಿ ವಾದ್ರಾಪರ ಚುನಾವಣಾ ಪ್ರಚಾರ ನಡೆಸಲು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸಮತಿಸಿದ್ದಾರೆ ಎಂದು ತಿಳಿದುಬಂದಿದೆ. ಈ ತಿಂಗಳ ಆರಂಭದಲ್ಲಿ ತನ್ನ ಸಹೋದರ ರಾಹುಲ್ ಗಾಂಧಿ ಗೆದ್ದ ಕೇರಳದ ಸೀಟಿನಿಂದ ಪ್ರಿಯಾಂಕಾ ಗಾಂಧಿ ಚುನಾವಣಾ ರಾಜಕೀಯಕ್ಕೆ ಕಾಲಿಡುತ್ತಿದ್ದಾರೆ. ಸೀಟು ಹಂಚಿಕೆಯಲ್ಲಿ ಭಿನ್ನಾಭಿಪ್ರಾಯದಿಂದಾಗಿ ಮಮತಾ ಬ್ಯಾನರ್ಜಿ, ಕಾಂಗ್ರೇಸ್ ಪಶ್ಚಿಮ ಬಂಗಾಳ ಲೋಕಸಭೆ ಚುನಾವಣೆಯಲ್ಲಿ ಮೈತ್ರಿ ಮಾಡಿಕೊಂಡು ಸ್ಪರ್ಧಿಸಿರಲಿಲ್ಲ. ಆದಾಗ್ಯೂ, ಎರಡು ಪಕ್ಷಗಳು ಇಂಡಿ ಒಕ್ಕೂಟದ ಪಾಲುದಾರ ಮಿತ್ರಪಕ್ಷಗಳಾಗಿ ಉಳಿದಿವೆ.

ಡಿಸೆಂಬರ್‌ನಲ್ಲಿ, ವಾರಣಾಸಿಯಲ್ಲಿ ಪ್ರಿಯಾಂಕಾ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಸ್ಪರ್ಧಿಸಬೇಕು ಎಂದು ಬ್ಯಾನರ್ಜಿ ಸಲಹೆ ನೀಡಿದ್ದರು ಎಂದು ಮೂಲಗಳನ್ನು ಉಲ್ಲೇಖಿಸಿ ಈ ವರದಿ ಕೇಳಿಬಂದಿದೆ.

ಎರಡು ಪಕ್ಷಗಳ ನಡುವಿನ ಭಿನ್ನಮತ ದೂರ

ಅಧೀರ್ ರಂಜನ್ ಚೌಧರಿ ಅವರು ಮಮತಾ ಬ್ಯಾನರ್ಜಿ ಅವರನ್ನು ಗುರಿಯಾಗಿಸಿ ಸಾರ್ವಜನಿಕ ಹೇಳಿಕೆಗಳನ್ನು ನೀಡಿದ ನಂತರ ಟಿಎಂಸಿ ಮತ್ತು ಕಾಂಗ್ರೇಸ್ ನಡುವಿನ ಸಂಬಂಧ ಹದಗೆಟ್ಟಿತು ಇದೀಗ ಎರಡು ಪಕ್ಷಗಳ ನಡುವಿನ ಭಿನ್ನಮತ ದೂರವಾಗುತ್ತಿರುವ ಸೂಚನೆಗಳು ದೊರೆತ ನಂತರ ಇಂತಹ ಮಾತುಗಳು ಕೇಳಿ ಬರುತ್ತಿದೆ.

ರಾಮ, ಕೃಷ್ಣನ ಯಾತ್ರಾಸ್ಥಳವಾಗಲಿದೆ ಮಧ್ಯಪ್ರದೇಶ

ಭೋಪಾಲ್: ಮಧ್ಯ ಪ್ರದೇಶವನ್ನು ರಾಮ ಮತ್ತು ಕೃಷ್ಣನಿಗೆ ಸಂಬಂಧಿಸಿದ ಯಾತ್ರಾ ಸ್ಥಳವನ್ನಾಗಿ ಪರಿವರ್ತಿಸಲು ತೀರ್ಮಾನಿಸಲಾಗಿದೆ. ರಾಜ್ಯದಲ್ಲಿ ರಾಮ ಮತ್ತು ಕಷ್ಣನಿಗೆ ಸಂಬಂಧಿಸಿದ ಸ್ಥಳಗಳನ್ನು ಯಾತ್ರಾ ಸ್ಥಳಗಳಾಗಿ ಅಭಿವದ್ಧಿಪಡಿಸಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಮೋಹನ್ ಯಾದವ್ ಹೇಳಿದ್ದಾರೆ. ರಾಜ್ಯ ರಾಜಧಾನಿ ಭೋಪಾಲ್‌ನ ಪ್ರವೇಶ ದ್ವಾರಗಳಲ್ಲಿ ಈ ದೇವತೆಗಳಿಗೆ ಸಮರ್ಪಿತವಾದ ಸ್ವಾಗತ ದ್ವಾರಗಳನ್ನು ನಿರ್ಮಿಸಲು ಸರ್ಕಾರ ನಿರ್ಧರಿಸಿದೆ ಎಂದು ಅವರು ಹೇಳಿದರು.

ನಿನ್ನೆ ನಡೆದ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಇಲಾಖೆಯ ಪರಿಶೀಲನಾ ಸಭೆಯಲ್ಲಿ ಸಿಎಂ ಯಾದವ್ ಈ ಕುರಿತು ನಿರ್ದೇಶನ ನೀಡಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮಧ್ಯಪ್ರದೇಶ ಸರ್ಕಾರವು ರಾಜ್ಯದಲ್ಲಿ ರಾಮ, ಕಷ್ಣನಿಗೆ ಸಂಬಂಧಿಸಿದ ಸ್ಥಳಗಳನ್ನು ಗುರುತಿಸುತ್ತದೆ ಮತ್ತು ಅವುಗಳನ್ನು ಯಾತ್ರಾ ಸ್ಥಳಗಳಾಗಿ ಅಭಿವದ್ಧಿಪಡಿಸುತ್ತದೆ ಎಂದು ಯಾದವ್ ಹೇಳಿದರು.

ಧಾರ್ಮಿಕ ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಧಾರ್ಮಿಕ ಸ್ಥಳಗಳನ್ನು ಅಭಿವದ್ಧಿಪಡಿಸುವ ಯೋಜನೆಗಳನ್ನು ರೂಪಿಸುವಂತೆ ಮುಖ್ಯಮಂತ್ರಿಗಳು ಆಡಳಿತವನ್ನು ಕೇಳಿದರು. ರಾಜ್ಯದಲ್ಲಿ ಸಾಮಾನ್ಯ ಜನರಲ್ಲಿ ಭಾರತೀಯ ಸಂಸ್ಕೃತಿ ಮತ್ತು ತತ್ವಜ್ಞಾನವನ್ನು ಹರಡಲು ರಾಜ್ಯದಲ್ಲಿ ಮಾನಸ ಜಯಂತಿಯಂದು ಗೀತಾ ಮಹೋತ್ಸವವನ್ನು ಆಚರಿಸಲು ಕ್ರಿಯಾ ಯೋಜನೆ ಮಾಡಲು ಇಲಾಖೆಗೆ ತಿಳಿಸಲಾಯಿತು.

ರಾಮ ಮತ್ತು ಕಷ್ಣನಿಗೆ ಸಂಬಂಧಿಸಿದ ಸ್ಥಳಗಳನ್ನು ಸ್ಥಳೀಯ ಚುನಾಯಿತ ಪ್ರತಿನಿಧಿಗಳ ಸಹಾಯದಿಂದ ಅಭಿವದ್ಧಿಪಡಿಸಬೇಕು ಎಂದು ಯಾದವ್ ಹೇಳಿದರು. ರಾಜ್ಯದಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಿದ್ದು, ಪ್ರವಾಸಿ ಸ್ಥಳಗಳ ಬ್ಯಾಂಡಿಂಗ್‌ನ ಅಗತ್ಯವನ್ನು ಅವರು ಒತ್ತಿ ಹೇಳಿದರು. ವಿವಿಧ ವಸ್ತು ಸಂಗ್ರಹಾಲಯಗಳ ಮೂಲಕ ಸ್ಥಳೀಯ ಉತ್ಪನ್ನಗಳು ಮತ್ತು ಧಾರ್ಮಿಕ ಪ್ರವಾಸೋದ್ಯಮವನ್ನು ಉತ್ತೇಜಿಸಬೇಕು ಎಂದು ಸಿಎಂ ಅಧಿಕಾರಿಗಳಿಗೆ ಸೂಚಿಸಿದರು.

11 ನೇ ಶತಮಾನದ ಪರಮಾರ ರಾಜವಂಶದ ರಾಜ ರಾಜ ಭೋಜ್ ಮತ್ತು ದಂತಕಥೆಯಾದ ವಿಕ್ರಮಾದಿತ್ಯನಿಗೆ ಸಮರ್ಪಿತವಾದ ಪ್ರವೇಶ ದ್ವಾರಗಳನ್ನು ಸ್ಥಾಪಿಸಲು ಯೋಜನೆಗಳನ್ನು ರೂಪಿಸಲು ಸೂಚಿಸಿದರು. ಭಾರತೀಯ ಸಾಹಿತ್ಯದಲ್ಲಿ ರಾಜನನ್ನು ಉಲ್ಲೇಖಿಸಲಾಗಿದೆ. ಮಧ್ಯಪ್ರದೇಶದ ಸಂಸ್ಕೃತಿ, ಧಾರ್ಮಿಕ ಪ್ರಾಮುಖ್ಯತೆಯ ಸ್ಥಳಗಳ ಬಗ್ಗೆ ಜನರು ತಿಳಿದುಕೊಳ್ಳಲು ರಾಜ್ಯದ ಗಡಿಗಳಲ್ಲಿ ಪ್ರವೇಶ ದ್ವಾರಗಳನ್ನು ನಿರ್ಮಿಸಲು ಯಾದವ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು

ನೂತನ ಅಪರಾಧ ಕಾನೂನುಗಳ ಅನುಷ್ಠಾನ ಮುಂದೂಡಿ

ನವದೆಹಲಿ: ಜುಲೈ 1ರಿಂದ ಜಾರಿಗೆ ಬರಲಿರುವ ಮೂರು ಹೊಸ ಅಪರಾಧ ಕಾನೂನುಗಳ ಅನುಷ್ಠಾನ ಮುಂದೂಡಬೇಕು ಎಂದು ಕಾಂಗ್ರೇಸ್ ನಾಯಕ ಜೈರಾಮ್ ರಮೇಶ್ ಒತ್ತಾಯಿಸಿದ್ದಾರೆ. ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, '146 ಜನ ಸಂಸದರನ್ನು ಸಂಸತ್‌ನಿಂದ ಅಮಾನತು ಮಾಡಿದ್ದ ಸಂದರ್ಭದಲ್ಲಿ ಈ ಮೂರು ಮಸೂದೆಗಳನ್ನು ಅಂಗೀಕರಿಸಲಾಗಿದೆ' ಎಂದು ಹೇಳಿದ್ದಾರೆ.

'2023ರ ಡಿಸೆಂಬರ್ 25ರಂದು, ರಾಷ್ಟ್ರಪತಿಯವರು, ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಸಂಹಿತೆ ಕಾಯಿದೆಗಳಿಗೆ ತಮ್ಮ ಒಪ್ಪಿಗೆ ನೀಡಿದ್ದರು. ಈ ಮೂರು ನಿರ್ಣಾಯಕ ಮಸೂದೆಗಳನ್ನು ಯಾವುದೇ ಚರ್ಚೆ ಇಲ್ಲದೆಯೇ, ಏಕಪಕ್ಷೀಯವಾಗಿ ಅಂಗೀಕರಿಸಲಾಗಿದೆ. ಲೋಕಸಭೆಯ 100ರಷ್ಟು ಸದಸ್ಯರು ಸೇರಿದಂತೆ ಎರಡೂ ಸದನಗಳ ಒಟ್ಟು 146 ಸಂಸದರನ್ನು

ಕೈ ಕೊಟ್ಟ ಓಪನರ್ಸ್, ಹಾರ್ದಿಕ್ ಆಸರೆ!

■ ಸೂಪರ್ 8ನಲ್ಲೇ ಗರಿಷ್ಠ ರನ್ ಕಲೆಹಾಕಿದ ಟೀಂ ಇಂಡಿಯಾ! ■ ಅರ್ಧಶತಕ ಬಾರಿಸಿದ ಪಾಂಡ್ಯ!

ರೋಹಿತ್ ಶರ್ಮಾ 11 ಬಾಲ್‌ಗಳಲ್ಲಿ 23 ರನ್‌ಗಳಿಸಿ ಔಟಾದ್ರು. ಆದರೆ 3 ಫೋರ್ ಒಂದು ಭರ್ಜರಿ ಸಿಕ್ಸರ್ ಸಿಡಿಸಿ ಅಭಿಮಾನಿಗಳಲ್ಲಿ ಆಸೆ ಹುಟ್ಟಿಸಿದರು. ದೊಡ್ಡ ಸ್ಕೋರ್ ಮಾಡ್ತಾರೆ ಅಂದುಕೊಳ್ಳುವಾಗಲೇ ಔಟಾದ್ರು. ಕೊಹ್ಲಿ 37 ರನ್ ಗಳಿಸಿ ಔಟಾದ್ರೆ, ಪಂತ್ 36 ರನ್‌ಗಳಿಸಿ ಔಟಾದ್ರು.

ಜೂನ್ 22 ಶನಿವಾರ, 2024ರ ಐಸಿಸಿ ಟಿ20 ವಿಶ್ವಕಪ್‌ನ ಸೂಪರ್ 8ನಲ್ಲಿ ಟೀಂ ಇಂಡಿಯಾ ಎದುರು ಬಾಂಗ್ಲಾದೇಶ ಕಣಕ್ಕಿಳಿಯಿತು. ಟೀಮ್ ಇಂಡಿಯಾದ ಪ್ರದರ್ಶನ ಇಲ್ಲಿಯವರೆಗೆ ಅತ್ಯುತ್ತಮವಾಗಿದೆ. ರೋಹಿತ್ ಶರ್ಮಾ ನಾಯಕತ್ವದಲ್ಲಿ ಭಾರತ ತಂಡವು ಗ್ರೂಪ್ ಹಂತದಲ್ಲಿ 3 ಪಂದ್ಯಗಳನ್ನು ಮತ್ತು ಸೂಪರ್-8 ಹಂತದಲ್ಲಿ 1 ಪಂದ್ಯವನ್ನು ಗೆದ್ದಿದೆ. ಬಾಂಗ್ಲಾದೇಶದ ವಿರುದ್ಧ ಗೆದ್ರೆ ಟೀಂ ಇಂಡಿಯಾ ಸೆಮಿಸ್ ಹಾದಿ ಸುಲಭವಾಗಲಿದೆ. ಇನ್ನೂ ಈಗಾಗಲೇ ಟಾಸ್ ಗೆದ್ದಿರುವ ಬಾಂಗ್ಲಾ ತಂಡ ಬೌಲಿಂಗ್ ಆಯ್ಕೆ ಮಾಡಿಕೊಂಡಿತ್ತು. ಚೆನ್ನಾಗಿ ಆರಂಭ ಪಡೆದುಕೊಂಡಿದ್ದ ಟೀಂ ಇಂಡಿಯಾ ನಂತರ ಆಘಾತ ಎದುರಾಯ್ತು. ರೋಹಿತ್ ಶರ್ಮಾ ಬೇಗನೇ ಔಟಾದ್ರು.

ಟಿ20 ವಿಶ್ವಕಪ್ 2024 ಆರಂಭವಾಗಿನಿಂದಲೂ ಟೀಂ ಇಂಡಿಯಾ ಓಪನಿಂಗ್ ಮೇಲೆ ಫ್ಯಾನ್ಸ್ ಗರಂ ಆಗಿದ್ದರು. ಐಪಿಎಲ್‌ನಲ್ಲಿ ಅದ್ಭುತವಾಗಿ ಓಪನಿಂಗ್ ಮಾಡ್ತಿದ್ದ ಕೊಹ್ಲಿ ಇಲ್ಲಿ ಫೇಲ್ ಆಗ್ತಿದ್ದಾರೆ. ಪದೇ ಪದೇ ಇದೇ ಆಗುತ್ತಿದೆ. ಆದರೆ ಇಂದು ಮತ್ತೆ ರೋಹಿತ್ ಕೈ ಕೊಟ್ಟಿದ್ದಾರೆ. ಕೊಹ್ಲಿ-ರೋಹಿತ್ ಜೋಡಿಯಿಂದ ಈ ಟೂರ್ನಿಯಲ್ಲಿ ಹೆಚ್ಚು ರನ್ ಬಂದೇ ಇಲ್ಲ. ಹೀಗಾಗಿ ಇಂದು ಕೊಹ್ಲಿ ಬದಲು ಬೇರೆಯವರು ರೋಹಿತ್ ಜೊತೆ ಓಪನಿಂಗ್ ಮಾಡ್ತಾರೆ ಅಂತ ಫ್ಯಾನ್ಸ್ ಅಂದುಕೊಂಡಿದ್ದರು. ಆದರೆ ಮತ್ತೆ ಈ ಜೋಡಿಯೇ

ಟೀಂ ಇಂಡಿಯಾ ಓಪನಿಂಗ್ ಮೇಲೆ ಫ್ಯಾನ್ಸ್ ಗರಂ

ಓಪನಿಂಗ್ ಮಾಡಿತು. ಹಿಂದಿನ ಪಂದ್ಯಗಳಂತೆ ಈ ಪಂದ್ಯ ಆರಂಭಸ್ಲೋ ಆಗಿರಲಿಲ್ಲ. ಮೊದಲ ಬಾಲ್‌ನಿಂದಲೇ ಇಬ್ಬರು ದೊಡ್ಡ ಹೊಡೆತಗಳನ್ನು ಬಾರಿಸಿದರು. ಈ ಪ್ರಯತ್ನದಲ್ಲೇ ಮತ್ತೆ

ಬಾಂಗ್ಲಾದೇಶ: ತಂಝಿದ್ ಹಸನ್, ಲಿಟ್ಟನ್ ದಾಸ್(ಡಬ್ಲ್ಯೂ), ನಜ್ಮುಲ್ ಹೊಸೈನ್ ಶಾಂಟೊ(ಸಿ), ತೌಹಿದ್ ಹೃದಯೋಯ್, ಶಕೀಬ್ ಅಲ್ ಹಸನ್, ಮಹ್ಮುದುಲ್ಲಾ, ಜೇಕರ್ ಅಲಿ, ರಿಶಾದ್ ಹೊಸೈನ್, ಮಹೇದಿ ಹಸನ್, ತಂಝಿಮ್ ಹಸನ್ ಸಾಕಿಬ್, ಮುಸ್ತಫಿಜುರ್ ರಹಮಾನ್

ಭಾರತ: ರೋಹಿತ್ ಶರ್ಮಾ (ಸಿ), ವಿರಾಟ್ ಕೊಹ್ಲಿ, ರಿಷಭ್ ಪಂತ್ (ಡಬ್ಲ್ಯೂ), ಸೂರ್ಯಕುಮಾರ್ ಯಾದವ್, ಶಿವಂ ದುಬೆ, ಹಾರ್ದಿಕ್ ಪಾಂಡ್ಯ, ರವೀಂದ್ರ ಜಡೇಜಾ, ಅಕ್ಷರ್ ಪಟೇಲ್, ಅರ್ಷದೀಪ್ ಸಿಂಗ್, ಕುಲದೀಪ್ , ಜಸ್ಪ್ರೀತ್ ಬುಮ್ರಾ

ಸಿಕ್ಸರ್ ಬಾರಿಸಿ ಔಟಾದ ಸೂರ್ಯ!

ಕಳೆದ ಪಂದ್ಯದಲ್ಲಿ ಅರ್ಧ ಶತಕ ಬಾರಿಸಿದ್ದ ಸೂರ್ಯ ಇಂದಿನ ಪಂದ್ಯದಲ್ಲಿ ಎರಡು ಎಸೆತಗಳನ್ನು ಎದುರಿಸಿ ಔಟಾದ್ರು. ಮೊದಲ ಬಾಲ್ ಸಿಕ್ಸರ್ ಬಾರಿಸಿ ಆಸೆ ಮೂಡಿಸಿದ್ರು. ಆದ್ರೆ ಇದರ ಮುಂದಿನ ಬೌಲ್‌ನಲ್ಲಿ ಔಟ್ ಆಗುವ ಮೂಲಕ ನಿರಾಸೆ ಮೂಡಿಸಿದ್ರು. ಇನ್ನೂ ಶಿವಂ ದುಬೆ 34 ರನ್ ಬಾರಿಸಿ ಔಟಾದ್ರು.

ಅರ್ಧಶತಕ ಬಾರಿಸಿದ ಹಾರ್ದಿಕ್!

ಹಾರ್ದಿಕ್ ಪಾಂಡ್ಯ ಭರ್ಜರಿ ಕಮ್‌ಬ್ಯಾಕ್ ಮಾಡಿದ್ದಾರೆ. ಭರ್ಜರಿ ಅರ್ಧಶತಕ ಬಾರಿಸಿ ಟೀಂ ಇಂಡಿಯಾ 196 ರನ್‌ಗಳಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. ಟೀಂ ಇಂಡಿಯಾ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 196 ರನ್‌ಗಳಿಸಿದೆ. ಸೂಪರ್ 8ನಲ್ಲೇ ಗರಿಷ್ಠ ರನ್ ಇದಾಗಿದೆ. ಬಾಂಗ್ಲಾಗೆ ಗೆಲ್ಲಲು 197 ರನ್‌ಗಳ ಅವಶ್ಯಕತೆ ಇದೆ.

ಸ್ಟಾರ್ಕ್ ಸ್ಪಾರ್ಕ್ ಹೊಸ ವಿಶ್ವದಾಖಲೆ ಸೃಷ್ಟಿ

ಟಿ20 ವಿಶ್ವಕಪ್‌ನ 44ನೇ ಪಂದ್ಯದ ಮೂಲಕ ಆಸ್ಟ್ರೇಲಿಯಾ ವೇಗಿ ಮಿಚೆಲ್ ಸ್ಟಾರ್ಕ್ ಹೊಸ ವಿಶ್ವದಾಖಲೆ ನಿರ್ಮಿಸಿದ್ದಾರೆ. ಬಾಂಗ್ಲಾದೇಶ್ ವಿರುದ್ಧದ ಈ ಪಂದ್ಯದಲ್ಲಿ 4 ಓವರ್‌ಗಳನ್ನು ಎಸೆದಿದ್ದ ಸ್ಟಾರ್ಕ್ ಕೇವಲ 21 ರನ್ ನೀಡಿ 1 ವಿಕೆಟ್ ಕಬಳಿಸಿದ್ದರು.

ಈ ಒಂದು ವಿಕೆಟ್‌ನೊಂದಿಗೆ ಐಸಿಸಿ ವಿಶ್ವಕಪ್ ಇತಿಹಾಸದಲ್ಲೇ ಅತ್ಯಧಿಕ ವಿಕೆಟ್ ಕಬಳಿಸಿದ ಬೌಲರ್ ಎಂಬ ವಿಶ್ವದಾಖಲೆ ಮಿಚೆಲ್ ಸ್ಟಾರ್ಕ್ ಪಾಲಾಯಿತು. ಇದಕ್ಕೂ ಮುನ್ನ ಈ ದಾಖಲೆ ಲಸಿತ್ ಮಾಲಿಂಗ ಹೆಸರಿನಲ್ಲಿತ್ತು.

ಶ್ರೀಲಂಕಾದ ಮಾಜಿ ವೇಗಿ ಲಸಿತ್ ಮಾಲಿಂಗ ಟಿ20+ಏಕದಿನ ವಿಶ್ವಕಪ್‌ಗಳಲ್ಲಿ 59 ಪಂದ್ಯಗಳನ್ನಾಡಿದ್ದಾರೆ. ಈ ವೇಳೆ 94 ವಿಕೆಟ್ ಕಬಳಿಸುವ ಮೂಲಕ ವಿಶ್ವಕಪ್ ಇತಿಹಾಸದಲ್ಲೇ ಅತೀ ಹೆಚ್ಚು ವಿಕೆಟ್ ಪಡೆದ ಬೌಲರ್ ಎನಿಸಿಕೊಂಡಿದ್ದರು.

ಇದೀಗ ಈ ದಾಖಲೆಯನ್ನು ಮುರಿಯುವಲ್ಲಿ ಆಸ್ಟ್ರೇಲಿಯಾದ ಎಡಗೈ ವೇಗಿ ಸ್ಟಾರ್ಕ್ ಯಶಸ್ವಿಯಾಗಿದ್ದಾರೆ. ಟಿ20+ಏಕದಿನ ವಿಶ್ವಕಪ್‌ಗಳಲ್ಲಿ ಒಟ್ಟು 52 ಪಂದ್ಯಗಳನ್ನಾಡಿರುವ ಮಿಚೆಲ್ ಸ್ಟಾರ್ಕ್ ಒಟ್ಟು 95 ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಈ ಮೂಲಕ ವಿಶ್ವಕಪ್ ಇತಿಹಾಸದಲ್ಲೇ ಅತೀ ಹೆಚ್ಚು ವಿಕೆಟ್ ಪಡೆದ ಬೌಲರ್ ಎಂಬ ದಾಖಲೆ ನಿರ್ಮಿಸಿದ್ದಾರೆ.

ಇನ್ನು ವಿಶ್ವಕಪ್‌ನಲ್ಲಿ 100 ವಿಕೆಟ್‌ಗಳ ಸಾಧನೆ ಮಾಡಲು ಮಿಚೆಲ್ ಸ್ಟಾರ್ಕ್‌ಗೆ ಬೇಕಿರುವುದು ಕೇವಲ 5 ವಿಕೆಟ್‌ಗಳು ಮಾತ್ರ.

ಆಸ್ಟ್ರೇಲಿಯಾ ತಂಡವು ಟಿ20 ವಿಶ್ವಕಪ್‌ನ ಸೂಪರ್-8 ಪಂದ್ಯದಲ್ಲಿ ಭಾರತ ಮತ್ತು ಅಫ್ಘಾನಿಸ್ತಾನ್ ವಿರುದ್ಧ ಆಡಬೇಕಿದ್ದು, ಈ ಪಂದ್ಯದ ಮೂಲಕ ಮಿಚೆಲ್ ಸ್ಟಾರ್ಕ್ ಹೊಸ ಇತಿಹಾಸ ನಿರ್ಮಿಸಲಿದ್ದಾರಾ ಕಾದು ನೋಡಬೇಕಿದೆ.

ಪೂರನ್ ಪವರ್‌ಗೆ ಕ್ರಿಸ್ ಗೇಲ್ ವಿಶ್ವದಾಖಲೆ ಉಡೀಸ್

ಎಡಗೈ ದಾಂಡಿಗ ನಿಕೋಲಸ್

ಟಿ20 ವಿಶ್ವಕಪ್‌ನಲ್ಲಿ ವೆಸ್ಟ್ ಇಂಡೀಸ್ ತಂಡದ ಎಡಗೈ ದಾಂಡಿಗ ನಿಕೋಲಸ್ ಪೂರನ್ ಹೊಸ ವಿಶ್ವದಾಖಲೆ ನಿರ್ಮಿಸಿದ್ದಾರೆ. ಅದು ಸಹ ಟಿ20 ಕ್ರಿಕೆಟ್‌ನ ದಾಖಲೆಗಳ ಸರದಾರ ಕ್ರಿಸ್ ಗೇಲ್ ಹೆಸರಿನಲ್ಲಿದ್ದ ವಿಶ್ವದಾಖಲೆಯನ್ನು ಉಡೀಸ್ ಮಾಡುವ ಮೂಲಕ ಎಂಬುದು ವಿಶೇಷ. ಬಾರ್ಬಡೋಸ್‌ನ ಕೆನ್ಸಿಂಗ್ಟನ್ ಓವಲ್ ಮೈದಾನದಲ್ಲಿ ನಡೆದ ಯುಎಸ್‌ಎ ವಿರುದ್ಧದ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ಪರ 3ನೇ ಕ್ರಮಾಂಕದಲ್ಲಿ ಕಣಕ್ಕಿಳಿದ ನಿಕೋಲಸ್ ಪೂರನ್ 12 ಎಸೆತಗಳಲ್ಲಿ 27 ರನ್ ಚಚ್ಚಿದ್ದರು. ಈ ಸ್ಫೋಟಕ ಇನಿಂಗ್ಸ್‌ನಲ್ಲಿ ಪೂರನ್ ಬ್ಯಾಟ್‌ನಿಂದ 1 ಫೋರ್ ಹಾಗೂ 3 ಭರ್ಜರಿ ಸಿಕ್ಸ್‌ಗಳು ಮೂಡಿಬಂದಿತ್ತು.

ಈ ಮೂರು ಸಿಕ್ಸ್‌ಗಳೊಂದಿಗೆ ಇದೀಗ ಟಿ20 ವಿಶ್ವಕಪ್ ಆವೃತ್ತಿಯೊಂದರಲ್ಲಿ ಅತ್ಯಧಿಕ ಸಿಕ್ಸ್ ಸಿಡಿಸಿದ ಬ್ಯಾಟರ್ ಎಂಬ ವಿಶ್ವದಾಖಲೆಯನ್ನು ನಿಕೋಲಸ್ ಪೂರನ್ ತಮ್ಮದಾಗಿಸಿಕೊಂಡಿದ್ದಾರೆ. ಇದಕ್ಕೂ ಮುನ್ನ ಈ ದಾಖಲೆ ಕ್ರಿಸ್ ಗೇಲ್ ಹೆಸರಿನಲ್ಲಿತ್ತು. 2012 ರ ಟಿ20 ವಿಶ್ವಕಪ್‌ನಲ್ಲಿ ವೆಸ್ಟ್ ಇಂಡೀಸ್ ಪರ ಆರಂಭಿಕನಾಗಿ ಬ್ಯಾಟ್ ಬೀಸಿದ್ದ ಕ್ರಿಸ್ ಗೇಲ್ ಬರೋಬ್ಬರಿ 16 ಸಿಕ್ಸ್ ಸಿಡಿಸಿ ಈ ದಾಖಲೆ ನಿರ್ಮಿಸಿದ್ದರು. ಇದೀಗ 12 ವರ್ಷಗಳ ಬಳಿಕ ಈ ದಾಖಲೆಯನ್ನು ಮುರಿಯುವಲ್ಲಿ ಪೂರನ್ ಯಶಸ್ವಿಯಾಗಿದ್ದಾರೆ. ಈ ಬಾರಿಯ ಟಿ20 ವಿಶ್ವಕಪ್‌ನಲ್ಲಿ 6 ಇನಿಂಗ್ಸ್ ಆಡಿರುವ ನಿಕೋಲಸ್ ಪೂರನ್ ಒಟ್ಟು 153 ಎಸೆತಗಳಲ್ಲಿ 227 ರನ್ ಕಲೆಹಾಕಿದ್ದಾರೆ. ಈ ವೇಳೆ 15 ಫೋರ್ ಮತ್ತು 17 ಸಿಕ್ಸ್‌ಗಳನ್ನು ಸಿಡಿಸಿದ್ದಾರೆ. ಈ ಹದಿನೇಳು ಸಿಕ್ಸ್‌ಗಳೊಂದಿಗೆ ಕ್ರಿಸ್ ಗೇಲ್ ಹೆಸರಿನಲ್ಲಿದ್ದ ವಿಶ್ವದಾಖಲೆಯನ್ನು ಅಳಿಸಿ ಹಾಕಿದ್ದಾರೆ. ಹಾಗೆಯೇ ಟಿ20 ಕ್ರಿಕೆಟ್‌ನಲ್ಲಿ ವೆಸ್ಟ್ ಇಂಡೀಸ್ ಪರ ಅತ್ಯಧಿಕ ಸಿಕ್ಸ್ ಸಿಡಿಸಿದ ದಾಖಲೆ ಕೂಡ ಪೂರನ್ ಪಾಲಾಗಿದೆ. ಇದಕ್ಕೂ ಮುನ್ನ ಈ ದಾಖಲೆ ಕ್ರಿಸ್ ಗೇಲ್ ಹೆಸರಿನಲ್ಲಿತ್ತು. ವೆಸ್ಟ್ ಇಂಡೀಸ್ ಪರ 79 ಟಿ20 ಪಂದ್ಯಗಳನ್ನಾಡಿರುವ ಗೇಲ್ ಒಟ್ಟು 124 ಸಿಕ್ಸ್‌ಗಳನ್ನು ಬಾರಿಸಿ ಈ ದಾಖಲೆ ಬರೆದಿದ್ದರು. ಈ ದಾಖಲೆ ಮುರಿಯುವಲ್ಲಿಯೂ ಪೂರನ್ ಯಶಸ್ವಿಯಾಗಿದ್ದಾರೆ. ವೆಸ್ಟ್ ಇಂಡೀಸ್ ಪರ ಈವರೆಗೆ 93 ಟಿ20 ಪಂದ್ಯಗಳನ್ನಾಡಿರುವ ನಿಕೋಲಸ್ ಪೂರನ್ ಒಟ್ಟು 131 ಸಿಕ್ಸ್‌ಗಳನ್ನು ಸಿಡಿಸಿದ್ದಾರೆ. ಈ ಮೂಲಕ ಟಿ20 ಕ್ರಿಕೆಟ್‌ನಲ್ಲಿ ವೆಸ್ಟ್ ಇಂಡೀಸ್ ಪರ ಅತೀ ಹೆಚ್ಚು ಸಿಕ್ಸ್ ಬಾರಿಸಿದ ಬ್ಯಾಟರ್ ಎಂಬ ದಾಖಲೆಯನ್ನು ತಮ್ಮದಾಗಿಸಿಕೊಂಡಿದ್ದಾರೆ.

ವೆಸ್ಟ್ ಇಂಡೀಸ್‌ಗೆ ಆಘಾತ ಸ್ಟಾರ್ ಆಟಗಾರ ವಿಶ್ವಕಪ್‌ನಿಂದ ಔಟ್

ಟಿ20 ವಿಶ್ವಕಪ್‌ನ ನಿರ್ಣಾಯಕ ಪಂದ್ಯಕ್ಕೂ ಮುನ್ನ ವೆಸ್ಟ್ ಇಂಡೀಸ್ ತಂಡಕ್ಕೆ ಆಘಾತ ಎದುರಾಗಿದೆ. ತಂಡದ ಸ್ಟಾರ್ ಆಟಗಾರ ಬ್ರಾಂಡನ್ ಕಿಂಗ್ ಟೂರ್ನಿಯಿಂದ ಹೊರಬಿದ್ದಿದ್ದಾರೆ. ಇಂಗ್ಲೆಂಡ್ ವಿರುದ್ಧದ ಪಂದ್ಯದ ವೇಳೆ ಬ್ರಾಂಡನ್ ಸೈಡ್ ಸ್ಟ್ರೈನ್ ನೋವಿನ ಸಮಸ್ಯೆಗೆ ಒಳಗಾಗಿದ್ದರು. ಇಂಗ್ಲೆಂಡ್ ವಿರುದ್ಧ ಈ ಪಂದ್ಯದಲ್ಲಿ ಆರಂಭಿಕನಾಗಿ ಕಣಕ್ಕಿಳಿದಿದ್ದ ಬ್ರಾಂಡನ್ ಕಿಂಗ್ ಬ್ಯಾಟಿಂಗ್ ಮಾಡುವಾಗ ಗಾಯಗೊಂಡಿದ್ದರಿಂದ ಅರ್ಧದಲ್ಲೇ ಪೆವಿಲಿಯನ್‌ಗೆ ಮರಳಿದ್ದರು. ಇದೀಗ ವೈದ್ಯಕೀಯ ವರದಿಯಲ್ಲಿ ಅವರು ಸೈಡ್ ಸ್ಟ್ರೈನ್ ಸಮಸ್ಯೆಗೆ ಒಳಗಾಗಿರುವುದು ತಿಳಿದು ಬಂದಿದ್ದು, ಹೀಗಾಗಿ ಹೆಚ್ಚಿನ ವಿಶ್ರಾಂತಿ ಸೂಚಿಸಲಾಗಿದೆ.

ಹಾಗಾಗಿ ವೆಸ್ಟ್ ಇಂಡೀಸ್ ತಂಡದ ಮುಂದಿನ ಪಂದ್ಯಗಳಲ್ಲಿ ಬ್ರಾಂಡನ್ ಕಿಂಗ್ ಕಣಕ್ಕಿಳಿಯುವುದಿಲ್ಲ.

ಕಿಂಗ್ ಹೊರಗುಳಿಯುತ್ತಿದ್ದಂತೆ ವೆಸ್ಟ್ ಇಂಡೀಸ್ ಬದಲಿ ಆಟಗಾರನನ್ನು ಘೋಷಿಸಿದ್ದು, ಅದರಂತೆ ಎಡಗೈ ದಾಂಡಿಗ ಕೈಲ್ ಮೇಯರ್ಸ್ ಶನಿವಾರ ತಂಡವನ್ನು ಕೂಡಿಕೊಳ್ಳಲಿದ್ದಾರೆ ಎಂದು ವರದಿಯಾಗಿದೆ. ಇನ್ನು ವೆಸ್ಟ್ ಇಂಡೀಸ್ ತಂಡವು ತನ್ನ ಮುಂದಿನ ಪಂದ್ಯದಲ್ಲಿ ಸೌತ್ ಆಫ್ರಿಕಾ ತಂಡವನ್ನು ಎದುರಿಸಲಿದೆ. ಈ ಪಂದ್ಯವು ವಿಂಡೀಸ್ ಪಾಲಿಗೆ ನಿರ್ಣಾಯಕ. ಏಕೆಂದರೆ ಈ ಮ್ಯಾಚ್‌ನಲ್ಲಿ ಗೆದ್ದರೆ ಮಾತ್ರ ವೆಸ್ಟ್ ಇಂಡೀಸ್ ತಂಡಕ್ಕೆ ಸೆಮಿಫೈನಲ್‌ಗೇರಲು ಅವಕಾಶ ಇರಲಿದೆ. ಒಂದು ವೇಳೆ ಸೌತ್ ಆಫ್ರಿಕಾ ವಿರುದ್ಧ ವೆಸ್ಟ್ ಇಂಡೀಸ್ ಸೋತರೆ, ಇಂಗ್ಲೆಂಡ್ ತಂಡಕ್ಕೆ ಸೆಮಿಫೈನಲ್‌ಗೇರಲು ಅವಕಾಶ ಹೆಚ್ಚಾಗಲಿದೆ.

ರಕ್ಷಿತ್ ಶೆಟ್ಟಿ ನಿರ್ಮಾಣ

ಇಬ್ಬನಿ ತಬ್ಬಿದ ಇಳೆಯಲಿ ರೊಮ್ಯಾಂಟಿಕ್ ಸಾಂಗ್ ಔಟ್

ಸಿಂಪಲ್ ಸ್ಟಾರ್ ರಕ್ಷಿತ್ ಶೆಟ್ಟಿ ನಟನೆಯ 'ಇಬ್ಬನಿ ತಬ್ಬಿದ ಇಳೆಯಲಿ' ಸಿನಿಮಾದ ರೊಮ್ಯಾಂಟಿಕ್ ಸಾಂಗ್‌ವೊಂದು ಇದೀಗ ಬಿಡುಗಡೆಯಾಗಿದೆ. ನಟಿ ಅಂಕಿತಾ ಅಮರ್ ಜೊತೆ ವಿಹಾನ್ ಡ್ಯುಯೇಟ್ ಹಾಡಿದ್ದು, ಓ ಅನಾಹಿತ ಹಾಡಿಗೆ ಉತ್ತಮ ರೆಸ್ಪಾನ್ಸ್ ಸಿಕ್ಕಿದೆ. ರಕ್ಷಿತ್ ಶೆಟ್ಟಿ ಹೊಸ ಪ್ರೇಮಕಥೆಯನ್ನು ನಿರ್ಮಾಣದ ಮೂಲಕ ತೋರಿಸಲು ಹೊರಟಿದ್ದಾರೆ. ವಿಹಾನ್ ಮತ್ತು ಅಂಕಿತಾ ಈ ಸುಂದರ ಜೋಡಿ ರೊಮ್ಯಾಂಟಿಕ್ ಹಾಡಿಗೆ ಹೆಜ್ಜೆ ಹಾಕಿದ್ದಾರೆ. 'ಓ ಅನಾಹಿತ' ಎಂಬ ಹಾಡು ಕಲರ್‌ಫುಲ್ ಆಗಿ ಮೂಡಿ ಬಂದಿದೆ. ಹಾಡಿನ ಲಿರಿಕ್ಸ್ ಮ್ಯೂಸಿಕ್ ಪ್ರಿಯರಿಗೆ ನಾಟುವಂತಿದೆ. ಚಂದ್ರಜಿತ್ ಬೆಳ್ಳಿಯಪ್ಪ ನಿರ್ದೇಶನದ ಈ ಚಿತ್ರದಲ್ಲಿ ವಿಹಾನ್, ಅಂಕಿತಾ ಅಮರ್, ಗಿರಿಜಾ ಶೆಟ್ಟರ್, ಮಯೂರಿ ನಟರಾಜ್ ಸೇರಿದಂತೆ ಅನೇಕರು ನಟಿಸಿದ್ದಾರೆ. ಅಂದಹಾಗೆ, ಈ ಸುಂದರ ಪ್ರೇಮಕಥೆಯ ಮೂಲಕ ವಿಹಾನ್ ಮತ್ತು ಅಂಕಿತಾ ಜೋಡಿ ಪ್ರೇಕ್ಷಕರಿಗೆ ಪರಿಚಯವಾಗುತ್ತಿದೆ. ಈ ಹೊಸ ಜೋಡಿ ನೋಡುಗರಿಗೆ ಮೋಡಿ ಮಾಡುತ್ತಾ ಎಂದು ಕಾಯಬೇಕಿದೆ.

ಬಿಗ್ ಬಾಸ್ ಒಟಿಟಿ ಸ್ಟಾರ್ಟ್ ಸ್ಪರ್ಧಿಗಳ ಲಿಸ್ಟ್ ಔಟ್

ಕಿರುತೆರೆಯ ಅತೀ ದೊಡ್ಡ ರಿಯಾಲಿಟಿ ಶೋ ಅಂದರೆ ಅದು ಬಿಗ್ ಬಾಸ್. ಇದೀಗ ಬಿಗ್ ಬಾಸ್ ಹಿಂದಿ ಒಟಿಟಿ- 3 ಮೂಲಕ ಭಾರೀ ಮನರಂಜನೆ ಕೊಡಲು ಸಿದ್ಧವಾಗುತ್ತಿದೆ. ಸಲ್ಮಾನ್ ಖಾನ್ ಬದಲು ಅನಿಲ್ ಕಪೂರ್ ನಿರೂಪಕನಾಗಿ ಎಂಟ್ರಿ ಕೊಡುತ್ತಿದ್ದಾರೆ. ದೊಡ್ಮನೆ ಆಟಕ್ಕೆ ಯಾರೆಲ್ಲಾ ಸ್ಟಾರ್‌ಗಳು ಸ್ಪರ್ಧಿಗಳಾಗಿ ಬರುತ್ತಾರೆ. ಇಲ್ಲಿದೆ ಮಾಹಿತಿ.

ಜೂನ್ 21ರಿಂದ ಜಿಯೋ ಸಿನಿಮಾ ಒಟಿಟಿಯಲ್ಲಿ ರಾತ್ರಿ 9 ಗಂಟೆಯಿಂದ ಪ್ರಸಾರವಾಗಲಿದೆ. ಈ ಶೋ ಬರಲಿರುವ ಕೆಲ ಸ್ಪರ್ಧಿಗಳ ಹೆಸರು ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಅದರಲ್ಲಿ ಹಿಂದಿ ಮತ್ತು ತೆಲುಗಿನಲ್ಲಿ ಗುರುತಿಸಿಕೊಂಡಿರುವ ಸಾಯಿ ಕೇತನ್ ರಾವ್ ಬಿಗ್ ಬಾಸ್ ಒಟಿಟಿಗೆ ಬರಲಿದ್ದಾರೆ ಎನ್ನಲಾಗಿದೆ.

ಕಿರುತೆರೆ ನಟಿ ಕಮ್ ಮಾಡೆಲ್ ಆಗಿರುವ ಪೌಲೋಮಿ ಪೋಲೋ ದಾಸ್ ದೊಡ್ಮನೆ ಆಟಕ್ಕೆ ಎಂಟ್ರಿ ಕೊಡಲಿದ್ದಾರಂತೆ. ಜನಪ್ರಿಯ ನಾಗಿನ್ ಸೀರಿಯಲ್ಲಿ ಈ ನಟಿ ಅಭಿನಯಿಸಿದ್ದರು. ಹಾಟ್ ಬೆಡಗಿ ಸನಾ ಖಾನ್ ಮತ್ತು ಸನಾ ಮಕ್ಬುಲ್ ಹೆಸರು ಕೂಡ ಕೇಳಿ ಬರುತ್ತಿದೆ. ಬಿಗ್ ಬಾಸ್ ಒಟಿಟಿಗೆ ಇವರು ಕೂಡ ಬರಲಿದ್ದಾರೆ ಎನ್ನಲಾಗಿದೆ. ಉತ್ತರ ಪ್ರದೇಶದ ಸೋಷಿಯಲ್ ಮೀಡಿಯಾ ಸ್ಟಾರ್ ಶಿವಾನಿ ಕುಮಾರಿ ಮತ್ತು ವಿಶಾಲ್ ಪಾಂಡೆ ಕೂಡ ಇರಲಿದ್ದಾರೆ. ಇನ್ನೂಳಿದಂತೆ ಚಂದ್ರಿಕಾ ಗೇರಾ ದೀಕ್ಷಿತ್, ನಾವೇದ್ ಶೇಖ್, ನೀರಜ್ ಗೋಯತ್, ಸೋನಮ್ ಖಾನ್ ಸೇರಿದಂತೆ ಹಲವರ ಹೆಸರು ಸದ್ದು ಮಾಡುತ್ತಿದೆ. ಎಲ್ಲಾದಕ್ಕೂ ಉತ್ತರ ಇಂದು ರಾತ್ರಿ ಸಿಗಲಿದೆ. ಸಲ್ಮಾನ್ ಬದಲು ಅನಿಲ್ ಕಪೂರ್ ಮೊದಲ ಬಾರಿಗೆ ಬಿಗ್ ಬಾಸ್ ಹೋಸ್ಟ್ ಆಗಿ ಕಾಣಿಸಿಕೊಳ್ತಿದ್ದಾರೆ. ಹಾಗಾಗಿ ಶೋ ಮೇಲೆ ಸಾಕಷ್ಟು ನಿರೀಕ್ಷೆಯಿದೆ.

ಚೌಕಿದಾರ್‌ಗೆ ಡೈಲಾಗ್ ಕಿಂಗ್ ಸಾಯಿಕುಮಾರ್ ಎಂಟ್ರಿ

ಟೈಟಲ್ ಮೂಲಕ ಪ್ರೇಕ್ಷಕರನ್ನು ಒಂಟಿಗಾಲಲ್ಲಿ ನಿಲ್ಲಿಸಿರುವ ದಿಯಾ ಖ್ಯಾತಿಯ ಪೃಥ್ವಿ ಅಂಬಾರ್ ನಟಿಸುತ್ತಿರುವ ಚೌಕಿದಾರ್ ಸಿನಿಮಾ ತಂಡದಿಂದ ಮತ್ತೊಂದು ಹೊಸ ಅಪ್ ಡೇಟ್ ಸಿಕ್ಕಿದೆ.

ಇತ್ತೀಚೆಗಷ್ಟೇ ಟೈಟಲ್ ಬಿಡುಗಡೆ ಮಾಡಿದ್ದ ಚಿತ್ರತಂಡವೀಗ ಡೈಲಾಗ್ ಕಿಂಗ್ ಸಾಯಿಕುಮಾರ್ ಅವರನ್ನು ತಮ್ಮ ಬಳಗಕ್ಕೆ ಸ್ವಾಗತಿಸಿದೆ. ಚೌಕಿದಾರ್ ಸಿನಿಮಾಕ್ಕೀಗ ಬಹುಭಾಷಾ ನಟ ಸಾಯಿಕುಮಾರ್ ಎಂಟ್ರಿ ಕೊಟ್ಟಿದ್ದಾರೆ. ಆದ್ರೆ ಡೈಲಾಗ್ ಕಿಂಗ್ ಪಾತ್ರದ ಬ